ಶುಕ್ರವಾರ, ಡಿಸೆಂಬರ್ 3, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 334 | ಪುಟ 14

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

‘ನಟ ಭಯಂಕರ’ನಾಗಿ ತೆರೆಯ ಮೇಲೆ ‘ಕರ್ನಾಟಕದ ಅಳಿಯ’ನಾಗುತ್ತಿರುವ ಬಿಗ್‌ಬಾಸ್ ವಿಜೇತ ಪ್ರಥಮ್ ನಿರ್ದೇಶನಕ್ಕೆ ಅಪ್ಪು ಮೆಚ್ಚುಗೆಯೂ ಸಿಕ್ಕಿದೆಯಂತೆ...



ಆಳ-ಅಗಲ ಬೆಂಬಿಡದ ರಕ್ತಹೀನತೆ

ಸಂಗಾತಿ ಅರಸಿ ತವರಿನತ್ತ ಕುಶ 4

ಮೋದಿಯನ್ನು ಕ್ಷಮಿಸದಿರಿ: ಪ್ರಿಯಾಂಕಾ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
58,461 ▲	17,401 ▲	₹49,150 (ಬೆಂಗಳೂರು) ▼	₹62,600 (ಬೆಂಗಳೂರು) ▼	75.03 ▼

ದೇಶದ ಮೊದಲ 2 ಪ್ರಕರಣ ಬೆಂಗಳೂರಿನಲ್ಲಿ ● 482 ಮಂದಿ ಸಂಪರ್ಕಿತರು

ರಾಜ್ಯದಲ್ಲಿ ಓಮೈಕ್ರಾನ್ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಗತ್ತಿನ ಕೆಲವು ರಾಷ್ಟ್ರಗಳಲ್ಲಿ ಕಾಣಿಸಿಕೊಂಡಿದ್ದ ಕೊರೊನಾದ ರೂಪಾಂತರ ತಳಿ ‘ಓಮೈಕ್ರಾನ್’ ಈಗ ಬೆಂಗಳೂರಿನ ಮೂಲಕ ಭಾರತಕ್ಕೂ ಕಾಲಿಟ್ಟಿದೆ. ಈ ವೈರಾಣು ದೃಢಪಟ್ಟ ಮೊದಲ ಎರಡು ಪ್ರಕರಣಗಳು ನಗರದಲ್ಲಿ ಗುರುವಾರ ಪತ್ತೆಯಾಗಿವೆ.




ಓಮೈಕ್ರಾನ್ ದೃಢಪಟ್ಟ ಇಬ್ಬರೂ ಪುರುಷರಾಗಿದ್ದು, ಮೊದಲನೇ ವ್ಯಕ್ತಿ ದಕ್ಷಿಣ ಆಫ್ರಿಕಾದ ಪ್ರಜೆ. ಇನ್ನೊಬ್ಬರು ಬೆಂಗಳೂರಿನ ವೈದ್ಯ. ಇಬ್ಬರೂ ಕೋವಿಡ್ ಲಸಿಕೆಯ ಎರಡೂ ಡೋಸ್‌ಗಳನ್ನು ಪಡೆದಿದ್ದರು. ಬೆಂಗಳೂರಿನ ವೈದ್ಯ ಇತ್ತೀಚೆಗೆ ಯಾವುದೇ ದೇಶಕ್ಕೆ ಪ್ರವಾಸ ಕೈಗೊಂಡಿಲ್ಲ. ಹಾಗಿದ್ದರೂ ಅವರು ರೂಪಾಂತರಗೊಂಡ ವೈರಾಣುವಿನ ಸೋಂಕಿಗೆ ಒಳಗಾಗಿದ್ದಾರೆ. ಅವರಿಗೆ ಸೊಂಕು ತಗುಲಿದ ಮೂಲವನ್ನು ಪತ್ತೆ ಹಚ್ಚುವುದು ಆರೋಗ್ಯ ಇಲಾಖೆ, ಸರ್ಕಾರಕ್ಕೆ ಸವಾಲಾಗಿ ಪರಿಣಮಿಸಿದೆ.

ಓಮೈಕ್ರಾನ್ ಕಾಣಿಸಿಕೊಂಡಿರುವ ವೈದ್ಯರ ನೇರ ಸಂಪರ್ಕದಲ್ಲಿದ್ದ ಮೂವರಿಗೆ ಹಾಗೂ ಪರೋಕ್ಷ ಸಂಪರ್ಕ ಹೊಂದಿದ್ದ ಇಬ್ಬರಿಗೆ ಕೋವಿಡ್ ಇರುವುದು ದೃಢಪಟ್ಟಿದೆ.

8ನೇ ಪುಟ ನೋಡಿ

ಕೋವಿಡ್: ಹೊಸ ಮಾರ್ಗಸೂಚಿ ಇಂದು

‘ಎರಡು ಓಮೈಕ್ರಾನ್ ಪ್ರಕರಣಗಳು ಕರ್ನಾಟಕದಲ್ಲಿ ಪತ್ತೆಯಾಗಿರುವ ಬೆನ್ನಲ್ಲೆ, ಸೋಂಕು ಹರಡುವುದನ್ನು ತಡೆಯಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಶುಕ್ರವಾರ ಬೆಂಗಳೂರಿನಲ್ಲಿ ಹಿರಿಯ ಅಧಿಕಾರಿಗಳು ಹಾಗೂ ತಜ್ಞರ ಸಭೆ ನಡೆಸಿ ಹೊಸ ಮಾರ್ಗಸೂಚಿ ರೂಪಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.



ನವದೆಹಲಿಯಲ್ಲಿ ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, ಓಮೈಕ್ರಾನ್ ಪ್ರಕರಣ ಪತ್ತೆಯಾಗಿರುವುದನ್ನು ಕೇಂದ್ರ ಸರ್ಕಾರ ದೃಢ ಪಡಿಸಿದೆ. ಆದರೆ, ವಿವರವಾದ ಪರೀಕ್ಷಾ ವರದಿ ಬಂದಿಲ್ಲ. ಪ್ರಕರಣಗಳ ಸಂಪೂರ್ಣ ವಿವರ ಪಡೆಯುವಂತೆ ರಾಜ್ಯದ ಆರೋಗ್ಯ ಸಚಿವರು ಹಾಗೂ ಮುಖ್ಯ ಕಾರ್ಯದರ್ಶಿಗೆ ಸೂಚಿಸಲಾಗಿದೆ. ಹೊಸ ಹೊಸ ತಳಿಗಳಿಂದ ಸೋಂಕು ಹರಡುವುದನ್ನು ನಿಯಂತ್ರಿಸುವ ಕುರಿತು ಅನುಸರಿಸಬೇಕಾದ ಕಾರ್ಯತಂತ್ರಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗುವುದು’ ಎಂದರು.

ಯಾರಿಗೂ ಆತಂಕ ಬೇಡ– ಸಚಿವ ಸುಧಾಕರ್: ‘ಓಮೈಕ್ರಾನ್ ಸೋಂಕಿತರ ರೋಗ ಲಕ್ಷಣಗಳು ಲಘು ಪ್ರಮಾಣದ್ದಾಗಿದ್ದು, ಯಾರೂ ಆತಂಕಕ್ಕೆ ಒಳಗಾಗಬೇಕಾಗಿಲ್ಲ’ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಹೇಳಿದರು. ‘ಡೆಲ್ಟಾ ವೈರಾಣು ತೀವ್ರ ಸ್ವರೂಪದ್ದಾಗಿತ್ತು. ಅದಕ್ಕೆ ಹೋಲಿಸಿದಾಗ ಇದು ಗಂಭೀರ ಸ್ವರೂಪದ್ದಾಗಿ ಕಾಣುತ್ತಿಲ್ಲ. ಆದರೆ, ಅದು ಹೇಗೆ ಹರಡುತ್ತದೆ ಎಂಬುದನ್ನು ಈಗಲೇ ಹೇಳಲು ಆಗುವುದಿಲ್ಲ’ ಎಂದು ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

ಸಾರ್ವಜನಿಕರು ದೊಡ್ಡ ಸಭೆಗಳಲ್ಲಿ ಭಾಗವಹಿಸುವುದನ್ನು ಬಿಡಬೇಕು. ಗುಂಪು ಸೇರಬಾರದು. ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು ಎಂದರು.

ಬೆಂಗಳೂರಿನ ವೈದ್ಯನ ಸೋಂಕಿನ ವಿವರ

- ನ.21ರಂದು ಜ್ವರ, ಮೈಕೈ ನೋವು
- ನ.22ರಂದು ಬೆಳಿಗ್ಗೆ 10ಕ್ಕೆ ಆಸ್ಪತ್ರೆಯಲ್ಲಿ ಆರ್‌ಟಿಪಿಸಿಆರ್ ಪರೀಕ್ಷೆಗೆ ಒಳಗಾದ ವೈದ್ಯ
- ನ.22ರಂದು ಮುಂಜಾನೆ 4 ಗಂಟೆಗೆ ಕೋವಿಡ್ ದೃಢ
- ಸೈಕಲ್ ಥ್ರೆಶೋಲ್ಡ್ (ಸಿ.ಟಿ) ಮೌಲ್ಯ ಕಡಿಮೆ ಇದ್ದುದರಿಂದ ಜಿನೋಮ್ ಸೀಕ್ವೆನ್ಸಿಂಗ್‌ಗೆ ಮಾದರಿ ರವಾನೆ
- ನ.22ರಿಂದ 24ರವರೆಗೆ ಮನೆಯಲ್ಲೇ ಪ್ರತ್ಯೇಕವಾಸಕ್ಕೆ ಒಳಗಾಗಿದ್ದ ವೈದ್ಯ
- ನ.25ರಂದು ಆಸ್ಪತ್ರೆಗೆ ದಾಖಲು
- ಮೂರು ದಿನಗಳ ಚಿಕಿತ್ಸೆ ಬಳಿಕ ನ. 27ರಂದು ಆಸ್ಪತ್ರೆಯಿಂದ ಬಿಡುಗಡೆ. ಓಮೈಕ್ರಾನ್ ದೃಢಪಟ್ಟ ಬಳಿಕ ಮತ್ತೆ ಆಸ್ಪತ್ರೆಗೆ ದಾಖಲು

‘ದುಬೈಗೆ ಸೋಂಕಿತ’

‘ಓಮೈಕ್ರಾನ್ ಸೋಂಕಿತ ಆಫ್ರಿಕಾದ ಪ್ರಜೆ ಪ್ರತ್ಯೇಕವಾಸದಲ್ಲಿದ್ದಾಗ ಅವರ ಮಾದರಿಯನ್ನು ಪ್ರಯೋಗಾಲಯದಲ್ಲಿ ಪರೀಕ್ಷೆಗೆ ಒಳಪಡಿಸಲಾಗಿತ್ತು. ಆಗ ಕೋವಿಡ್ ಹೊಂದಿಲ್ಲ ಎಂದು ವರದಿ ಬಂತು. ಪೂರ್ವ ನಿಯೋಜಿತ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವರು ನ.27ರಂದು ದುಬೈಗೆ ತೆರಳಿದ್ದಾರೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

ದತ್ತಾಂಶ ಸಲ್ಲಿಸಿ: ಕೆಎಟಿ ಆದೇಶ

ಕೆಪಿಎಸ್‌ಸಿ: ನೇಮಕಾತಿಯಲ್ಲಿ ಅಂಕ ತಿರುಚಿ ಅಕ್ರಮ

● ರಾಜೇಶ್ ರೈ ಚಟ್ಲ

ಬೆಂಗಳೂರು: 2015ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ 428 ಹುದ್ದೆಗಳ ನೇಮಕಾತಿಗೆ ನಡೆದ ಮುಖ್ಯ ಪರೀಕ್ಷೆಯ ಡಿಜಿಟಲ್ ಮೌಲ್ಯಮಾಪನದ ದತ್ತಾಂಶಗಳನ್ನು ಬಾರ್‌ಕೋಡ್ ಜೊತೆಗೆ ಹೊಂದಿರುವ ಅಂಕಗಳ ಸಹಿತ ಮುಚ್ಚಿದ ಲಕೋಟೆಯಲ್ಲಿ ಅಧಿಕೃತ ಸಹಿಯೊಂದಿಗೆ ಸಲ್ಲಿಸುವಂತೆ ಟಾಟಾ ಕನ್ಸಲ್ಟೆನ್ಸಿ ಸರ್ವೀಸ್‌ಗೆ (ಟಿಸಿಎಸ್) ಕರ್ನಾಟಕ ಆಡಳಿತ ನ್ಯಾಯಮಂಡಳಿ (ಕೆಎಟಿ) ಆದೇಶಿಸಿದೆ.

ಅದೇ ರೀತಿ, ಟಿಸಿಎಸ್ ಮುಖ್ಯಪರೀಕ್ಷೆಯ ಡಿಜಿಟಲ್ ಮೌಲ್ಯಮಾಪನದ ದತ್ತಾಂಶಗಳನ್ನು ನೀಡಿದ ದಿನದಂದು ಡೌನ್‌ಲೋಡ್ ಮಾಡಿದ ಬಾರ್ ಕೋಡ್ ನಂಬರ್‌ಗೆ ನಮೂದಿಸಿರುವ ಅಂಕಗಳ ಸಹಿತ ದತ್ತಾಂಶ, ಬಾರ್‌ಕೋಡ್ ನಂಬರ್, ನೋಂದಣಿ ಸಂಖ್ಯೆ, ಮುಖ್ಯ ಪರೀಕ್ಷೆಯಲ್ಲಿ ಮತ್ತು ವ್ಯಕ್ತಿತ್ವ ಪರೀಕ್ಷೆಯಲ್ಲಿ (ಸಂದರ್ಶನ) ಅಭ್ಯರ್ಥಿಗಳು ಗಳಿಸಿದ ಅಂಕಗಳ ವಿವರಗಳನ್ನು ಸಲ್ಲಿಸಬೇಕು ಎಂದು ಕೆಪಿಎಸ್‌ಸಿಗೂ ಕೆಎಟಿ ಸೂಚಿಸಿದೆ.

ಈ ಸಾಲಿನ ನೇಮಕಾತಿಯಲ್ಲಿ ಮುಖ್ಯ ಪರೀಕ್ಷೆಯ ಅಂಕಗಳನ್ನು ತಿರುಚಲಾಗಿದೆ ಎಂದು ದೂರಿ ಹುದ್ದೆ ವಂಚಿತ ಅಭ್ಯರ್ಥಿ ಸುಧನ್ವ ಭಾಂಡೋಳ್ಕರ್ ಸೇರಿ 52 ಅಭ್ಯರ್ಥಿಗಳು ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು. ಈ ಪ್ರಕರಣದ ಮೇಲ್ಮನವಿ ವ್ಯಾಪ್ತಿ ಕೆಎಟಿ ಆಗಿರುವುದರಿಂದ, ಅಲ್ಲಿಗೆ ಪ್ರಕರಣವನ್ನು ವರ್ಗಾಯಿಸಿ, ವಿಚಾರಣೆ ನಡೆಸುವಂತೆ ಹೈಕೋರ್ಟ್ ನಿರ್ದೇಶನ ನೀಡಿತ್ತು.

ಎರಡು ವಾರಗಳಿಂದ ಕೆಎಟಿ ಈ ಪ್ರಕರಣವನ್ನು ವಿಚಾರಣೆ ನಡೆಸುತ್ತಿದೆ.

ಪ್ರಜಾವಾಣಿ ವಿಶೇಷ

ದೂರುದಾರ ಅಭ್ಯರ್ಥಿಗಳ ಪರ ವಕೀಲರು ಮತ್ತು ಕೆಪಿಎಸ್‌ಸಿ ಪರ ವಕೀಲರ ವಾದ–ಪ್ರತಿವಾದಗಳನ್ನು ಗುರುವಾರ ಆಲಿಸಿದ ಬಳಿಕ ಕೆಎಟಿ ಈ ಆದೇಶ ನೀಡಿದೆ. ಮುಂದಿನ ವಿಚಾರಣೆ ಇದೇ 13ಕ್ಕೆ ನಡೆಯಲಿದೆ.

ಮುಖ್ಯ ಪರೀಕ್ಷೆಯ ಮೌಲ್ಯಮಾಪನದ ತಂತ್ರಾಂಶವನ್ನು ಮುಂಬೈಯ ಟಿಸಿಎಸ್‌ಗೆ ಕೆಪಿಎಸ್‌ಸಿ ಹೊರಗುತ್ತಿಗೆ ನೀಡಿತ್ತು. ಆದರೆ, ಇದೀಗ ಈ ಸಂಸ್ಥೆಯ ಜೊತೆಗಿನ ಒಪ್ಪಂದ ಮುರಿದುಕೊಂಡಿರುವ ಕೆಪಿಎಸ್‌ಸಿ, ಡಿಜಿಟಲ್ ಮೌಲ್ಯಮಾಪನಕ್ಕೆ 'ನ್ಯಾಷನಲ್ ಇನ್ಫಾರ್ಮೆಟಿಕ್ಸ್ ಸೆಂಟರ್'(ಎನ್‌ಐಸಿ) ಮೂಲಕ ಹೊಸ ತಂತ್ರಾಂಶ ಅಭಿವೃದ್ಧಿಪಡಿಸಿದೆ. ಅಲ್ಲದೆ, ಈ ತಂತ್ರಾಂಶದ ಮೂಲಕ 2017ನೇ ಸಾಲಿನ 106 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ನಡೆದ ಮುಖ್ಯ ಪರೀಕ್ಷೆಯ ಡಿಜಿಟಲ್ ಮೌಲ್ಯಮಾಪನ ನಡೆಸಲು ನಿರ್ಧರಿಸಿದೆ.

ವಿಳಂಬ ಯಾಕೆ?: ‘2014ರ ಗೆಜೆಟೆಡ್ ಪ್ರೊಬೆಷನರಿ ಪರೀಕ್ಷೆಯಲ್ಲಿ ಮುಖ್ಯ ಪರೀಕ್ಷೆಯ ಅಂಕಗಳನ್ನು ಮೂರೇ ದಿನಗಳಲ್ಲಿ ನೀಡಿರುವ ಕೆಪಿಎಸ್‌ಸಿ, 2015ರ ಮುಖ್ಯಪರೀಕ್ಷೆಯ ಅಂಕಗಳನ್ನು ಅಭ್ಯರ್ಥಿಗೆ ನೀಡಲು 67 ದಿನಗಳನ್ನು ತೆಗೆದುಕೊಂಡಿದೆ. ಇಷ್ಟೊಂದು ಸುದೀರ್ಘ ಅವಧಿಯನ್ನು ತೆಗೆದುಕೊಂಡಿರುವುದು ಯಾಕೆ’ ಎಂದು ಕೆಪಿಎಸ್‌ಸಿಯನ್ನು ಕೆಎಟಿ ತರಾಟೆಗೆ ತೆಗೆದುಕೊಂಡಿದೆ

ಇದಕ್ಕೆ ಪ್ರತಿಕ್ರಿಯಿಸಿದ ಕೆಪಿಎಸ್‌ಸಿ, ‘ಅಭ್ಯರ್ಥಿಗಳಿಗೆ ಅಂಕಗಳನ್ನು ಒದಗಿಸಲು ಮೂರು ದಿನಗಳೂ ಆಗಬಹುದು. 67 ದಿನಗಳೂ ತಗಲಬಹುದು. ಸಂದರ್ಭ ಬಂದರೆ 120 ದಿನಗಳೂ ಆಗಬಹುದು’ ಎಂದು ತಿಳಿಸಿದೆ. ನಂತರದ ಬೆಳವಣಿಗೆಯಲ್ಲಿ ಕೆಎಟಿ ಈ ಆದೇಶವನ್ನು ನೀಡಿದೆ.

‘ಹೋಲಿಕೆ’ಯಿಂದ ಅಕ್ರಮ ಬಹಿರಂಗ?

‘ಮುಖ್ಯಪರೀಕ್ಷೆಯ ಉತ್ತರ ಪತ್ರಿಕೆಯ ಮುಖಪುಟದ ಬಲಭಾಗದಲ್ಲಿ ಬಾರ್‌ಕೋಡ್, ನೋಂದಣಿ ಸಂಖ್ಯೆ ಮತ್ತು ವಿದ್ಯಾರ್ಥಿಗಳ ಸಹಿ ಇರುತ್ತದೆ. ಕೆಪಿಎಸ್‌ಸಿಗೆ ಟಿಸಿಎಸ್ ನೀಡಿರುವ ಮುಖ್ಯ ಪರೀಕ್ಷೆಯ ಡಿಜಿಟಲ್ ಮೌಲ್ಯಮಾಪನದ ದತ್ತಾಂಶಗಳನ್ನು ಬಾರ್‌ಕೋಡ್‌ನ ಜೊತೆಗೆ, ಕೆಪಿಎಸ್‌ಸಿಯಲ್ಲಿರುವ ಮುಖ್ಯಪರೀಕ್ಷೆಯ ಉತ್ತರ ಪತ್ರಿಕೆಯ ಬಾರ್‌ಕೋಡ್, ನೋಂದಣಿ ಸಂಖ್ಯೆಯ ಜೊತೆ ಹೋಲಿಸಿದಾಗ ಅಂಕಗಳು ತಿರುಚಲಾಗಿದೆಯೇ ಎನ್ನುವುದು ಗೊತ್ತಾಗಲಿದೆ’ ಎಂದು ಸೈಬರ್ ತಜ್ಞರೊಬ್ಬರು ‘ಪ್ರಜಾವಾಣಿ’ಗೆ ವಿವರಿಸಿದರು.

ಸಂಕ್ಷಿಪ್ತ ಸುದ್ದಿ

ಎಂಫಿಲ್, ಪಿಎಚ್‌.ಡಿ ಪ್ರಬಂಧ ಸಲ್ಲಿಸಲು ಅವಧಿ ವಿಸ್ತರಣೆ

ನವದೆಹಲಿ(ಪಿಟಿಐ): ಎಂಫಿಲ್ ಮತ್ತು ಪಿಎಚ್‌.ಡಿ ಸಂಶೋಧನಾ ಪ್ರಬಂಧ ಸಲ್ಲಿಸಲು 2022ರ ಜೂನ್ 30ರವರೆಗೆ ಅವಧಿ ವಿಸ್ತರಿಸಲಾಗಿದೆ ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ತಿಳಿಸಿದೆ.

ಈ ಮೊದಲು ಪ್ರಬಂಧ ಸಲ್ಲಿಸಲು 2021ರ ಡಿಸೆಂಬರ್ 31ರವರೆಗೆ ಅವಕಾಶ ಕಲ್ಪಿಸಲಾಗಿತ್ತು. ಹೆಚ್ಚಿನ ಸಂಖ್ಯೆಯ ಸಂಶೋಧನಾ ಅಭ್ಯರ್ಥಿಗಳ ಕೋರಿಕೆಯನ್ನು ಗಮನದಲ್ಲಿಟ್ಟುಕೊಂಡು ಅವಧಿ ವಿಸ್ತರಿಸಲಾಗಿದೆ ಎಂದು ಯುಜಿಸಿ ಕಾರ್ಯದರ್ಶಿ ರಜನೀಶ್ ಜೈನ್ ತಿಳಿಸಿದ್ದಾರೆ.

ಜೂನ್ 30 ಅಥವಾ ಅದಕ್ಕಿಂತ ಮೊದಲು ಪ್ರಬಂಧ ಸಲ್ಲಿಸಬೇಕಿದ್ದ ಎಲ್ಲಾ ಅಭ್ಯರ್ಥಿಗಳಿಗೆ ಈ ವಿಸ್ತರಣೆ ಅನ್ವಯಿಸುತ್ತದೆ ಎಂದು ಹೇಳಿದ್ದಾರೆ.

ಅಂಜುಗೆ ವರ್ಷದ ಮಹಿಳೆ ಪ್ರಶಸ್ತಿ



ಅಂಜು ಬಾಬಿ ಜಾರ್ಜ್

ಮೊನಾಕೊ (ಪಿಟಿಐ): ಅಥ್ಲೀಟ್ ಅಂಜು ಬಾಬಿ ಜಾರ್ಜ್ ಅವರಿಗೆ ವಿಶ್ವ ಅಥ್ಲೆಟಿಕ್ಸ್ ಸಂಸ್ಥೆ ನೀಡುವ ‘ವರ್ಷದ ಮಹಿಳೆ’ ಪ್ರಶಸ್ತಿ ಸಂದಿದೆ. ಈ ಗೌರವ ಗಳಿಸಿದ ಭಾರತದ ಮೊದಲ ಅಥ್ಲೀಟ್ ಎಂಬ ಹೆಗ್ಗಳಿಕೆಗೆ 44 ವರ್ಷದ ಅಂಜು ಪಾತ್ರರಾಗಿದ್ದಾರೆ.

ಪ್ರತಿಭಾನ್ವಿತ ಅಥ್ಲೀಟ್‌ಗಳ ಬೆಳವಣಿಗೆಗೆ ಮತ್ತು ಲಿಂಗಸಮಾನತೆಗಾಗಿ ಕಾರ್ಯನಿರ್ವಹಿಸುವ ಅಥ್ಲೀಟ್‌ಗಳಿಗೆ ಈ ಪ್ರಶಸ್ತಿ ನೀಡಲಾಗುತ್ತದೆ. 2003ರ ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಮಹಿಳೆಯರ ಲಾಂಗ್ ಜಂಪ್ ವಿಭಾಗದಲ್ಲಿ ಕಂಚಿನ ಪದಕ ಜಯಿಸಿದ್ದ ಅಂಜು, ನಿವೃತ್ತಿಯ ನಂತರ ಬಾಲಕಿಯರಿಗಾಗಿ ಕ್ರೀಡಾ ಅಕಾಡೆಮಿ ನಡೆಸುತ್ತಿದ್ದಾರೆ.

ಹಾಸ್ಟೆಲ್‌ಗಳಿಗೆ ಆಹಾರ ಸಾಮಗ್ರಿ ಪೂರೈಕೆಯಲ್ಲಿನ ಲೋಪ

‘ಇಬ್ಬರ ಅಮಾನತು: ಎಸಿಬಿ ತನಿಖೆ’

ಪ್ರಜಾವಾಣಿ ವಾರ್ತೆ



ಬೆಂಗಳೂರು/ಉಡುಪಿ: ‘ತುಮಕೂರು ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧೀನದ ವಿದ್ಯಾರ್ಥಿನಿಲಯಗಳಿಗೆ ಆಹಾರ ಪೂರೈಕೆಯಲ್ಲಿ ಆಗಿರುವ ಲೋಪಗಳಿಗೆ ಸಂಬಂಧಿಸಿದಂತೆ, ಇಲಾಖೆಯ ತುಮಕೂರು ಜಿಲ್ಲಾ ಅಧಿಕಾರಿ ಟಿ. ಸುಬ್ರಾ ನಾಯ್ಕ ಮತ್ತು ಕಚೇರಿ ವ್ಯವಸ್ಥಾಪಕ ವಿನೋದ್ ಅವರನ್ನು ಅಮಾನತು ಮಾಡಲಾಗಿದೆ’ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದ್ದಾರೆ.

8ನೇ ಪುಟ ನೋಡಿ

ವರದಿ ಪರಿಣಾಮ

ವರದಿ ಕೊಡಿ: ರಶ್ಮಿ ಮಹೇಶ್ ಸೂಚನೆ

ವಿದ್ಯಾರ್ಥಿನಿಲಯಗಳಲ್ಲಿ ಗುಣಮಟ್ಟದ ಆಹಾರವನ್ನು ಪಾರದರ್ಶಕವಾಗಿ ನೀಡಲು ಮತ್ತು ಅನುದಾನ ಸೋರಿಕೆ ತಪ್ಪಿಸಲು ಕಟ್ಟುನಿಟ್ಟಿನ ಸೂಚನೆಗಳನ್ನು ಗುರುವಾರ ನೀಡಿರುವ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್, ‘ತಕ್ಷಣ ಈ ಸೂಚನೆಗಳು ಪಾಲನೆ ಆಗಬೇಕು. ಅಲ್ಲದೆ, ಆ ಬಗ್ಗೆ 10 ದಿನಗಳ ಒಳಗೆ ಸರ್ಕಾರಕ್ಕೆ ವರದಿ ನೀಡಬೇಕು’ ಎಂದು ಇಲಾಖೆಯ ಆಯುಕ್ತ ಪಿ. ವಸಂತಕುಮಾರ್ ಅವರಿಗೆ ಸೂಚಿಸಿದ್ದಾರೆ.

‘ವಿದ್ಯಾರ್ಥಿನಿಲಯದ ಬಾಗಿಲಿಗೆ ಗುತ್ತಿಗೆದಾರ ಆಹಾರ ಸಾಮಗ್ರಿ ಪೂರೈಸುವ ಭಾವಚಿತ್ರಗಳನ್ನು ಡಿಜಿಟಲ್ ಮಾದರಿಯಲ್ಲಿ ಸಂಗ್ರಹಿಸಿಡಬೇಕು. ಮೇಲ್ವಿಚಾರಕರಿಗೆ ಆಹಾರ ಸಾಮಗ್ರಿ ಖರೀದಿಯ ಹೊಣೆ ವಹಿಸಬಾರದು. ಇನ್ನು ಮುಂದೆ ಮೇಲ್ವಿಚಾರಕರು ಆಹಾರ ಪೂರೈಕೆಗಾಗಿ ಗುತ್ತಿಗೆದಾರರಿಗೆ ನೀಡುವ ಬೇಡಿಕೆ ಪಟ್ಟಿ, ಗುತ್ತಿಗೆದಾರರು ಆಹಾರ ಸಾಮಗ್ರಿಯನ್ನು ವಿದ್ಯಾರ್ಥಿನಿಲಯದ ಬಾಗಿಲಿಗೆ ತಲುಪಿಸಿದ ದಿನಾಂಕ, ಸಮಯ, ವಾಹನ ಸಂಖ್ಯೆ, ತಲುಪಿಸಿದ ಕುರಿತು ದಾಖಲಿಸಿದ ಮಾಹಿತಿ, ಪ್ರತಿ ದಿನ ಹಾಲು ಸರಬರಾಜು, ವಾರಕ್ಕೆ ತರಕಾರಿ, ಹಣ್ಣು, ಮೊಟ್ಟೆ, ಕೋಳಿ ಮಾಂಸ ಸರಬರಾಜಿನ ಬೇಡಿಕೆ ಪಟ್ಟಿ ಮತ್ತು ವೆಚ್ಚದ ಮಾಹಿತಿಯನ್ನು ಕಡ್ಡಾಯವಾಗಿ ನಿಲಯದ ಸೂಚನಾ ಫಲಕದಲ್ಲಿ ಪ್ರದರ್ಶಿಸಬೇಕು’ ಎಂದೂ ಅವರು ಸೂಚಿಸಿದ್ದಾರೆ.

ಅಮೆರಿಕ: ಓಮೈಕ್ರಾನ್ ಮೊದಲ ಪ್ರಕರಣ ಪತ್ತೆ

ವಾಷಿಂಗ್ಟನ್ (ಎಪಿ): ಕ್ಯಾಲಿಫೋರ್ನಿಯಾದಲ್ಲಿ ವ್ಯಕ್ತಿಯೊಬ್ಬರಿಗೆ ಕೋವಿಡ್ ರೂಪಾಂತರ ತಳಿ ಓಮೈಕ್ರಾನ್ ಕಾಣಿಸಿಕೊಂಡಿದೆ. ಇದು ಅಮೆರಿಕದಲ್ಲಿ ವರದಿಯಾದ ಮೊದಲ ಪ್ರಕರಣ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸ್ಮಾರ್ಟ್ ಸಿಟಿ ಯೋಜನೆ ಅವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಸ್ಮಾರ್ಟ್ ಸಿಟಿ ಮಿಷನ್ ಯೋಜನೆಗಳ ಅವಧಿಯನ್ನು ಕೇಂದ್ರ ಸರ್ಕಾರ 2023ರ ಜೂನ್‌ವರೆಗೂ ವಿಸ್ತರಿಸಿದೆ.

ಕೋವಿಡ್ ಪರಿಸ್ಥಿತಿ ಮತ್ತು ಇತರೆ ಕಾರಣಗಳಿಂದಾಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಕೇಂದ್ರ ವಸತಿ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಶಿವಮೊಗ್ಗ: 29 ನರ್ಸಿಂಗ್ ವಿದ್ಯಾರ್ಥಿಗಳಿಗೆ ಕೋವಿಡ್


ಶಿವಮೊಗ್ಗ: ಇಲ್ಲಿಯ ಗಾಡಿಕೊಪ್ಪ ಸಮೀಪದ ನಂಜಪ್ಪ ಲೈಫ್ ಕೇರ್ ಆಸ್ಪತ್ರೆಯ ನರ್ಸಿಂಗ್ ಕಾಲೇಜಿನ 29 ವಿದ್ಯಾರ್ಥಿಗಳಲ್ಲಿ ಕೊರೊನಾ ಸೋಂಕು ಇರುವುದು ದೃಢಪಟ್ಟಿದೆ. ಇವರಲ್ಲಿ 23 ವಿದ್ಯಾರ್ಥಿಗಳು ಕೇರಳದವರು ಎಂದು ಜಿಲ್ಲಾಧಿಕಾರಿ ಕೆ.ಬಿ. ಶಿವಕುಮಾರ್ ತಿಳಿಸಿದ್ದಾರೆ. 8

ಭಾರತ–ನ್ಯೂಜಿಲೆಂಡ್ ಟೆಸ್ಟ್ ಇಂದಿನಿಂದ

ಮುಂಬೈ: ಭಾರತ ಮತ್ತು ನ್ಯೂಜಿಲೆಂಡ್ ತಂಡಗಳು ವಾಂಖೆಡೆ ಕ್ರೀಡಾಂಗಣದಲ್ಲಿ ಶುಕ್ರವಾರ ಆರಂಭವಾಗಲಿರುವ ಎರಡನೇ ಟೆಸ್ಟ್‌ನಲ್ಲಿ ಮುಖಾಮುಖಿಯಾಗಲಿವೆ.ಕಾನ್ಪುರದಲ್ಲಿ ಈಚೆಗೆ ನಡೆದ ಮೊದಲ ಟೆಸ್ಟ್ ಡ್ರಾ ಆಗಿತ್ತು. ಆ ಪಂದ್ಯದಲ್ಲಿ ವಿಶ್ರಾಂತಿ ಪಡೆದಿದ್ದ ವಿರಾಟ್ ಕೊಹ್ಲಿ ತಂಡಕ್ಕೆ ಮರಳಿದ್ದಾರೆ. 9

ಚಿನಕುರಳಿ

ಪ್ರಕಾಶ್ ಶೆಟ್ಟಿ



ಬಿಬಿಎಂಪಿಗೆ ಹಸ್ತಾಂತರ ಆದೇಶ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ ಸಮೀಪದ ಪುಟ್ಟೇನಹಳ್ಳಿ ಕೆರೆಯ ಪಕ್ಷಿ ಸಂರಕ್ಷಣಾ ಮೀಸಲು ಪ್ರದೇಶವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಹಸ್ತಾಂತರಿಸಲು ಸರ್ಕಾರ ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ರದ್ದು ಮಾಡಿದೆ.

ಈ ಕುರಿತಂತೆ ಯಲಹಂಕ-ಪುಟ್ಟೇನಹಳ್ಳಿ ಕೆರೆ ಹಿತರಕ್ಷಣಾ ಸಮಿತಿ, ಬರ್ಡ್ ಕನ್ಸರವೇಷನ್ ಟ್ರಸ್ಟ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿ ಈ ಆದೇಶ ನೀಡಿದೆ.

'ಅರಣ್ಯ ಇಲಾಖೆಯೇ ಪಕ್ಷಿ ಸಂಕುಲದ ಪ್ರದೇಶವನ್ನು ನೋಡಿಕೊಳ್ಳಬೇಕು. ವಿವಾದಿತ ಪ್ರದೇಶದ ನಿಯಂತ್ರಣ, ನಿರ್ವಹಣೆ ಮಾಡುವ ಅಧಿಕಾರ ವನ್ಯಜೀವಿ ವಾರ್ಡನ್‌ಗೆ ಇದೆ. ಈ ಪ್ರದೇಶವನ್ನು ಬಿಬಿಎಂಪಿಗೆ ಹಸ್ತಾಂತರ ಮಾಡಿ ಸರ್ಕಾರ 2019ರ ನವೆಂಬರ್ 19ರಂದು ಹೊರಡಿಸಿರುವ ಆದೇಶ ನ್ಯಾಯೋಚಿತವಾಗಿಲ್ಲ' ಎಂದು ಪೀಠ ಹೇಳಿದೆ.

'ಕೆರೆಗೆ ಯಾವುದೇ ರೀತಿಯ ಕಲುಷಿತ ನೀರು ಹರಿಯುವುದನ್ನು ತಡೆಗಟ್ಟಲು ಕ್ರಮ ಕೈಗೊಳ್ಳಬೇಕು. ಈ ಮೊದಲು ಘೋಷಿಸಿದಂತೆ ಪಕ್ಷಿ ಸಂಕುಲ ಸಂರಕ್ಷಣೆಗೆ ಬಾಕಿ ಉಳಿದಿರುವ ಕಾಮಗಾರಿ ಪೂರ್ಣಗೊಳಿಸಲು, ಸರ್ಕಾರ ₹ 25 ಲಕ್ಷ ಬಿಡುಗಡೆ ಮಾಡಬೇಕು' ಎಂದು ವಿವರಿಸಲಾಗಿದೆ.

'ಪುಟ್ಟೇನಹಳ್ಳಿ ಕೆರೆಯನ್ನು ಮೀಸಲು ಪಕ್ಷಿಧಾಮವೆಂದು 2015ರ ಏಪ್ರಿಲ್‌ನಲ್ಲಿ ಘೋಷಿಸಲಾಗಿದೆ. ಆದರೆ, ಈ ಪ್ರದೇಶವನ್ನು ಕಾನೂನಿಗೆ ವಿರುದ್ಧವಾಗಿ ಬಿಬಿಎಂಪಿಗೆ ಹಸ್ತಾಂತರ ಮಾಡುವುದು ಸರಿಯಲ್ಲ' ಎಂದು ಆಕ್ಷೇಪಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

ರಾಷ್ಟ್ರೀಯ ಮಹಿಳಾ ಸಮಾವೇಶಕ್ಕೆ ಚಾಲನೆ

ಬೆಂಗಳೂರು: ಎಫ್‌ಎಲ್‌ಓ ಸಂಘಟನೆ ಹಮ್ಮಿಕೊಂಡಿರುವ ಎಫ್‌ಐಸಿಸಿಐ ಮಹಿಳಾ ಸಂಘಟನೆಯ ರಾಷ್ಟ್ರೀಯ ಸಮಾವೇಶಕ್ಕೆ ಗುರುವಾರ ಚಾಲನೆ ದೊರೆತಿದೆ.

ಶುಕ್ರವಾರದಿಂದ ಭಾನುವಾರದ ವರೆಗೆ ಹಂಪಿಯಲ್ಲಿ ಈ ಸಮಾವೇಶ ನಡೆಯಲಿದೆ. ವಿವಿಧ ರಾಜ್ಯಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. 'ಕೆಲವುವರ್ಷಗಳಿಂದ ಹಮ್ಮಿಕೊಂಡಿರುವ ಸಮಾವೇಶವು ಭಾರತದ ಭವ್ಯ ಪರಂಪರೆ, ಸಾಂಸ್ಕೃತಿಕ ಆಚರಣೆ, ವಿಜ್ಞಾನ ಹಾಗೂ ಸಾಹಿತ್ಯ ಕ್ಷೇತ್ರದ ಬೆಳವಣಿಗೆಗಳ ಅನಾವರಣಕ್ಕೆ ಉತ್ತಮ ವೇದಿಕೆಯಾಗಿದೆ ಎಂದು ಬೆಂಗಳೂರು ಘಟಕದ ಅಧ್ಯಕ್ಷೆ ರೇವತಿ ರಾಜು ತಿಳಿಸಿದ್ದಾರೆ.

ಡಾ.ಕೆ.ಶಿವರಾಮ ಕಾರಂತ ಬಡಾವಣೆ: 4 ವಾರಗಳಲ್ಲಿ ಸಕ್ರಮಗೊಳಿಸುವಂತೆ ನ್ಯಾಯಾಲಯ ಸೂಚನೆ

300 ಕಟ್ಟಡಗಳು ಸಕ್ರಮ: 'ಸುಪ್ರೀಂ' ತೀರ್ಪು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾ. ಕೆ.ಶಿವರಾಮ ಕಾರಂತ ಬಡಾವಣೆಗೆ ಅಧಿಸೂಚನೆ ಹೊರಡಿಸಿರುವ ಜಾಗದಲ್ಲಿ ನಿರ್ಮಾಣವಾಗಿರುವ 300 ಕಟ್ಟಡಗಳನ್ನು ಸಕ್ರಮಗೊಳಿಸುವಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿಡಿಎ) ಸುಪ್ರೀಂಕೋರ್ಟ್ ನಿರ್ದೇಶನ ನೀಡಿದೆ



ನಿವೃತ್ತ ನ್ಯಾಯಮೂರ್ತಿ ಚಂದ್ರಶೇಖರ್

ನ್ಯಾಯಾಲಯವು ನವೆಂಬರ್ 25ರಂದು ಈ ಕುರಿತು ನಿರ್ದೇಶನ ನೀಡಿದೆ. ಸಕ್ರಮದ ದೃಢೀಕರಣದ ಪತ್ರಗಳನ್ನು ನಾಲ್ಕು ವಾರಗಳಲ್ಲಿ ನೀಡುವಂತೆಯೂ ಆದೇಶ ನೀಡಿದೆ ಎಂದು ನಿವೃತ್ತ ನ್ಯಾಯಮೂರ್ತಿ ಎ.ವಿ.ಚಂದ್ರಶೇಖರ್ ಅವರು



ಪತ್ರಿಕಾಗೋಷ್ಠಿಯಲ್ಲಿ ಗುರುವಾರ ತಿಳಿಸಿದರು.

'ಶಿವರಾಮ ಕಾರಂತ ಬಡಾವಣೆಯ ವ್ಯಾಪ್ತಿಯಲ್ಲಿ 2018ರ ಆಗಸ್ಟ್ 3ರ ಮುಂಚಿತವಾಗಿ ನಿರ್ಮಿಸಿರುವ 300 ಕಟ್ಟಡಗಳಿಗೆ ಈ ಆದೇಶ ಅನ್ವಯವಾಗಲಿದೆ. ಕಟ್ಟಡ ಸಕ್ರಮಕ್ಕೆ ಸಂಬಂಧಿಸಿ ಸಮಿತಿಗೆ ಇದುವರೆಗೆ 6,278 ಅರ್ಜಿಗಳು ಸಲ್ಲಿಕೆಯಾಗಿದ್ದವು. ಅವುಗಳಲ್ಲಿ 300 ಅರ್ಜಿಗಳನ್ನು ಮಾನ್ಯ ಮಾಡಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಿದ್ದೆವು. ಈ ಸಕ್ರಮ ಪ್ರಕ್ರಿಯೆ ಮೊದಲನೇ ಹಂತದ್ದು. ಮನೆ ನಿರ್ಮಿಸಿದವರಿಗೆ ಪರಿಹಾರ ದೊರೆತಂತಾಗಿದ್ದು, ನಿರಾಳರಾಗಿದ್ದಾರೆ ಎಂದು ವಿವರಿಸಿದರು.

ಮುಖ್ಯಾಂಶಗಳು

- ಸಕ್ರಮಗೊಳ್ಳುವ ಕಟ್ಟಡಗಳ ಮಾಲೀಕರಿಗೆ ಹಕ್ಕುಪತ್ರ ವಿತರಣೆಗೆ ಮಾರ್ಗದರ್ಶನ
- ಡಿಸೆಂಬರ್ 15 ರೊಳಗೆ ನ್ಯಾಯಾಲಯಕ್ಕೆ ಮತ್ತೊಂದು ವರದಿ ಸಲ್ಲಿಕೆ

'ಸುಪ್ರೀಂ ಕೋರ್ಟ್ ಬಡವರು ಮತ್ತು ಮಧ್ಯಮ ವರ್ಗದ ಜನತೆಯ ಆಶೋತ್ತರಗಳನ್ನು ಪರಿಗಣಿಸಿ ಈ ಆದೇಶ ನೀಡಿದೆ. ಪ್ರತಿಯೊಬ್ಬರಿಗೂ ಸೂರು ಇರಬೇಕು ಎನ್ನುವ ಆಶಯದೊಂದಿಗೆ 142ನೇ ವಿಧಿ ಅನ್ವಯ ವಿಶೇಷ ಅಧಿಕಾರ ಬಳಸಿ ಸುಪ್ರೀಂ ಕೋರ್ಟ್ ಸಮಾಜಮುಖಿಯಾಗಿ ಈ ತೀರ್ಪು ನೀಡಿದೆ. ಅಪರೂಪದ ಪ್ರಕರಣಗಳಲ್ಲಿ ಮಾತ್ರ ಸುಪ್ರೀಂಕೋರ್ಟ್ ಇಂತಹ ಮಹತ್ವದ ತೀರ್ಪು ನೀಡುತ್ತದೆ. ಸುಪ್ರೀಂಕೋರ್ಟ್‌ಗೆ ಮಾತ್ರ ಇಂತಹ ಅಧಿಕಾರ ಇದೆ. ಮುಂದೆಯೂ ಇದೇ ರೀತಿ ಆದೇಶ ನೀಡಬಹುದು' ಎಂದು ತಿಳಿಸಿದರು.

ಸಕ್ರಮಗೊಳಿಸಿರುವ ಈ 300 ಕಟ್ಟಡಗಳ ಮಾಲೀಕರಿಗೆ ಹಕ್ಕುಪತ್ರ ವಿತರಿಸುವ ಕಾರ್ಯ ಸಹ ತಮ್ಮ ನೇತೃತ್ವದ ಸಮಿತಿಯ ಮಾರ್ಗದರ್ಶನದಲ್ಲಿ ನಡೆಸಬೇಕು ಎಂದು ನ್ಯಾಯಾಲಯ ಸೂಚಿಸಿದೆ. ಈಗ ಸಕ್ರಮಗೊಳ್ಳಲಿರುವ 300 ಕಟ್ಟಡಗಳನ್ನು ಹೊಂದಿರುವವರು ಅಭಿವೃದ್ಧಿ ಶುಲ್ಕ ಪಾವತಿಸಬೇಕಾಗಿದೆ. ಈ ಬಗ್ಗೆ ಬಿಡಿಎ ನಿರ್ಧರಿಸುತ್ತದೆ ಎಂದು ತಿಳಿಸಿದರು.

ಇನ್ನೂ 5,700ಕ್ಕೂ ಹೆಚ್ಚು ಅರ್ಜಿಗಳ ಪರಿಶೀಲನೆ ನಡೆಸಬೇಕಾಗಿದೆ. ಡಿಸೆಂಬರ್ 15ರಒಳಗೆಮತ್ತೊಂದುವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸುತ್ತೇವೆ. ಈ ಬಗ್ಗೆ ಎಲ್ಲ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. 2022ರ ಮಾರ್ಚ್ 31ರ ಒಳಗೆ ಎಲ್ಲ ಅರ್ಜಿಗಳ ಬಗ್ಗೆ ವರದಿ ನೀಡುವ ಉದ್ದೇಶ ಇದೆ ಎಂದು ಮಾಹಿತಿ ನೀಡಿದರು.

ಸಾರ್ವಜನಿಕರು ಸಲ್ಲಿಸಿರುವ ಅರ್ಜಿಗಳನ್ನು ಒಟ್ಟು ಮೂರು ವಿಧಗಳಲ್ಲಿ ವಿಭಜಿಸಲಾಗಿದೆ. ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ನಿರ್ಮಿಸಿರುವ ಕಟ್ಟಡಗಳು, ಸಕ್ಷಮವಲ್ಲದ ಸ್ಥಳೀಯ ಪ್ರಾಧಿಕಾರದಿಂದ(ಗ್ರಾಮ ಪಂಚಾಯಿತಿಗಳು) ಅನುಮತಿ ಪಡೆದು ನಿರ್ಮಿಸಿರುವ ಕಟ್ಟಡಗಳು ಹಾಗೂ ಯಾವುದೇ ಅನುಮತಿಯನ್ನು ಪಡೆಯದೇ ನಿರ್ಮಿಸಿರುವ ಕಟ್ಟಡಗಳೆಂದು ಗುರುತಿಸಲಾಗಿದೆ. ಇವುಗಳ ಪ್ರತಿಯೊಂದು ದಾಖಲೆಗಳನ್ನು ಪರಿಶೀಲಿಸಲಾಗುತ್ತಿದ್ದು, ಎಲ್ಲರಿಗೂ ನ್ಯಾಯ ಒದಗಿಸಲಾಗುವುದು. ಸಾರ್ವಜನಿಕರು ಸಮಿತಿಯ ಮಾಹಿತಿಗಾಗಿ https://jcc-skl.in/ ಗೆ ಭೇಟಿ ನೀಡಬಹುದಾಗಿದೆ ಎಂದು ತಿಳಿಸಿದರು.

2018ರ ಆಗಸ್ಟ್ 3ರ ನಂತರ ನಿರ್ಮಿಸಿದ ಕಟ್ಟಡಗಳನ್ನು ನಿರ್ದಾಕ್ಷಿಣ್ಯವಾಗಿ ಒಡೆದು ಹಾಕುವಂತೆ ನ್ಯಾಯಾಲಯ ಸ್ಪಷ್ಟವಾಗಿ ತಿಳಿಸಿದೆ ಎಂದರು. ಸಮಿತಿ ಸದಸ್ಯರಾದ ಜೈಕರ್ ಜೆರೋಮ್ ಇದ್ದರು.

ಡಿಜಿಟಲ್ ಕಲಿಕಾ ವ್ಯವಸ್ಥೆಗೆ ಚಾಲನೆ

ಬೆಂಗಳೂರು: ಡಿಜಿಟಲ್ ಕಲಿಕೆ ಮತ್ತು ಮೌಲ್ಯಮಾಪನಕ್ಕೆ ಸಹಕಾರಿಯಾದ 'ಮಣಿಪಾಲ್ ಮೆಡ್‌ಏಸ್' ವ್ಯವಸ್ಥೆಯನ್ನು ಮಣಿಪಾಲ್ ಗ್ಲೋಬಲ್ ಎಜುಕೇಷನ್ ಸರ್ವೀಸಸ್ ನಗರದಲ್ಲಿ ಗುರುವಾರ ಲೋಕಾರ್ಪಣೆ ಮಾಡಿತು.

'ಈ ವ್ಯವಸ್ಥೆಯು ಎಂಬಿಬಿಎಸ್ ವಿದ್ಯಾರ್ಥಿಗಳಿಗೆ ಉಪಯೋಗಕಾರಿಯಾಗಲಿದೆ. ಶೈಕ್ಷಣಿಕ ಮತ್ತು ಕಲಿಕಾ ಸಂಶೋಧನೆಯ ಆಧಾರದಲ್ಲಿ ಇದನ್ನು ರೂಪಿಸಲಾಗಿದೆ' ಎಂದು ಮಣಿಪಾಲ್ ಎಜುಕೇಷನ್ ಆ್ಯಂಡ್ ಮೆಡಿಕಲ್ ಗ್ರೂಪ್‌ನ ಅಧ್ಯಕ್ಷ ಡಾ. ರಂಜನ್ ಪೈ ತಿಳಿಸಿದರು.

ಮಣಿಪಾಲ್ ಗ್ಲೋಬಲ್ ಎಜುಕೇಷನ್ ಸರ್ವೀಸಸ್‌ನ ಮುಖ್ಯ ಡಿಜಿಟಲ್ ಅಧಿಕಾರಿ ಬಾಲಸುಂದರಂ ಆತ್ರೇಯ, 'ಎಂಬಿಬಿಎಸ್ ವಿದ್ಯಾರ್ಥಿಗಳ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಡಿಜಿಟಲ್ ವ್ಯವಸ್ಥೆ ಅಭಿವೃದ್ಧಿಪಡಿಸಿದ್ದೇವೆ. ಸ್ವಯಂ ಅಧ್ಯಯನ ಕೂಡ ಇದರಿಂದ ಸಾಧ್ಯ. www.manipalmedace.com ಮೂಲಕ ನೂತನ ವ್ಯವಸ್ಥೆಯ ಲಾಭ ಪಡೆದುಕೊಳ್ಳಬಹುದು' ಎಂದು ಹೇಳಿದರು.

ಶ್ವಾನಗಳ ಆರೋಗ್ಯದ ಬಗ್ಗೆ ಕಾಳಜಿ ತೋರದ ತಳಿ ಅಭಿವೃದ್ಧಿ ಕೇಂದ್ರಗಳು: ಪ್ರಾಣಿ ಪ್ರಿಯರ ಆರೋಪ

'ನಾಯಿಗಳ ಅಕ್ರಮ ತಳಿ ಸಂವರ್ಧನೆ ನಿಯಂತ್ರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಿಗಳ ತಳಿಯನ್ನು ಅನಧಿಕೃತವಾಗಿ ಅಭಿವೃದ್ಧಿ ಪಡಿಸುವ ತಾಣಗಳು ನಗರದಲ್ಲಿ ಅವ್ಯಾಹತವಾಗಿ ಕಾರ್ಯ ನಿರ್ವಹಿಸುತ್ತಿವೆ. ನಾಯಿಗಳನ್ನು ಅಮಾನವೀಯವಾಗಿ ನಡೆಸಿಕೊಳ್ಳುವ ಇಂತಹ ತಳಿ ಅಭಿವೃದ್ಧಿ ಕೇಂದ್ರಗಳಿಗೆ ಕಡಿವಾಣ ಹಾಕಬೇಕು ಎಂದು ಶ್ವಾನಪ್ರಿಯರು ಒತ್ತಾಯಿಸಿದ್ದಾರೆ.

'ಜನರಲ್ಲಿ ವಿಶೇಷ ತಳಿಯ ನಾಯಿಗಳನ್ನು ಸಾಕುವ ಗೀಳು ಹೆಚ್ಚುತ್ತಿದೆ. ಅವು ಇಲ್ಲಿನ ವಾತಾವರಣಕ್ಕೆ ಹೊಂದಿಕೊಳ್ಳುತ್ತವೆಯೋ ಇಲ್ಲವೋ ಎಂಬುದನ್ನೂ ನೋಡದೆಯೇ ಅವುಗಳನ್ನು ಸಾಕುತ್ತಾರೆ. ಇಂತಹ ನಾಯಿಗಳಿಗೆ ಬೇಡಿಕೆಯೂ ಹೆಚ್ಚು. ಅವುಗಳು ಅತ್ಯಂತ ಕಡಿಮೆ ದರದಲ್ಲಿ ಸಿಗಬೇಕು ಎಂದೂ ಅವುಗಳನ್ನು ಸಾಕುವವರು ಬಯಸುತ್ತಾರೆ. ವಿಶೇಷ ತಳಿಗಳ ನಾಯಿಗಳನ್ನು ಅಕ್ರಮವಾಗಿ ಸಂವರ್ಧನೆ ಮಾಡುತ್ತಿರುವ ಕೇಂದ್ರಗಳು ಈ ಬೇಡಿಕೆಯನ್ನು ಪೂರೈಸುತ್ತಿವೆ' ಎನ್ನುತ್ತಾರೆ ಕ್ಯೂಪಾ ಸಂಸ್ಥೆಯ ಅಧ್ಯಕ್ಷೆ ಹಾಗೂ ಟ್ರಸ್ಟಿ ಸಂಧ್ಯಾ ಮಾದಪ್ಪ.

ಲಾಭವನ್ನೇ ಉದ್ದೇಶವನ್ನಾಗಿ ಹೊಂದಿರುವ ಇಂತಹ ತಳಿ ಸಂವರ್ಧನಾ ಕೇಂದ್ರಗಳಲ್ಲಿ ನಾಯಿಗಳನ್ನು ಬಹಳ ಕೆಟ್ಟದಾಗಿ ನೋಡಿಕೊಳ್ಳಲಾಗುತ್ತಿದೆ. ಇಂತಹ ಕೇಂದ್ರಗಳನ್ನು ನಡೆಸುವವರು ತಮ್ಮ ಲಾಭಾಂಶದ ಅತ್ಯಲ್ಪ ಪ್ರಮಾಣವನ್ನೂ ನಾಯಿಗಳ ಯೋಗಕ್ಷೇಮಕ್ಕೆ ಬಳಸುವುದಿಲ್ಲ. ಹೆಚ್ಚೆಚ್ಚು ನಾಯಿಗಳನ್ನು ಹೊಂದುವುದೇ ಅವರ ಉದ್ದೇಶವಾಗಿರುತ್ತದೆ. ತಳಿಗಾಗಿ ಬೆಳೆಸುವ ನಾಯಿಗಳನ್ನು ಶೆಡ್‌ಗಳಲ್ಲಿ, ಗ್ಯಾರೇಜ್‌ಗಳ ಬಳಿ, ಗೋದಾಮುಗಳಲ್ಲಿ, ಟೆರೇಸ್‌ನಲ್ಲಿ ಹೀಗೆ.. ಎಲ್ಲೆಂದರಲ್ಲಿ ಸಾಕುತ್ತಾರೆ. ಅವುಗಳಿಗೆ ಸ್ವಾತಂತ್ರ್ಯ ಎಂಬುದೇ ಇಲ್ಲ. ಅವುಗಳ ಮಲ ಮೂತ್ರಗಳನ್ನು ಶುಚಿಗೊಳಿಸುವ ವ್ಯವಸ್ಥೆಯೂ ಇರುವುದಿಲ್ಲ. ಕಲುಷಿತ ವಾತಾವರಣದಿಂದ ಕೂಡಿದ ಪುಟ್ಟ ಗೂಡುಗಳಲ್ಲಿ ನಾಯಿಗಳನ್ನು ಕೂಡಿ ಹಾಕಲಾಗುತ್ತದೆ ಎಂಬ ದೂರುಗಳಿವೆ.

ಪ್ರಜಾವಾಣಿ CUPA ಸಹಯೋಗ

ಕೆಲವು ಕೇಂದ್ರಗಳಲ್ಲಿ ನಾಯಿಗಳಿಗೆ ಬದುಕಿ ಉಳಿಯಲು ಬೇಕಾದ ಕನಿಷ್ಠ ಪ್ರಮಾಣದ ಆಹಾರವನ್ನು ಮಾತ್ರ ನೀಡಲಾಗುತ್ತದೆ. ನಾಯಿಗಳು ಮರಿ ಹಾಕುವಂತೆ ಮಾಡುವುದಷ್ಟೇ ಈ ಕೇಂದ್ರಗಳನ್ನು ನಡೆಸುವವರ ಉದ್ದೇಶ. ಹಾಗಾಗಿ ಹೆಣ್ಣು ನಾಯಿಗಳು ಮೇಲಿಂದ ಮೇಲೆ ಮರಿ ಹಾಕುವಂತೆ ಅವರು ನೋಡಿಕೊಳ್ಳುತ್ತಾರೆ. ನಾಯಿಯು ಇನ್ನು ಮರಿ ಹಾಕಲು ಸಾಧ್ಯವೇ ಇಲ್ಲ ಎಂಬ ಸ್ಥಿತಿ ತಲುಪಿದ ಬಳಿಕ ಅದನ್ನು ಬೀದಿಪಾಲು ಮಾಡುತ್ತಾರೆ. ನಾಯಿಗಳ ಆರೋಗ್ಯದ ಬಗ್ಗೆಯೂ ಕಾಳಜಿ ವಹಿಸುವುದಿಲ್ಲ. ಈ ರೀತಿ ಬೀದಿಪಾಲಾಗುವ ನಾಯಿಗಳಲ್ಲಿ ಬಹುತೇಕವು ನಾನಾ ಕಾಯಿಲೆಗಳನ್ನು ಹೊಂದಿರುತ್ತವೆ ಎಂದು ಬೇಸರ ತೋಡಿಕೊಳ್ಳುತ್ತಾರೆ ಪ್ರಾಣಿ ಪ್ರಿಯರು.

ತಳಿ ಸಂವರ್ಧನೆಗೆ ಬಳಸುವ ಹೆಣ್ಣು ನಾಯಿಯ ಆರೈಕೆ ಸರಿಯಾಗಿ ಮಾಡದ ಕಾರಣ, ಅದರ ಮರಿಗಳು ಹುಟ್ಟುವಾಗಲೇ ಆರೋಗ್ಯ ಸಮಸ್ಯೆ ಹೊಂದಿರುತ್ತವೆ. ಕೆಲವು ಮರಿಗಳು ವಂಶವಾಹಿ ಕಾಯಿಲೆಯನ್ನೂ ಹೊಂದಿರುತ್ತವೆ. ಮರಿಗಳು ಕನಿಷ್ಠ ಎಂಟು ವಾರಗಳವರೆಗಾದರೂ ತಾಯಿಯ ಜೊತೆಗಿರಬೇಕು. ಆದರೆ, ಮೂರರಿಂದ ಆರು ವಾರಗಳ ನಾಯಿ ಮರಿಗಳನ್ನೂ ಕೆಲವರು ಮಾರಾಟ ಮಾಡುತ್ತಾರೆ. ಹೆಚ್ಚಿನ ನಾಯಿಮರಿಗಳಿಗೆ ಲಸಿಕೆಗಳನ್ನೂ ಹಾಕಿಸುವುದಿಲ್ಲ. ಹಾಗಾಗಿ ಅವುಗಳು ರೋಗನಿರೋಧಕ ಶಕ್ತಿಯನ್ನೂ ಬೆಳೆಸಿಕೊಂಡಿರುವುದಿಲ್ಲ ಎಂಬುದು ಪ್ರಾಣಿಪ್ರಿಯರ ದೂರು.

ಮಾರಾಟಕ್ಕಾಗಿ ನಾಯಿಗಳ ತಳಿ ಸಂವರ್ಧನೆ ಮಾಡುವುದು ವಾಣಿಜ್ಯ ಚಟುವಟಿಕೆ. ಇದಕ್ಕೆ ಬಿಬಿಎಂಪಿಯ ಪರವಾನಗಿ ಪಡೆಯುವುದು ಅತ್ಯವಶ್ಯಕ. ಆದರೆ, ಅಕ್ರಮವಾಗಿ ಈ ಚಟುವಟಿಕೆ ನಡೆಸುವವರೇ ಹೆಚ್ಚು. ಈ ಬಗ್ಗೆ ಬಿಬಿಎಂಪಿ ನಿಗಾ ಇಡಬೇಕು. ಇಂತಹ ಅಕ್ರಮ ಕೇಂದ್ರಗಳ ಬಗ್ಗೆ ದೂರು ಬಂದಾಗ ಕ್ರಮಕೈಗೊಳ್ಳಲು ಅಧಿಕಾರಿಗಳು ಹೆಚ್ಚಿನ ಆಸಕ್ತಿ ತೋರಬೇಕು ಎಂದು ಅವರು ಒತ್ತಾಯಿಸುತ್ತಾರೆ.

'ವಿಶೇಷ ತಳಿಯ ನಾಯಿಗಳನ್ನು ಖರೀದಿಸುವುದನ್ನು ನಿಲ್ಲಿಸಿದರೆ ಇಂತಹ ನಾಯಿ ತಳಿಗಳ ಅಕ್ರಮ ಸಂವರ್ಧನೆ ಕೇಂದ್ರಗಳಿಗೂ ಕಡಿವಾಣ ಬೀಳುತ್ತದೆ. ಸ್ಥಳೀಯ ದೇಸಿ ತಳಿಯ ನಾಯಿಗಳನ್ನೇ ಹೆಚ್ಚು ಸಾಕಬೇಕು. ರಕ್ಷಿಸಲಾದ ನಾಯಿಗಳನ್ನು ದತ್ತುಪಡೆದು ಸಾಕುವುದು ಹೆಚ್ಚಾಗಬೇಕು. ಆಗಮಾತ್ರ ನಾಯಿಗಳ ಮೇಲಿನ ಈ ಹಿಂಸೆಯನ್ನು ಕೊನೆಗಾಣಿಸಬಹುದು' ಎನ್ನುತ್ತಾರೆ ಸಂಧ್ಯಾ ಮಾದಪ್ಪ.

ಪ್ರಜಾವಾಣಿ– ಕ್ಯೂಪಾ ಅಭಿಯಾನಕ್ಕೆ ಕೈಜೋಡಿಸಿ

ಬೀದಿಪ್ರಾಣಿಗಳನ್ನು ದ್ವೇಷಿಸುವವರ ದೃಷ್ಟಿಕೋನ ಬದಲಾಯಿಸಲು ಹಾಗೂ ಅವುಗಳ ಬಗ್ಗೆ ಕಾಳಜಿ ವಹಿಸುವ ಜನರು ಮತ್ತು ಸಂಸ್ಥೆಗಳ ಜೊತೆ ಕೈಜೋಡಿಸುವಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು 'ಪ್ರಜಾವಾಣಿ'ಯು ಕ್ಯೂಪಾ ಸಂಸ್ಥೆ ಜೊತೆ ಸೇರಿ ಅಭಿಯಾನ ಆರಂಭಿಸಿದೆ.

ಮೂಕ ಪ್ರಾಣಿಗಳ ಬದುಕಿನಲ್ಲೂ ಭರವಸೆ ಮೂಡಿಸುವ ನಿಟ್ಟಿನಲ್ಲಿ ಹಮ್ಮಿಕೊಂಡಿರುವ ಈ ಅಭಿಯಾನದಲ್ಲಿ ತಾವೂ ಕೈಜೋಡಿಸಬಹುದು. ಸ್ವಯಂಸೇವಕರಾಗುವ ಮೂಲಕ ಬೀದಿ ಪ್ರಾಣಿಗಳ ರಕ್ಷಿಸಲು, ಆರೈಕೆ ಮಾಡಲು ಹಾಗೂ ಅವುಗಳ ಮೇಲಾಗುವ ದೌರ್ಜನ್ಯ ತಪ್ಪಿಸಲು ನೆರವಾಗಬಹುದು. ಬೀದಿಪಾಲಾದ ಪ್ರಾಣಿಗಳನ್ನು ದತ್ತು ಪಡೆದು ಸಾಕಬಹುದು. ಬೀದಿ ಪ್ರಾಣಿಗಳ ಬದುಕಿನಲ್ಲಿ ಸಕಾರಾತ್ಮಕ ಬದಲಾವಣೆ ತರಲು ನೆರವಾಗುವ ಈ ಅಭಿಯಾನದಲ್ಲಿ ಪಾಲ್ಗೊಳ್ಳುವಿರಾದರೆ, ಇಲ್ಲಿರುವ ಕೊಂಡಿಯನ್ನು (bit.ly/PVCUPA) ಕ್ಲಿಕ್ಕಿಸಿ ನೋಂದಾಯಿಸಿಕೊಳ್ಳಬಹುದು.

ಮಾದನಾಯಕನಹಳ್ಳಿ–ಕಡಬಗೆರೆ ಕ್ರಾಸ್ ತನಕ ಪ್ರಯಾಣ ಹೈರಾಣ

ರಸ್ತೆ ಹುಡುಕಾಡುವ ವಾಹನ ಸವಾರರು



ಸಿದ್ಧನಹೊಸಹಳ್ಳಿ ಬಳಿ ಹದಗೆಟ್ಟಿರುವ ರಸ್ತೆ —ಪ್ರಜಾವಾಣಿ ಚಿತ್ರಗಳು/ಪ್ರಶಾಂತ್ ಎಚ್.ಜಿ.

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಬರೀ ಕಲ್ಲು–ಗುಂಡಿಗಳ ಹಾದಿ, ರಸ್ತೆಗಾಗಿ ಹುಡುಕಾಡುವ ವಾಹನ ಸವಾರರು, ದೂಳಿನ ಓಕುಳಿಯಲ್ಲಿ ಮಿಂದೇಳುವ ಜನರು, ಅಸ್ತಮಾದ ಭಯದಲ್ಲಿ ನಿವಾಸಿಗಳು...

ಇದು ತುಮಕೂರು ರಸ್ತೆಯಿಂದ ಲಕ್ಷ್ಮೀಪುರ ಮಾರ್ಗದಲ್ಲಿ ಮಾಗಡಿ ರಸ್ತೆಗೆ ಸಂಪರ್ಕ ಕಲ್ಪಿಸುವ ಮಾದನಾಯಕನಹಳ್ಳಿಯಿಂದ ಕಡಬಗೆರೆ ಕ್ರಾಸ್ ರಸ್ತೆಯ ಸ್ಥಿತಿ.

12 ಕಿಲೋ ಮೀಟರ್ ಉದ್ದದ ಈ ರಸ್ತೆ, ನೈಸ್ ರಸ್ತೆಗೆ ಪರ್ಯಾಯ ರಸ್ತೆಯಂತಿದೆ. ದೊಡ್ಡ ಲಾರಿಗಳು ಸೇರಿ ಸಾವಿರಾರು ವಾಹನಗಳು ನಿತ್ಯ ಸಂಚರಿಸುತ್ತವೆ. ಆದರೂ, ಎರಡು ವರ್ಷಗಳಿಂದ ರಸ್ತೆ ಹಾಳಾಗಿದೆ. ದಿನದಿಂದ ದಿನಕ್ಕೆ ಇನ್ನಷ್ಟು ಹಾಳಾಗುತ್ತಲೇ ಇದೆ.

ಮಾದನಾಯಕನಹಳ್ಳಿಯಿಂದ ಹೊರಟು ಸಿದ್ಧನಹೊಸಹಳ್ಳಿ ದಾಟಿದ ಕೂಡಲೇ ರಸ್ತೆಯಲ್ಲಿ ಗುಂಡಿಗಳು ಸಿಗುತ್ತವೆ. ಸಂಚಾರವೇ ಸಾಧ್ಯವಾಗದಷ್ಟು ದೊಡ್ಡದಾಗಿದ್ದ ಹೊಂಡಗಳಿಗೆ ಈಗ ಜಲ್ಲಿ ಸುರಿಯಲಾಗಿದೆ. ಅಲ್ಲಿಂದ ಕೊಂಚ ಮುಂದೆ ಸಾಗಿದರೆ ದೊಂಬರಹಳ್ಳಿಯಲ್ಲಿ ಎದುರಾಗುವ ಗುಂಡಿಗಳನ್ನು ತಪ್ಪಿಸಿ ವಾಹನ ಚಾಲನೆ ಮಾಡಲು ಸಾಧ್ಯವೇ ಇಲ್ಲ.

ಅಲ್ಲಿಂದ ಇನ್ನಷ್ಟು ಮುಂದೆ ಸಾಗಿದರೆ ಹೆಜ್ಜೆ ಹೆಜ್ಜೆಗೂ ಗುಂಡಿ ಮತ್ತು ಹೊಂಡಗಳಿವೆ. ವಾಹನಗಳು ಆಮೆಗಳಂತೆ ನಿಧಾನವಾಗಿ ಸಾಗದೆ ಬೇರೆ ದಾರಿ ಇಲ್ಲ. ಲಕ್ಷ್ಮೀಪುರ ದಾಟಿದ ಕೂಡಲೇ ಮತ್ತೆ ಗುಂಡಿಗಳು ಎದುರಾಗುತ್ತವೆ. ಅವುಗಳನ್ನು ನೋಡಿದರೆ ದಾರಿತಪ್ಪಿ ಯಾವುದೋ ಬೆಟ್ಟಗುಡ್ಡಗಳ ನಡುವಿನ ಕಾಲು ದಾರಿಗೆ ಬಂದ ಅನುಭವವಾಗುತ್ತದೆ. ಮಾಗಡಿ ರಸ್ತೆಗೆ ತಲುಪುವ ತನಕ ಅಲ್ಲಲ್ಲಿ ರಸ್ತೆಯ ಸ್ಥಿತಿ ಹೀಗೆಯೇ ಇದೆ.

'ಮಳೆ ಬಂದರೆ ನೀರು ನಿಲ್ಲುವ ಗುಂಡಿಗಳಲ್ಲಿ ಜನ ಬೀಳುವುದು ಸಾಮಾನ್ಯವಾಗಿದೆ. ಬಿಸಿಲಾದರೆ ಗುಂಡಿ ಮತ್ತು ದೂಳಿನ ನಡುವೆ ಸಿಲುಕಿ ಸವಾರರು ನಲುಗುತ್ತಿದ್ದಾರೆ. ರಸ್ತೆಯ ಉದ್ದಕ್ಕೂ ಇರುವ ಅಂಗಡಿಗಳು, ಹೋಟೆಲ್‌ಗಳೆಲ್ಲವೂ ದೂಳಿನಲ್ಲಿ ಮಿಂದಿವೆ. ದೂಳಿನಲ್ಲಿ ಆಹಾರ ಪದಾರ್ಥಗಳನ್ನು ತಿನ್ನಲು ಯಾರೊಬ್ಬರು ಮನಸು ಮಾಡುವುದಿಲ್ಲ. ಹೋಟೆಲ್ ತೆರೆದಿದ್ದರೂ ವ್ಯಾಪಾರ ಇಲ್ಲ. ಅಂಗಡಿಗಳ ಸ್ಥಿತಿಯೂ ಇದೆ ರೀತಿ ಇದೆ' ಎಂದು ದೊಂಬರಹಳ್ಳಿಯ ನಂದಿನಿ ಹೇಳಿದರು.

ಸುಂಕ ತಪ್ಪಿಸಲು ಪರ್ಯಾಯ ಮಾರ್ಗ

ಹೊರ ವಲಯ ಒಳ ಬೇಗುದಿ

ನೈಸ್ ರಸ್ತೆಯಲ್ಲಿ ಪಾವತಿಸಬೇಕಿರುವ ಸುಂಕ ತಪ್ಪಿಸಿಕೊಂಡು ತುಮಕೂರು ರಸ್ತೆಗೆ ದಾಟಿಕೊಳ್ಳಲು ಲಾರಿ ಮತ್ತು ಕಾರು ಚಾಲಕರು ಈ ಪರ್ಯಾಯ ಮಾರ್ಗ ಕಂಡುಕೊಂಡಿದ್ದಾರೆ.




ಲಕ್ಷ್ಮೀಪುರದ ಬಳಿ ರಸ್ತೆ ತುಂಬ ಗುಂಡಿಗಳು ತುಂಬಿಕೊಂಡಿರುವುದು

'ಭಾರಿ ವಾಹನಗಳು ಹೆಚ್ಚಿನ ಸಂಖ್ಯೆಯಲ್ಲಿ ಸಂಚರಿಸಿಯೇ ರಸ್ತೆ ಸಂಪೂರ್ಣ ಹಾಳಾಗಿದೆ. ದುರಸ್ತಿಪಡಿಸುವ ಗೋಜಿಗೇ ಸರ್ಕಾರ ಹೋಗಿಲ್ಲ. ರಸ್ತೆ ಸರಿಪಡಿಸುವ ಬದಲು, ಈ ರಸ್ತೆಯಲ್ಲಿ ಲಾರಿಗಳು ಬರದಂತೆ ಅಡ್ಡಗಟ್ಟಿ ಎಂಬ ಸಲಹೆಯನ್ನು ಜನಪ್ರತಿನಿಧಿಗಳು ನೀಡುತ್ತಾರೆ' ಎಂದು ಲಕ್ಷ್ಮೀಪುರದ ನಿವಾಸಿಗಳ ಬೇಸರ ವ್ಯಕ್ತಪಡಿಸಿದರು. 'ಎಲ್ಲ ಲಾರಿಗಳೂ ಸುಂಕ ತಪ್ಪಿಸುವ ಉದ್ದೇಶದಿಂದಲೇ ಬರುತ್ತವೆ ಎಂದು ಹೇಳಲಾಗದು. ರಸ್ತೆ ಅಭಿವೃದ್ಧಿಪಡಿಸದೆ ಈ ರೀತಿಯ ಸಬೂಬು ಹೇಳುವುದು ತರವಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಎರಡು ವರ್ಷಗಳಿಂದ ರಸ್ತೆ ಇದೇ ಸ್ಥಿತಿಯಲ್ಲಿದೆ. ಮಳೆಗಾಲದಲ್ಲಿ ಸಾಕಷ್ಟು ಜನ ಬಿದ್ದು ಪೆಟ್ಟು ಮಾಡಿಕೊಂಡಿದ್ದಾರೆ. ಕೆಲವೆಡೆ ಗುಂಡಿಗೆ ಜಲ್ಲಿ ಸುರಿದಿದ್ದಾರೆ, ಹಲವೆಡೆ ಹಾಗೇ ಇದೆ

ರವೀಂದ್ರ, ಲಕ್ಷ್ಮೀಪುರ



ಹಲವು ಬಾರಿ ಯಲಹಂಕ ಶಾಸಕರ ಗಮನಕ್ಕೆ ತರಲಾಗಿದೆ. ಕಾಮಗಾರಿಗೆ ಅನುಮೋದನೆ ನೀಡಲಾಗಿದೆ ಎಂದಷ್ಟೇ ಹೇಳುತ್ತಿದ್ದಾರೆ. ಕಾಮಗಾರಿ ಮಾತ್ರ ಆರಂಭವಾಗಿಲ್ಲ

ಮುನಿರಾಜು, ಲಕ್ಷ್ಮೀಪುರ

'ಚುನಾವಣೆ ಬಳಿಕ ಟೆಂಡರ್'

'ಮಾದನಾಯಕಹಳ್ಳಿ–ಕಡಬಗೆರೆ ರಸ್ತೆಯನ್ನು ಸಿಮೆಂಟ್ ಸ್ಟೆಬಿಲೈಸೇಷನ್ ತಂತ್ರಜ್ಞಾನ ಬಳಸಿ ಅಭಿವೃದ್ಧಿಪಡಿಸಲು ಯೋಜನೆ ಸಿದ್ಧಪಡಿಸಲಾಗಿದೆ. ವಿಧಾನ ಪರಿಷತ್ ಚುನಾವಣೆ ಮುಗಿದ ಕೂಡಲೇ ಟೆಂಡರ್ ಕರೆಯಲಾಗುವುದು' ಎಂದು ಬಿಡಿಎ ಎಂಜಿನಿಯರಿಂಗ್ ಸದಸ್ಯ ಶಾಂತರಾಜಣ್ಣ ತಿಳಿಸಿದರು.

'₹28 ಕೋಟಿ ಮೊತ್ತದ ಯೋಜನೆಗೆ ಈ ಹಿಂದೆಯೇ ಅನುಮೋದನೆ ದೊರೆತಿದೆ. ರಸ್ತೆ ಈಗ ಬಹಳಷ್ಟು ಹಾಳಾಗಿದ್ದು, ವೆಚ್ಚ ಹೆಚ್ಚಾಗಲಿದೆ. ಮೊದಲ ಹಂತದಲ್ಲಿ ₹28 ಕೋಟಿ ಮೊತ್ತಕ್ಕೆ ಎಷ್ಟು ಕಿ.ಮೀ. ರಸ್ತೆ ಅಭಿವೃದ್ಧಿ ಆಗಲಿದೆ ಎಂಬುದನ್ನು ಅಂದಾಜಿಸಿ ಟೆಂಡರ್ ಕರೆಯಲಾಗುವುದು. ಉಳಿದ ರಸ್ತೆಯನ್ನು ಮತ್ತೊಂದು ಪ್ಯಾಕೇಜ್‌ನಲ್ಲಿ ಅಭಿವೃದ್ಧಿಪಡಿಸಲು ಬಿಡಿಎ ಅಧ್ಯಕ್ಷರು ತಿಳಿಸಿದ್ದಾರೆ. ಅದರಂತೆ ಕ್ರಮ ಕೈಗೊಳ್ಳಲಾಗುತ್ತಿದೆ' ಎಂದರು.

ತಲಾ ₹75 ಲಕ್ಷ ಬಹುಮಾನ: ಬೆಂಗಳೂರಿನ ಮೂವರಿಗೆ ಗೌರವ

ಆರು ಸಾಧಕರಿಗೆ ಇನ್ಫೊಸಿಸ್ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಡಾ.ನೀರಜ್ ಕಯಾಲ್, ಡಾ.ಚಂದ್ರಶೇಖರ್ ನಾಯರ್ ಮತ್ತು ಪ್ರೊ. ಮಹೇಶ್ ಶಂಕರನ್ ಸೇರಿದಂತೆ ವಿಜ್ಞಾನ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ ಆರು ಸಾಧಕರಿಗೆ ಗುರುವಾರ 'ಇನ್ಫೊಸಿಸ್ ಪ್ರಶಸ್ತಿ–2021' ನೀಡಿ ಗೌರವಿಸಲಾಯಿತು.

ಎಂಜಿನಿಯರಿಂಗ್ ಮತ್ತು ಕಂಪ್ಯೂಟರ್ ಸೈನ್ಸ್, ಮಾನವೀಯ ಕ್ಷೇತ್ರ, ಜೀವವಿಜ್ಞಾನ, ಗಣಿತ, ಭೌತವಿಜ್ಞಾನ ಮತ್ತು ಸಮಾಜವಿಜ್ಞಾನ ಕ್ಷೇತ್ರಗಳಲ್ಲಿನ ಸಾಧಕರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ವಿಜ್ಞಾನ ಮತ್ತು ಸಂಶೋಧನಾ ಕ್ಷೇತ್ರದ ಸಾಧಕರನ್ನು ಪ್ರೋತ್ಸಾಹಿಸಲು 'ಇನ್ಫೊಸಿಸ್ ಸೈನ್ಸ್ ಫೌಂಡೇಷನ್' (ಐಎಸ್‌ಎಫ್) ಈ ಪ್ರಶಸ್ತಿಗಳನ್ನು ನೀಡುತ್ತಿದೆ. ಪ್ರಶಸ್ತಿಯು ತಲಾ ₹75 ಲಕ್ಷ (1 ಲಕ್ಷ ಅಮೆರಿಕನ್ ಡಾಲರ್), ಚಿನ್ನದ ಪದಕ ಮತ್ತು ಪ್ರಮಾಣ ಪತ್ರವನ್ನು ಒಳಗೊಂಡಿದೆ.

ಪೋರ್ಚುಗಲ್‌ನ ಡಾ.ಏಂಜಲಾ ಬರೆಟ್ಟೊ ಕ್ಸೇವಿಯರ್, ಭುವನೇಶ್ವರದ ಪ್ರೊ. ಬೆಡಂಗದಾಸ್ ಮೊಹಾಂತಿ, ನವದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಡಾ. ಪ್ರತೀಕ್ಷಾ ಬಾಕ್ಸಿ ಪ್ರಶಸ್ತಿಗೆ ಭಾಜನರಾದ ಇತರರು.


ಈ ವರ್ಷ ಸ್ವೀಕರಿಸಿದ 201 ನಾಮನಿರ್ದೇಶನಗಳಲ್ಲಿ ಆರು ಸಾಧಕರನ್ನು ಆಯ್ಕೆ ಮಾಡಲಾಗಿದೆ. ಆಯ್ಕೆ ಸಮಿತಿಯು ವಿಶ್ವದ ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳ ತಜ್ಞರು ಹಾಗೂ ಪ್ರಾಧ್ಯಾಪಕರನ್ನು ಒಳಗೊಂಡಿತ್ತು.

2016ರ ಇನ್ಫೊಸಿಸ್ ಪ್ರಶಸ್ತಿ ಪುರಸ್ಕೃತ, ಸಿಎಂಸಿ ವೆಲ್ಲೂರಿನ ಪ್ರಾಧ್ಯಾಪಕ ಹಾಗೂ ಖ್ಯಾತ ವೈರಾಣು ತಜ್ಞ ಪ್ರೊ.ಗಗನ್‌ದೀಪ್ ಕಾಂಗ್ ವಿಜೇತರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ವರ್ಚುವಲ್ ಪ್ರಶಸ್ತಿ ಪ್ರದಾನದ ಸಮಾರಂಭದಲ್ಲಿ ಇನ್ಫೊಸಿಸ್ ಸೈನ್ಸ್ ಫೌಂಡೇಷನ್ ಅಧ್ಯಕ್ಷ ಕ್ರಿಸ್ ಗೋಪಾಲ ಕೃಷ್ಣನ್ ಹಾಗೂ ಫೌಂಡೇಷನ್‌ನ ಟ್ರಸ್ಟಿಗಳಾದ ಎನ್.ಆರ್.ನಾರಾಯಣಮೂರ್ತಿ, ಶ್ರೀನಾಥ್ ಬಟ್ನಿ, ಕೆ. ದಿನೇಶ್, ನಂದನ್ ನಿಲೇಕಣಿ, ಟಿ.ವಿ. ಮೋಹನದಾಸ್ ಪೈ, ಎಸ್.ಡಿ. ಶಿಬುಲಾಲ್ ಇದ್ದರು.

ಪ್ರಶಸ್ತಿ ವಿಜೇತರ ವಿವರ

ಡಾ.ಚಂದ್ರಶೇಖರ್ ನಾಯರ್



ಎಂಜಿನಿಯರಿಂಗ್ ಮತ್ತು ಕಂಪ್ಯೂಟರ್ ಸೈನ್ಸ್ ಕ್ಷೇತ್ರದಲ್ಲಿನ ಸಾಧನೆಗೆ ಡಾ.ಚಂದ್ರಶೇಖರ್ ನಾಯರ್ ಅವರು ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಪಿಸಿಆರ್ ಆಧಾರಿತ ವೈದ್ಯಕೀಯ ತಪಾಸಣೆಗೆ ಬೆಂಗಳೂರಿನ ಮೊಲ್ಬಿಯೋ ಡಯಾಗ್ನೊಸ್ಟಿಕ್‌ನ ನಾಯರ್ ಹೊಸ ರೂಪ ನೀಡಿದ್ದಾರೆ. ಕೋವಿಡ್ -19 ಮತ್ತು ಕ್ಷಯರೋಗ ಸೇರಿದಂತೆ ಹಲವು ಸೋಂಕಿತ ಕಾಯಿಲೆಗಳ ತ್ವರಿತ ತಪಾಸಣೆ ಕೈಗೊಳ್ಳುವಲ್ಲಿ ಇದರಿಂದ ಸಹಾಯವಾಗಿದೆ.

ಡಾ. ನಾಯರ್ ಅವರು ಬ್ಯಾಟರಿ-ಚಾಲಿತ, ವೈದ್ಯರು ಬಳಸಬಹುದಾದ ಪಿಸಿಆರ್ ಸಾಧನ ತಯಾರಿಸಿದ್ದಾರೆ. ಇದರಿಂದ, ಒಂದು ಗಂಟೆಯಲ್ಲಿ 30ಕ್ಕೂ ಹೆಚ್ಚು ರೋಗಿಗಳ ತಪಾಸಣೆ ನಡೆಸಬಹುದಾಗಿದೆ.


ಡಾ.ಏಂಜಲಾ ಬರೆಟ್ಟೊ ಕ್ಸೇವಿಯರ್



ಮಾನವೀಯ ಕ್ಷೇತ್ರದಲ್ಲಿನ ಸಾಧನೆಗಾಗಿ ಪೋರ್ಚುಗಲ್‌ನ ಲಿಸ್ಬನ್ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಡಾ. ಏಂಜೆಲಾ ಬ್ಯಾರೆಟೊ ಕ್ಸೇವಿಯರ್ ಅವರು ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಭಾರತದಲ್ಲಿ, ವಿಶೇಷವಾಗಿ ಗೋವಾದಲ್ಲಿನ ಮತಾಂತರ ಮತ್ತು ಹಿಂಸಾಚಾರದ ಆಳವಾದ ಸಂಶೋಧನೆ ಮತ್ತು ವಿಶ್ಲೇಷಣೆಗಾಗಿ ಈ ಪ್ರಶಸ್ತಿ ನೀಡಲಾಗಿದೆ. ಇಂಗ್ಲಿಷ್ ಮತ್ತು ಪೋರ್ಚುಗೀಸ್‌ನಲ್ಲಿ ಅವರ ಬರಹಗಳು ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿ ಇತಿಹಾಸದ ಮೇಲೆ ಬೆಳಕು ಚೆಲ್ಲಿವೆ.

ಪ್ರೊ. ಮಹೇಶ್ ಶಂಕರನ್



ಜೀವ ವಿಜ್ಞಾನ ಕ್ಷೇತ್ರದಲ್ಲಿನ ಸಾಧನೆಗಾಗಿ ಬೆಂಗಳೂರಿನ ರಾಷ್ಟ್ರೀಯ ಜೈವಿಕ ವಿಜ್ಞಾನ ಕೇಂದ್ರದ (ಎನ್‌ಸಿಬಿಎಸ್) ಪ್ರೊ. ಮಹೇಶ್ ಶಂಕರನ್ ಅವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಉಷ್ಣವಲಯದ ಸವನ್ನಾ ಪರಿಸರ ವಿಜ್ಞಾನದ ಕುರಿತು ಇವರು ಕೈಗೊಂಡ ಅತ್ಯುತ್ತಮ ಸಂಶೋಧನಾ ಕಾರ್ಯಗಳು, ಪಶ್ಚಿಮ ಘಟ್ಟ ಪರಿಸರ ವ್ಯವಸ್ಥೆಗಳು ಮತ್ತು ಭಾರತೀಯ ಜೀವವೈವಿಧ್ಯತೆಯನ್ನು ಉಳಿಸಿಕೊಳ್ಳಲು ಅವರು ನೀಡಿದ ಕೊಡುಗೆ ಮತ್ತು ಅಧ್ಯಯನಗಳನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗಿದೆ.

ಡಾ. ನೀರಜ್ ಕಯಾಲ್



ಗಣಿತ ವಿಜ್ಞಾನ ಕ್ಷೇತ್ರದಲ್ಲಿನ ಸಾಧನೆಗಾಗಿ ಬೆಂಗಳೂರಿನ ಮೈಕ್ರೋಸಾಫ್ಟ್ ಸಂಶೋಧನಾ ಪ್ರಯೋಗಾಲಯದ ಡಾ.ನೀರಜ್ ಕಯಾಲ್ ಅವರು ಪ್ರಶಸ್ತಿಗೆ ಭಾಜನರಾಗಿದ್ದಾರೆ.

'ಕಂಪ್ಯೂಟೇಷನಲ್ ಸಂಕೀರ್ಣತೆ'ಗೆ ನೀಡಿರುವ ಕೊಡುಗೆ ಪರಿಗಣಿಸಿ ಈ ಗೌರವ ನೀಡಲಾಗಿದೆ. ಬೀಜಗಣಿತದ ಕಂಪ್ಯೂಟೇಷನ್‌ನಲ್ಲಿ ಡಾ. ನೀರಜ್ ಅವರು ವಿನೂತನ ಕಾರ್ಯಕೈಗೊಂಡಿದ್ದಾರೆ.

ಪ್ರೊ. ಬೆಡಂಗದಾಸ್ ಮೊಹಾಂತಿ



ಭೌತವಿಜ್ಞಾನ ಕ್ಷೇತ್ರದಲ್ಲಿ ಸಾಧನೆಗಾಗಿ ಭುವನೇಶ್ವರದಲ್ಲಿರುವ ರಾಷ್ಟ್ರೀಯ ವಿಜ್ಞಾನ ಶಿಕ್ಷಣ ಮತ್ತು ಸಂಶೋಧನೆ ಸಂಸ್ಥೆಯ ಪ್ರೊ. ಬೆಡಂಗದಾಸ್ ಮೊಹಾಂತಿ ಅವರಿಗೆ ಪ್ರಶಸ್ತಿ ನೀಡಲಾಗಿದೆ.

ಇವರು ಬ್ರೂಕ್‌ಹೇವನ್‌ನ ರಾಷ್ಟ್ರೀಯ ಪ್ರಯೋಗಾಲಯ ಮತ್ತು ಯುರೋಪಿಯನ್ ಪರಮಾಣು ಸಂಶೋಧನೆಯ ಸಂಸ್ಥೆಯಲ್ಲಿ ಸಂಶೋಧನೆ ಕೈಗೊಂಡಿದ್ದಾರೆ.

ಡಾ. ಪ್ರತೀಕ್ಷಾ ಬಾಕ್ಸಿ



ಸಮಾಜ ವಿಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ನವದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಕಾನೂನು ಮತ್ತು ಆಡಳಿತದ ಅಧ್ಯಯನ ಕೇಂದ್ರದ ಡಾ. ಪ್ರತೀಕ್ಷಾ ಬಾಕ್ಸಿ ಅವರು ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಲೈಂಗಿಕ ಹಿಂಸೆ ಮತ್ತು ನ್ಯಾಯಶಾಸ್ತ್ರದ ಕುರಿತು ಅವರು ವಿಶೇಷ ಅಧ್ಯಯನ ನಡೆಸಿದ್ದಾರೆ. ಜನಾಂಗೀಯ ನೀತಿಗಳು ಕುರಿತು ಸಂಶೋಧನೆ ಕೈಗೊಂಡಿರುವ ಅವರು ಈ ಬಗ್ಗೆ ಅಪಾರ ಅಧ್ಯಯನ ಮತ್ತು ವಿಶ್ಲೇಷಣೆ ಕೈಗೊಂಡಿದ್ದಾರೆ.

'ಗೆಲುವಿದ್ದಲ್ಲಿ ಕುಟುಂಬಕ್ಕೆ, ಸೋಲುವ ಕಡೆ ಅನ್ಯರಿಗೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕುಟುಂಬ ರಾಜಕಾರಣಕ್ಕೆ ಜೆಡಿಎಸ್ ಹೆಸರುವಾಸಿ. ಕಾರ್ಯಕರ್ತರನ್ನು ದುಡಿಸಿಕೊಳ್ಳುವುದಷ್ಟೇ ಅವರ ಕೆಲಸ. ಅವರ (ಎಚ್.ಡಿ. ದೇವೇಗೌಡ) ಮನೆಯಲ್ಲಿ ಎಂಟನೆಯವರು ರಾಜಕೀಯಕ್ಕೆ ಬಂದಿದ್ದಾರೆ. ಎಲ್ಲಿ ಗೆಲ್ಲಲು ಅವಕಾಶ ಇದೆ ಅವರು ನಿಲ್ಲುತ್ತಾರೆ. ಎಲ್ಲಿ ಸೋಲುತ್ತಾರೆ ಅಲ್ಲಿ ಬೇರೆಯವರನ್ನು ಕಣಕ್ಕೆ ಇಳಿಸುತ್ತಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಗುರುವಾರ ಮಾತನಾಡಿದ ಅವರು, 'ಗೋ ಹತ್ಯೆ ನಿಷೇಧ ಕಾಯ್ದೆ ಬಂದಾಗ ಜೆಡಿಎಸ್ ನಾಯಕ ಎಚ್.ಡಿ. ದೇವೇಗೌಡರು ಮಾತನಾಡಲಿಲ್ಲ. ಈಗ ನರೇಂದ್ರ ಮೋದಿ ಜೊತೆ ಭಾಯಿ ಭಾಯಿ ಅಂತಾರೆ. ಇವರು ಬಿಜೆಪಿ ಜೊತೆ ಸೇರಿ ಸರ್ಕಾರ ಮಾಡಿದವರು' ಎಂದು ಕುಟುಕಿದರು.

'ಜೆಡಿಎಸ್‌ನವರದ್ದು ಅವಕಾಶವಾದಿ ರಾಜಕಾರಣ. ಅವರಿಗೆ ಯಾವುದೇ ಸಿದ್ಧಾಂತ, ಕಾರ್ಯಕ್ರಮ ಇಲ್ಲ. ಅದಕ್ಕೆ ಜೆಡಿಎಸ್ ಪಕ್ಷವನ್ನು ಬಿಜೆಪಿಯ ಬಿ ಟೀಂ ಎಂದು ಹೇಳುವುದು. ನಾನು ಬಿ ಟೀಂ ಎಂದು ಹೇಳಿದರೆ ಅವರಿಗೆ ಸಿಟ್ಟು ಬರುತ್ತದೆ' ಎಂದರು.

'ಕರ್ನಾಟಕದಲ್ಲಿ ನಡೆಯುತ್ತಿರುವ ಕಮಿಷನ್ ದಂಧೆಯ ಬಗ್ಗೆ ಪ್ರಧಾನಿಗೆ ಗುತ್ತಿಗೆದಾರರು ಪತ್ರ ಬರೆದಿದ್ದಾರೆ. ರಾಜ್ಯದಲ್ಲಿ ಶೇ 40ರಷ್ಟು ಕಮಿಷನ್ ದಂಧೆ ನಡೆಯುತ್ತಿದೆ. ಈ ಬಗ್ಗೆ ತಕ್ಷಣ ತನಿಖೆ ಮಾಡಿಸಬೇಕಲ್ಲವೇ' ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

'ಬಿಜೆಪಿ ಅಂದರೆ ಭ್ರಷ್ಟ ಜನತಾ ಪಾರ್ಟಿ. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಬಸವರಾಜ ಬೊಮ್ಮಾಯಿ ಗೃಹಸಚಿವರಾಗಿದ್ದವರು. ಬಿಜೆಪಿಯಲ್ಲಿರುವವರ ಭ್ರಷ್ಟಾಚಾರದ ಬಗ್ಗೆ ಬೊಮ್ಮಾಯಿಗೆ ಗೊತ್ತಿರಲಿಲ್ಲವೇ' ಎಂದೂ ಪ್ರಶ್ನಿಸಿದರು.

'ಅದಾನಿ ವಿಶ್ವದಲ್ಲೇ ನಂಬರ್ ವನ್ ಶ್ರೀಮಂತ. ಅಂಬಾನಿಗಿಂತ ದೊಡ್ಡ ಶ್ರೀಮಂತನಾಗಿದ್ದಾನೆ. ಇದಕ್ಕೆ ಪ್ರಧಾನಿ ಮೋದಿಯವರ ಕುಮ್ಮಕ್ಕಿದೆ. ಬಿ.ಕಾಂ ಓದಲು ಅದಾನಿಗೆ ಆಗಲಿಲ್ಲ. ಅಂಥವನು ಇಂದು ಏಷ್ಯಾದಲ್ಲೇ ದೊಡ್ಡ ಶ್ರೀಮಂತ' ಎಂದೂ ವ್ಯಂಗ್ಯವಾಡಿದರು.

'ಬಿ ಟೀಂ ಎಂದು ಬರೆಸಿ ಕೊರಳಿಗೆ ಹಾಕಿಕೊಳ್ಳಲಿ'

'ಜೆಡಿಎಸ್ ಬಿಜೆಪಿಯ ಬಿ ಟೀಂ ಅಂತ ಸಿದ್ದರಾಮಯ್ಯ ಪದೇ ಪದೇ ಹೇಳುವ ಬದಲು, ಅದನ್ನೇ ಒಂದು ಸ್ಲೇಟಿನಲ್ಲಿ ಬರೆದುಕೊಂಡು ಕಟ್ಟಿ ಹಾಕಿಸಿ ಕುತ್ತಿಗೆಗೆ ಹಾಕಿಕೊಂಡು ತಿರುಗಾಡಲಿ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಸಿದ್ದರಾಮಯ್ಯ ಟೀಕೆಗೆ ಪ್ರತಿಕ್ರಿಯಿಸಿದ ಅವರು, 'ಬಿಜೆಪಿಯ ಬಿ ಟೀಂ ಎಂದು ಪ್ರಚಾರ ಮಾಡಿಕೊಂಡು ದಿನವೂ ಓಡಾಡಿಕೊಂಡೇ ಇರಲಿ' ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

11ರಿಂದ 'ದಿ ನೋಟ್' ನಾಟಕ ಪ್ರದರ್ಶನ

ಬೆಂಗಳೂರು: 'ದೊಮ್ಮಲೂರಿನ ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ ಇದೇ 11 ಮತ್ತು 12ರಂದು 'ದಿ ನೋಟ್' ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ' ಎಂದು ವೆಂಚರ್ಸ್ ಥಿಯೇಟರ್‌ನ ಸಂಸ್ಥಾಪಕ ಸುಸಂತೋ ಬ್ಯಾನರ್ಜಿ ತಿಳಿಸಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮೊದಲ ದಿನ ಸಂಜೆ 7 ಗಂಟೆಗೆ ಹಾಗೂ ಎರಡನೇ ದಿನ ಮಧ್ಯಾಹ್ನ 3 ಮತ್ತು ಸಂಜೆ 7 ಗಂಟೆಗೆ ಪ್ರದರ್ಶನ ನಡೆಯಲಿದೆ. ಪ್ರವೇಶ ಶುಲ್ಕ ₹ 500 ನಿಗದಿಪಡಿಸಲಾಗಿದೆ' ಎಂದು ಹೇಳಿದರು.

ವಿದ್ಯುತ್ ವ್ಯತ್ಯಯ

ಬೆಂಗಳೂರು: ವಿದ್ಯುತ್ ತುರ್ತು ನಿರ್ವಹಣಾ ಕಾರ್ಯ ಕೈಗೊಂಡಿರುವುದರಿಂದ ಇದೇ 3 ಮತ್ತು 4ರಂದು ಬೆಳಿಗ್ಗೆ 10ರಿಂದ 5ರವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಡಿ.3ರಂದು ವಿಜಯ ಚಿತ್ರಮಂದಿರ ಹಿಂಭಾಗ, ಬ್ಯಾಟರಾಯನಪುರ ಸರ್ಕಾರಿ ಶಾಲೆ, ಎಂ.ಎಂ. ರಸ್ತೆ, ಬಾಲಾಜಿ ಬಡಾವಣೆ, ವಿಜಯಶ್ರೀ ಬಡಾವಣೆ, ದೊಡ್ಡಬಸ್ತಿ ರಸ್ತೆ, ಸಿದ್ದಿ ವಿನಾಯಕ ಬಡಾವಣೆ, ಟ್ಯಾಂಕ್ ಬಂಡ್ ರಸ್ತೆ, ಸುತ್ತಮುತ್ತ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಡಿ.4ರಂದು ಅಕ್ಷಯನಗರ, ಭಟ್ರಹಳ್ಳಿ, ಕೆ.ವಿ.ಬಡಾವಣೆ, ಕೃಷ್ಣ ಚಿತ್ರಮಂದಿರ, ಬಸವನಪುರ ರಸ್ತೆ, ಗೋಕುಲ ಬಡಾವಣೆ, ಗಾಯತ್ರಿ ಬಡಾವಣೆ, ಎಸ್.ಆರ್. ಬಡಾವಣೆಯ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಶಿಕ್ಷಕರ ವರ್ಗಾವಣೆ ಕಾಯ್ದೆ ತಿದ್ದುಪಡಿ: ಕ್ರಮಕ್ಕೆ ಸೂಚನೆ

ಬೆಂಗಳೂರು: ಸೇವಾ ಅವಧಿಯಲ್ಲಿ ಬಯಸುವ ಜಿಲ್ಲೆಗೆ ಒಂದು ಬಾರಿಗೆ ವರ್ಗಾವಣೆಗೆ ಅವಕಾಶ ಕಲ್ಪಿಸಿ, ಶಿಕ್ಷಕರ ವರ್ಗಾವಣೆ ಕಾಯ್ದೆಗೆ ತಿದ್ದುಪಡಿ ತರುವಂತೆ ಶಿಕ್ಷಕರ ಸಂಘ ಬೇಡಿಕೆ ಸಲ್ಲಿಸಿದ್ದು, ಈ ನಿಟ್ಟಿನಲ್ಲಿ ಮಸೂದೆ ಮಂಡಿಸಲು ನಿಯಮಾನುಸಾರ ಕ್ರಮ ತೆಗೆದುಕೊಳ್ಳುವಂತೆ ಇಲಾಖೆಯ ಕಾರ್ಯದರ್ಶಿಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಸೂಚಿಸಿದ್ದಾರೆ.

'ಪರಸ್ಪರ ವರ್ಗಾವಣೆಗೆ ಮುಕ್ತ ಅವಕಾಶ ಮತ್ತು ಶೇ 25ಕ್ಕಿಂತ ಹೆಚ್ಚು ಹುದ್ದೆಗಳು ಖಾಲಿ ಇರುವ ಸ್ಥಳಗಳಿಗೆ ಯಾವುದೇ ನಿಬಂಧನೆಗಳಿಲ್ಲದೆ ವರ್ಗಾವಣೆಗೆ ಅವಕಾಶ ಕಲ್ಪಿಸಲು ಕಾಯ್ದೆ ತಿದ್ದುಪಡಿಗೆ ಬೆಳಗಾವಿಯಲ್ಲಿ ನಡೆಯಲಿರುವ ಚಳಿಗಾಲದ ಅಧಿವೇಶನದಲ್ಲಿ ಮಸೂದೆ ಮಂಡಿಸುವಂತೆ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಮನವಿ ಸಲ್ಲಿಸಿದೆ. ಸಂಘದ ಮನವಿಯನ್ನು ಪರಿಶೀಲಿಸಿ, ಅಗತ್ಯ ಕ್ರಮ ತೆಗೆದುಕೊಳ್ಳಬೇಕು' ಎಂದರು.

ನಗರದಲ್ಲಿ ಇಂದು

ಭಾರತೀಯ ಮೌಲ್ಯಮಾಪಕರ 52ನೇ ಸಮಾವೇಶ: ಮುಖ್ಯ ಅತಿಥಿಗಳು: ಬಸವರಾಜ ಬೊಮ್ಮಾಯಿ, ಮುರುಗೇಶ್ ನಿರಾಣಿ, ಕೆ.ಆರ್. ವೇಣುಗೋಪಾಲ್, ಆರ್. ನಾರಾಯಣಸ್ವಾಮಿ, ಆಯೋಜನೆ: ಇನ್‌ಸ್ಟಿಟ್ಯೂಟ್ ಆಫ್ ವ್ಯಾಲ್ಯೂವರ್ಸ್, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು, ಬೆಳಿಗ್ಗೆ 9.30

ಮಣ್ಣೆ ಮೋಹನ್ ಅವರ 'ನನ್ನ ಲೇಖನಗಳು' ಪುಸ್ತಕ ಬಿಡುಗಡೆ ಸಮಾರಂಭ: ಉದ್ಘಾಟನೆ: ಕೆ.ನ. ಲಿಂಗೇಗೌಡ, ಉಪನ್ಯಾಸ: ತಲಕಾಡು ಚಿಕ್ಕರಂಗೇಗೌಡ, ಅತಿಥಿಗಳು: ಪಿ. ಶಿವಕುಮಾರ್, ಎಂ.ಎನ್. ಮುಕುಂದರಾಜು, ಅಧ್ಯಕ್ಷತೆ: ಎಂ.ಆರ್. ವೆಂಕಟೇಶ್, ಆಯೋಜನೆ: ಜಾಗೃತಿ ಟ್ರಸ್ಟ್, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬಸವನಗುಡಿ, ಬೆಳಿಗ್ಗೆ 10.30

ವೈದ್ಯಕೀಯ ವಲಯದಲ್ಲಿ ಕನ್ನಡ ಕಾರ್ಯಾಗಾರ: ಉದ್ಘಾಟನೆ: ವಿಜಯಲಕ್ಷ್ಮಿ ದೇಶಮಾನೆ, ಅಧ್ಯಕ್ಷತೆ: ಟಿ.ಎಸ್. ನಾಗಾಭರಣ, ಅತಿಥಿಗಳು: ಎನ್.ಎಂ. ನಾಗರಾಜ, ಸ್ಥಳ: ಕೊಠಡಿ ಸಂಖ್ಯೆ 419, 4ನೇ ಮಹಡಿ, ವಿಕಾಸಸೌಧ, ಬೆಳಿಗ್ಗೆ 11

ಪೊಲೀಸ್ ಠಾಣೆ ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅತಿಥಿಗಳು: ಆರಗ ಜ್ಞಾನೇಂದ್ರ, ವಿ. ಸೋಮಣ್ಣ, ಆರ್. ಅಶೋಕ, ತೇಜಸ್ವಿ ಸೂರ್ಯ, ಅ. ದೇವೇಗೌಡ, ಪ್ರವೀಣ್ ಸೂದ್, ಕಮಲ್ ಪಂತ್, ಸ್ಥಳ: ಸರಸ್ವತಿನಗರ, ಸಂಜೆ: 5

ಕಾರ್ತೀಕ ದೀಪೋತ್ಸವ: ಆಯೋಜನೆ ಹಾಗೂ ಸ್ಥಳ: ಉಡುಪಿ ಪಲಿಮಾರು ಮಠ, ಸಂಪಿಗೆ ರಸ್ತೆ, ಮಲ್ಲೇಶ್ವರ, ಸಂಜೆ 6.30

ದ್ವಿತೀಯ ಪಿಯುಸಿ ಅರ್ಧ ವಾರ್ಷಿಕ ಪರೀಕ್ಷೆಗೆ ಹಾಲ್ ಟಿಕೆಟ್

ಬೆಂಗಳೂರು: ಇದೇ ಮೊದಲ ಬಾರಿಗೆ ದ್ವಿತೀಯ ಪಿಯುಸಿ ಅರ್ಧ ವಾರ್ಷಿಕ ಪರೀಕ್ಷೆಯನ್ನು ವಾರ್ಷಿಕ ಪರೀಕ್ಷೆಯ ಮಾದರಿಯಲ್ಲಿ ನಡೆಸಲು ಪದವಿ ಪೂರ್ವ ಶಿಕ್ಷಣ ಇಲಾಖೆ ಮುಂದಾಗಿದ್ದು, ಅರ್ಹ ವಿದ್ಯಾರ್ಥಿಗಳ ಚೆಕ್ ಲಿಸ್ಟ್ ಆಧರಿಸಿ, ಪ್ರವೇಶ ಪತ್ರಗಳನ್ನು (ಹಾಲ್ ಟಿಕೆಟ್) ಆಯಾ ಕಾಲೇಜುಗಳ ಲಾಗ್ ಇನ್‌ನಲ್ಲಿ ಒದಗಿಸಿದೆ.

ಇಲಾಖೆಯ ಇ- ಆಡಳಿತ ವಿಭಾಗವು ಈ ಕುರಿತು ಜಿಲ್ಲಾ ಉಪ ನಿರ್ದೇಶಕರಿಗೆ ಮಾಹಿತಿ ನೀಡಿದೆ. ಅಲ್ಲದೆ, ಜಿಲ್ಲೆಯ ಎಲ್ಲ ಪ್ರಾಚಾರ್ಯರಿಗೆ ಈ ವಿಷಯ ತಿಳಿಸುವಂತೆ ಮನವಿ ಮಾಡಿದೆ.

'ಕೈ' ತೆಕ್ಕೆಗೆ ಜೆಡಿಎಸ್‌ನ ಮನೋಹರ್

ಪ್ರಜಾವಾಣಿ ವಾರ್ತೆ



ಪಕ್ಷದ ಧ್ವಜ ನೀಡಿ ಸಿ.ಆರ್. ಮನೋಹರ್ ಅವರನ್ನು ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರು ಕಾಂಗ್ರೆಸ್ ಪಕ್ಷಕ್ಕೆ ಬರಮಾಡಿಕೊಂಡರು

ಬೆಂಗಳೂರು: ವಿಧಾನ ಪರಿಷತ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಿರುವ ಸಿ. ಆರ್. ಮನೋಹರ್ ಅವರು ಜೆಡಿಎಸ್ ತ್ಯಜಿಸಿ ಕಾಂಗ್ರೆಸ್ ಸೇರಿದ್ದಾರೆ. ಅವರ ಜೊತೆ, ಮಾಲೂರಿನ ಮಾಜಿ ಶಾಸಕ, ಬಿಜೆಪಿ ಮುಖಂಡ ನಾಗರಾಜು ಅವರು ಮಾತೃಪಕ್ಷ ಕಾಂಗ್ರೆಸ್‌ಗೆ ಮರಳಿದ್ದಾರೆ.

ಅಲ್ಲದೆ, ರಾಜ್ಯ ಮಡಿವಾಳರ ಸಂಘದ ನಂಜಪ್ಪ, ಅಮರನಾಥ್, ಕಳೆದ ಚುನಾವಣೆಯಲ್ಲಿ ತರೀಕೆರೆ ಕ್ಷೇತ್ರದಿಂದ ಸ್ಪರ್ಧಿಸಿದ್ದ ಜೆಡಿಎಸ್‌ನ ಗೋಪಿಕೃಷ್ಣ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಅನುಸೂಯ ಕೂಡಾ ಕಾಂಗ್ರೆಸ್ ಸೇರಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸಮ್ಮುಖದಲ್ಲಿ ತಮ್ಮ ಬೆಂಬಲಿಗರ ಜೊತೆ ಎಲ್ಲರೂ ಕಾಂಗ್ರೆಸ್ ಸೇರ್ಪಡೆಯಾದರು.

ಈ ಸಂದರ್ಭದಲ್ಲಿ ಮಾತನಾಡಿದ ಡಿ.ಕೆ. ಶಿವಕುಮಾರ್, 'ಕಾಂಗ್ರೆಸ್ ಜಾತ್ರೆ ಆರಂಭವಾಗಿದೆ. ಪಕ್ಷದಲ್ಲಿ ಸಂಚಲನ ಉಂಟಾಗಿದೆ. ಪಕ್ಷದ ಕಡೆ ಹಲವರು ಮುಖ ಮಾಡುತ್ತಿದ್ದಾರೆ. ಮನೋಹರ್ ಅವರು ಯಾವುದೇ ಷರತ್ತು ಇಲ್ಲದೆ ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ. ಅವರ ಜೊತೆ ನೂರಾರು ಬೆಂಬಲಿಗರು ಸೇರಿದ್ದಾರೆ. ಎಲ್ಲರೂ ಪಕ್ಷದ ಸಿದ್ಧಾಂತ ಒಪ್ಪಿ ಪಕ್ಷಕ್ಕೆ ಬಂದಿದ್ದಾರೆ' ಎಂದರು.

'ಬಿಜೆಪಿ, ಜೆಡಿಎಸ್ ತ್ಯಜಿಸಿ ಹಲವರು ಕಾಂಗ್ರೆಸ್ ಕಡೆಗೆ ಬರುತ್ತಿದ್ದಾರೆ. ಜೆಡಿಎಸ್‌ನ ಕುಟುಂಬ ರಾಜಕಾರಣಕ್ಕೆ ಬೇಸತ್ತಿದ್ದಾರೆ. ಹೀಗಾಗಿ ನಮ್ಮ ಪಕ್ಷದತ್ತ ಮುಖ ಮಾಡುತ್ತಿದ್ದಾರೆ' ಎಂದೂ ಅವರು ಹೇಳಿದರು.

ಹೋರಾಟ: 'ಮೇಕೆದಾಟು ಯೋಜನೆಗೆ ಆಗ್ರಹಿಸಿ ಜನವರಿ ಮೊದಲ ವಾರದಲ್ಲಿ ಪಾದಯಾತ್ರೆ ಹಮ್ಮಿಕೊಳ್ಳುತ್ತೇವೆ. ಕೇವಲ ಕಾವೇರಿ ಕೊಳ್ಳದವರು ಮಾತ್ರ ಈ ಹೋರಾಟದಲ್ಲಿ ಭಾಗವಹಿಸುವುದಿಲ್ಲ. ಕೋಲಾರ, ತುಮಕೂರು ಸೇರಿ ಎಲ್ಲ ಕಡೆಯಿಂದಲೂ ಭಾಗವಹಿಸಲಿದ್ದಾರೆ' ಎಂದರು.

ಗಾಂಧೀಜಿ ಕುರಿತ ಲೇಖನ ಸ್ಪರ್ಧೆ

ಬೆಂಗಳೂರು: ಗಾಂಧಿ ಶಾಂತಿ ಪ್ರತಿಷ್ಠಾನವು 2022ರ ಜನವರಿ 30ರಂದು ಸರ್ವೋದಯ ದಿನದ ಅಂಗವಾಗಿ ರಾಜ್ಯಮಟ್ಟದ ಲೇಖನ ಸ್ಪರ್ಧೆ ಆಯೋಜಿಸಿದೆ.

'ಅಂದಿಗೂ–ಇಂದಿಗೂ ಪ್ರಸ್ತುತ ಗಾಂಧಿ ವಿಚಾರಧಾರೆ' ಲೇಖನದ ವಸ್ತುವಾಗಿದೆ. ಗಾಂಧಿ ಚಿಂತನೆ ಹಾಗೂ ಇಂದಿನ ಪರಿಸ್ಥಿತಿ ಮತ್ತು ಸವಾಲುಗಳ ಕುರಿತು ಗಾಂಧಿಗೆ ಒಂದು ಪತ್ರ ಎನ್ನುವ ಲೇಖನ ಸ್ಪರ್ಧೆ ಆಯೋಜಿಸಲಾಗಿದೆ. 15ರಿಂದ 30 ವಯೋಮಿತಿಯವರು ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದು.

ಸ್ಪರ್ಧಿಗಳು ತಮ್ಮ ಲೇಖನ ಅಥವಾ ಪತ್ರಗಳನ್ನು ಅಧ್ಯಕ್ಷರು, ಗಾಂಧಿ ಶಾಂತಿ ಪ್ರತಿಷ್ಠಾನ, ಗಾಂಧಿ ಭವನ, ಕುಮಾರ್ ಪಾರ್ಕ್ ಪೂರ್ವ, ಬೆಂಗಳೂರು-560001 ಈ ವಿಳಾಸಕ್ಕೆ ಡಿಸೆಂಬರ್ 31ರ ಒಳಗೆ ಕಳುಹಿಸಬೇಕು. ಜನ್ಮ ದಿನಾಂಕ, ದೂರವಾಣಿ ಸಂಖ್ಯೆ ನಮೂದಿಸಬೇಕು.

editor.abc2020@gmail.com ವಿವರಗಳಿಗೆ 90356 18076 / 80880 13083 ಸಂಪರ್ಕಿಸಬಹುದು.

ಡಾ. ವಿ.ಪಿ. ನಿರಂಜನಾರಾಧ್ಯ ಹೇಳಿಕೆ

ಮೊಟ್ಟೆ ವಿತರಣೆಗೆ ವಿರೋಧ ಸರಿಯಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪೌಷ್ಟಿಕತೆ ನಿವಾರಿಸಲು ಕಲ್ಯಾಣ ಕರ್ನಾಟಕದ ಭಾಗದ 7 ಜಿಲ್ಲೆಗಳ ಶಾಲಾ ಮಕ್ಕಳಿಗೆ ಮೊಟ್ಟೆ ಮತ್ತು ಹಣ್ಣು ಕೊಡುವ ಸರ್ಕಾರದ ನಿರ್ಧಾರವನ್ನು ಕೆಲ ಮೂಲಭೂತವಾದಿ ಧಾರ್ಮಿಕ ಸಂಘಟನೆಗಳು ವಿರೋಧಿಸುತ್ತಿರುವುದು ವಿಷಾದನೀಯ ಎಂದು ಶಾಲಾಭಿವೃದ್ಧಿ ಸಮಿತಿಗಳ ಸಮನ್ವಯ ವೇದಿಕೆ ಪ್ರತಿಪಾದಿಸಿದೆ.

ಈ ಕುರಿತ ಹೇಳಿಕೆ ಬಿಡುಗಡೆ ಮಾಡಿರುವ ವೇದಿಕೆಯ ಡಾ. ವಿ.ಪಿ. ನಿರಂಜನಾರಾಧ್ಯ ಅವರು, ನಮ್ಮ ಮಕ್ಕಳಿಗೆ ಪ್ರೋಟಿನ್ ಯುಕ್ತ ಆಹಾರ ನಿರಂತರವಾಗಿ ದೊರೆಯುತ್ತಿಲ್ಲ. ಇದರಿಂದಾಗಿ ಮಕ್ಕಳ ದೈಹಿಕ, ಮಾನಸಿಕ, ಬೌದ್ಧಿಕ ಬೆಳವಣಿಗೆಯ ಮೇಲೆ ದುಷ್ಪರಿಣಾಮ ಉಂಟಾಗಿದೆ ಎಂದೂ ವರದಿಗಳೂ ಹೇಳಿವೆ. ಪರಿಸ್ಥಿತಿ ಹೀಗಿರುವಾಗ, ಸದುದ್ದೇಶದಿಂದ ಆರಂಭಿಸಿರುವ ಮೊಟ್ಟೆ ವಿತರಣೆ ಯೋಜನೆಯನ್ನು ವಿರೋಧದ ಕಾರಣಕ್ಕೆ ಸರ್ಕಾರ ಕೈಬಿಡಬಾರದು. ಈ ವಿಷಯದಲ್ಲಿ ಜಾತಿ, ಧರ್ಮ ಹಾಗೂ ರಾಜಕೀಯ ಬೆರೆಸದೆ ಮಕ್ಕಳ ಬೆಳವಣಿಗೆಯ ದೃಷ್ಟಿಯಿಂದ ಈ ನಿರ್ಧಾರವನ್ನು ಜಾರಿಗೊಳಿಸಬೇಕಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ರಾಜ್ಯದಲ್ಲಿ ಶೇ 32 ರಷ್ಟು ಮಕ್ಕಳು ಕಡಿಮೆ ತೂಕ , ಶೇ 32.5 ಮಕ್ಕಳು ಕುಂಠಿತ ಬೆಳವಣಿಗೆ , ಶೇ 45.2 ಮಕ್ಕಳು, ಮಹಿಳೆಯರು ರಕ್ತ ಹೀನತೆ ಹಾಗೂ10 ರಿಂದ 19 ವರ್ಷ ವಯಸ್ಸಿನ ಶೇ17.2 ರಷ್ಟು ಮಕ್ಕಳು ತೀವ್ರ ರಕ್ತ ಹೀನತೆ ಹೊಂದಿದ್ದಾರೆ ಎಂದು 2020-21 ರ ನೀತಿ ಆಯೋಗದ ವರದಿಯು ವರದಿ ಹೇಳಿದೆ. ಇಂತಹ ಸಂದರ್ಭದಲ್ಲಿ ಸರ್ಕಾರ ಯಾವುದೇ ಒತ್ತಡಕ್ಕೆ ಮಣಿಯದೇ, ಮೊಟ್ಟೆ ಮತ್ತು ಹಣ್ಣು ವಿತರಿಸುವ ಯೋಜನೆಯನ್ನು ಎಲ್ಲ ಜಿಲ್ಲೆಗಳಿಗೂ ವಿಸ್ತರಿಸಬೇಕು. ಮೊಟ್ಟೆ ತಿನ್ನದ ಮಕ್ಕಳಿಗೆ ಪರ್ಯಾಯ ಹಣ್ಣು ಮತ್ತು ಕಾಳುಗಳನ್ನು ವಿತರಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

'ಮೊಟ್ಟೆಗೆ ಅಪಸ್ವರ: ಮೂರ್ಖತನ'



'ಮೊಟ್ಟೆ ಎಂಬುದು ಸಸ್ಯಹಾರವೋ ಇಲ್ಲ ಮಾಂಸಹಾರವೋ ಎಂಬ ಚರ್ಚೆ ಜೀವಂತವಾಗಿರುವಾಗಲೇ ಮೊಟ್ಟೆ ವಿತರಣೆ ಬಗ್ಗೆ ಅಪಸ್ವರ ಎತ್ತುವುದು ಮೂರ್ಖತನದ ಪರಮಾವಧಿ' ಎಂದು ಕಾಂಗ್ರೆಸ್ ಮುಖಂಡ ಡಾ. ಎಚ್.ಸಿ. ಮಹದೇವಪ್ಪ ಹೇಳಿದ್ದಾರೆ.

'ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ಭಾರತವು ನೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಿರುವ ವಿಷಮ ಸಂದರ್ಭದಲ್ಲಿ ನಮ್ಮ ಹೋರಾಟ ಇರಬೇಕಾದ್ದು ಹಸಿವಿನ ವಿರುದ್ಧವೇ ವಿನಃ ಆಹಾರದ ವಿರುದ್ಧ ಅಲ್ಲ. ಸಾಧ್ಯವಾದರೆ ಮಕ್ಕಳಿಗೆ ಉತ್ತಮ ಆಹಾರ ನೀಡಲು ಪ್ರಯತ್ನಿಸಿ, ಇಲ್ಲವೇ ಸುಮ್ಮನಿರಿ' ಎಂದು ಅವರು ಸಲಹೆ ನೀಡಿದ್ದಾರೆ.

'ಬಡತನ, ಹಸಿವು ಮತ್ತು ದಾಸೋಹದ ಕಲ್ಪನೆ ಅರಿಯದ ಮತ್ತು ವೈಜ್ಞಾನಿಕತೆಯನ್ನು ಸದಾ ಕೊಲೆ ಮಾಡುವಂತೆ ವರ್ತಿಸುವ ಪಟ್ಟಭದ್ರ ಹಿತಾಸಕ್ತಿಗಳು ಬಡವರ ಆಹಾರದ ಮೇಲೆ ದಾಳಿ ನಡೆಸುತ್ತಿರುವುದು ಅಮಾನವೀಯ ಸಂಗತಿ' ಎಂದವರು ಹೇಳಿದ್ದಾರೆ.



ಸಭೆಯಲ್ಲಿ ಯೂಸುಫ್ ಶರೀಫ್, ಎಂ.ನಾರಾಯಣಸ್ವಾಮಿ, ಡಿ.ಕೆ.ಶಿವಕುಮಾರ್, ರಾಮಲಿಂಗಾರೆಡ್ಡಿ, ರಿಜ್ವಾನ್ ಅರ್ಷದ್, ಕೃಷ್ಣಬೈರೇಗೌಡ ಇದ್ದರು.

‘ನಗರದ ಅಭಿವೃದ್ಧಿಗೆ ನಯಾಪೈಸೆ ನೀಡದ ಬಿಜೆಪಿ’

ಯಲಹಂಕ: ‘ಬಿಜೆಪಿಯವರ ಇಲ್ಲಸಲ್ಲದ ದೂರು ಮತ್ತು ಆರೋಪಗಳಿಗೆ ಕಿವಿಗೊಡದೆ, ಎಲ್ಲರೂ ಒಗ್ಗಟ್ಟಾಗಿ ವಿಧಾನಪರಿಷತ್ ಚುನಾವಣೆಯನ್ನು ಎದುರಿಸಿ, ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ಇಡೀ ರಾಜ್ಯ ಮತ್ತು ರಾಷ್ಟ್ರಕ್ಕೆ ಸಂದೇಶ ರವಾನಿಸಬೇಕು’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ವೀರಣ್ಣಪಾಳ್ಯ ಸಮೀಪದ ಮ್ಯಾನ್ಪೊ ಕನ್ವೆನ್ಷನ್ ಸೆಂಟರ್‌ನಲ್ಲಿ ವಿಧಾನ ಪರಿಷತ್‌ನ ಬೆಂಗಳೂರು ನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಯೂಸುಫ್ ಶರೀಫ್ ಪರ ಚುನಾವಣಾ ಪ್ರಚಾರಸಭೆಯಲ್ಲಿ ಅವರು ಮಾತನಾಡಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಮಾತನಾಡಿ, ‘ಕಳೆದ 2 ವರ್ಷಗಳಿಂದ ಬಿಜೆಪಿ ಸರ್ಕಾರ ಬೆಂಗಳೂರಿನ ಅಭಿವೃದ್ಧಿಗಾಗಿ ಪಾಲಿಕೆಗೆ ನಯಾಪೈಸೆ ಅನುದಾನ ನೀಡಿಲ್ಲ. ಹೀಗಾದರೆ ಅಭಿವೃದ್ಧಿ ಕೆಲಸಗಳು ನಡೆಯಲು ಹೇಗೆ ಸಾಧ್ಯ?’ ಎಂದು ಪ್ರಶ್ನಿಸಿದರು. ಶಾಸಕ ಕೃಷ್ಣಬೈರೇಗೌಡ ಮಾತನಾಡಿ, ‘ಬಿಜೆಪಿಯವರು ಬೇರೆಯವರ ಕೈಗೆ ಅಧಿಕಾರ ಹೋಗದೆ ಕೇವಲ ಶಾಸಕರು, ಸಂಸದರ ಕೈಯಲ್ಲಿ ಮಾತ್ರ ಇರಬೇಕೆಂಬ ನಂಬಿಕೆಯಲ್ಲಿದ್ದಾರೆ. ಹೀಗಾಗಿ ಬಿಬಿಎಂಪಿ, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಅಧಿಕಾರಾವಧಿ ಮುಗಿದು ಹಲವು ತಿಂಗಳುಗಳು ಕಳೆದಿದ್ದರೂ ಸಹ ಇನ್ನೂ ಚುನಾವಣೆ ನಡೆಸುವ ಮುನ್ಸೂಚನೆ ಇಲ್ಲ’ ಎಂದರು.

ಶಾಸಕರಾದ ಬೈರತಿ ಸುರೇಶ್, ರಿಜ್ವಾನ್ ಅರ್ಷದ್, ಶಿವಣ್ಣ, ಮಾಜಿ ಸಚಿವ ಎಚ್.ಎಂ.ರೇವಣ್ಣ, ವಿಧಾನಪರಿಷತ್ ಮಾಜಿ ಸದಸ್ಯ ಎಂ. ನಾರಾಯಣಸ್ವಾಮಿ, ಬೆಂಗಳೂರು ಉತ್ತರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ರಾಜಕುಮಾರ್, ಮುಖಂಡರಾದ ಪಿ.ಆರ್.ರಮೇಶ್, ಎಂ.ಜಯಗೋಪಾಲಗೌಡ, ದಾನೇಗೌಡ, ಟಿ.ಜಿ.ಚಂದ್ರು ಮತ್ತಿತರರು ಉಪಸ್ಥಿತರಿದ್ದರು.

ಕಟ್ಟಡ ನಿರ್ಮಾಣ ಸಾಮಗ್ರಿ ದರ ಇಳಿಕೆ ಮಾಡಲು ಕಾರ್ಮಿಕರ ಆಗ್ರಹ

‘ದರ ಹೆಚ್ಚಳದಿಂದ ಉದ್ಯೋಗ ನಷ್ಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಟ್ಟಡ ನಿರ್ಮಾಣ ಸಾಮಗ್ರಿಗಳ ದರ ಹೆಚ್ಚಳದಿಂದ ಕಾಮಗಾರಿಗಳು ಅರ್ಧಕ್ಕೆ ನಿಲ್ಲುತ್ತಿವೆ. ಕಾರ್ಮಿಕರು ಕೆಲಸ ಕಳೆದುಕೊಳ್ಳುತ್ತಿದ್ದಾರೆ’ ಎಂದು ಆರೋಪಿಸಿ ಕಟ್ಟಡ ನಿರ್ಮಾಣ ಕಾರ್ಮಿಕರು ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

‘ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್’ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ‘ಕಟ್ಟಡ ನಿರ್ಮಾಣ ಸಾಮಗ್ರಿ ದರ ಇಳಿಕೆ ಮಾಡಿ’, ‘ಕಾರ್ಮಿಕರ ಕೆಲಸ ಕಿತ್ತುಕೊಳ್ಳಬೇಡಿ’, ‘ಕಾರ್ಮಿಕರಿಗೆ ಪರಿಹಾರ ನೀಡಿ’ ಎಂಬ ಘೋಷಣಾ ಫಲಕಗಳನ್ನು ಪ್ರದರ್ಶಿಸಲಾಯಿತು.

‘ಸಿಮೆಂಟ್, ಕಬ್ಬಿಣ, ಎಲೆಕ್ಟ್ರಿಕಲ್, ಟೈಲ್ಸ್–ಮಾರ್ಬಲ್ಸ್, ಹೀಗೆ... ಪ್ರತಿಯೊಂದು ಸಾಮಗ್ರಿಯ ದರವನ್ನು ಮೂರು ಪಟ್ಟು ಹೆಚ್ಚಿಸಲಾಗಿದೆ. ಇದರಿಂದಾಗಿ ನಿರ್ಮಾಣ ಕ್ಷೇತ್ರವೇ ಸಂಕಷ್ಟಕ್ಕೆ ಸಿಲುಕಿದೆ. ಕಟ್ಟಡ ಕಾರ್ಮಿಕರು ಉದ್ಯೋಗ ಕಳೆದುಕೊಳ್ಳುತ್ತಿದ್ದಾರೆ. ಕೆಲವರು ನಗರ ತೊರೆದು ಹಳ್ಳಿಗಳಿಗೆ ಹೋಗುತ್ತಿದ್ದಾರೆ’ ಎಂದು ಪ್ರತಿಭಟನಕಾರರು ದೂರಿದರು.

‘ಕಟ್ಟಡ ನಿರ್ಮಾಣ ಸಾಮಗ್ರಿಗಳ ಮೇಲಿನ ಜಿಎಸ್‌ಟಿ (ಸರಕು ಮತ್ತು ಸೇವಾ ತೆರಿಗೆ) ಹೆಚ್ಚಳ ಮಾಡಿರುವುದೇ ದರ ಹೆಚ್ಚಳಕ್ಕೆ ಕಾರಣ. ಸಾಮಗ್ರಿ ಖರೀದಿಸಲು ಸಾಧ್ಯವಾಗದೇ ಬಹುಮಹಡಿ ಕಟ್ಟಡಗಳು, ಅಪಾರ್ಟ್‌ಮೆಂಟ್ ಸಮುಚ್ಚಯಗಳು ವಾಣಿಜ್ಯ ಸಂಕೀರ್ಣಗಳ ನಿರ್ಮಾಣ ಕೆಲಸಗಳು ನಿಂತಿವೆ. ದರವನ್ನು ಕೂಡಲೇ ಇಳಿಕೆ ಮಾಡಬೇಕು’ ಎಂದು ಒತ್ತಾಯಿಸಿದರು.

ಮಂಡಳಿಯಲ್ಲಿ ಅಕ್ರಮ: ‘ಕಾರ್ಮಿಕರ ಅಭಿವೃದ್ಧಿಗಾಗಿ, ರಾಜ್ಯ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ₹ 10 ಸಾವಿರ ಕೋಟಿ ಇದೆ. ಈ ಹಣದ ಬಳಕೆಯಲ್ಲಿ ಅಕ್ರಮವಾಗುತ್ತಿದ್ದು, ಇದರಲ್ಲಿ ಸಚಿವರು ಹಾಗೂ ಅಧಿಕಾರಿಗಳೂ ಭಾಗಿಯಾಗುತ್ತಿದ್ದಾರೆ. ಈ ಬಗ್ಗೆ ತನಿಖೆ ನಡೆಯಬೇಕು’ ಎಂದು ಹೇಳಿದರು.



ಕಟ್ಟಡ ನಿರ್ಮಾಣ ಕಾರ್ಮಿಕರು ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು

ಉತ್ತಮರಿಗೆ ಅವಕಾಶ ಕಲ್ಪಿಸಲು ಮನವಿ

ಬೆಂಗಳೂರು: ‘ರಾಜ್ಯ ಒಕ್ಕಲಿಗರ ಸಂಘದ ಚುನಾವಣೆಯಲ್ಲಿ ಈ ಬಾರಿ ಉತ್ತಮ ಚಾರಿತ್ರ್ಯ ಹೊಂದಿರುವವರನ್ನು ಆಯ್ಕೆ ಮಾಡಬೇಕು’ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ.ಜೆ. ಸದಾಶಿವ ಮನವಿ ಮಾಡಿಕೊಂಡರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಇದೇ 12ರಂದು ನಡೆಯಲಿರುವ ಸಂಘದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಹಲವರು ಸ್ಪರ್ಧಿಸಿದ್ದಾರೆ. ಆಮಿಷಗಳಿಗೆ ಒಳಗಾಗದೆ ಮತ ಚಲಾಯಿಸಬೇಕು’ ಎಂದರು. ‘ಸಂಘದಲ್ಲಿ ಈ ಹಿಂದೆ ಹಲವು ಅಕ್ರಮಗಳು ನಡೆದಿವೆ. 2004ರಿಂದ 2008ರ ಅವಧಿಯಲ್ಲಿನ ದುರಾಡಳಿತದ ಬಗ್ಗೆ ಸರ್ಕಾರವೇ ಮಾಹಿತಿ ಪಡೆದು, ಆಡಳಿತ ಅಧಿಕಾರಿಗಳನ್ನು ನೇಮಕ ಮಾಡಿತ್ತು. ಹಿಂದೆ ಇದ್ದಂತಹ ಪ್ರಧಾನ ಕಾರ್ಯದರ್ಶಿಗಳು ಮತ್ತು ಕೆಲವು ಕಾರ್ಯಕಾರಿ ಸಮಿತಿಯ ಸದಸ್ಯರು ಸಜ್ಜೆ ಪಾಳ್ಯ ಜಮೀನಿನ ಬಗ್ಗೆ ಕಾಳಜಿ ತೋರಿಸಲಿಲ್ಲ. ಮುಂದೆ ಇಂತಹ ದುರಾಡಳಿತ ಆಗದಂತೆ ಉತ್ತಮರನ್ನು ಆಯ್ಕೆ ಮಾಡುವ ಜವಾಬ್ದಾರಿ ಇದೆ’ ಎಂದು ತಿಳಿಸಿದರು.

ನಿವೃತ್ತ ನ್ಯಾಯಮೂರ್ತಿ ಚಂದ್ರಶೇಖರಯ್ಯ, ನಿವೃತ್ತ ಐಎಎಸ್ ಅಧಿಕಾರಿಗಳಾದ ಸಿ. ಚಿಕ್ಕಣ್ಣ, ಟಿ. ತಿಮ್ಮೇಗೌಡ, ಲೇಖಕ ಎಲ್.ಎನ್. ಮುಕುಂದರಾಜ್ ಹಾಗೂ ರಾಜ್ಯ ಒಕ್ಕಲಿಗರ ಮೀಸಲಾತಿ ಹೋರಾಟ ಸಮಿತಿಯ ಪ್ರಧಾನ ಸಂಚಾಲಕ ನಾಗರಾಜ್ ಯಲಚವಾಡಿ ಇದ್ದರು.

4–5 ರಂದು ಸಿರಿಧಾನ್ಯ ಮೇಳ

ಬೆಂಗಳೂರು: ಇದೇ 4 ಮತ್ತು 5 ರಂದು ನಗರದಲ್ಲಿ ಸಾವಯವ ಮತ್ತು ಸಿರಿಧಾನ್ಯ ಮೇಳ ಏರ್ಪಡಿಸಲಾಗಿದೆ.

ಕೃಷಿ ಇಲಾಖೆ, ಕರ್ನಾಟಕ ಪ್ರದೇಶ ಕೃಷಿಕ ಸಮಾಜ ಮತ್ತು ಕರ್ನಾಟಕ ಆಡಳಿತ ಸೇವಾ ಅಧಿಕಾರಿಗಳ ಸಂಘ ಜಂಟಿಯಾಗಿ ಹಮ್ಮಿಕೊಂಡಿರುವ ಮೇಳವನ್ನು ಕೃಷಿ ಸಚಿವ ಬಿ.ಸಿ. ಪಾಟೀಲ ಉದ್ಘಾಟಿಸುವರು. ಕೆ.ಎ.ಎಸ್ ಅಧಿಕಾರಿಗಳ ಸಂಘದ ಆವರಣದಲ್ಲಿ ನಡೆಯಲಿದೆ.


ಸುದ್ದಿ 2 ನಿಮಿಷ

ಸರ್ಕಾರಿ ಸೇವಾನಿರತ ವೈದ್ಯರ ಕೃಪಾಂಕ: ಅಧಿಸೂಚನೆ ರದ್ದು

ಬೆಂಗಳೂರು: ಸರ್ಕಾರಿ ಸೇವಾನಿರತ ವೈದ್ಯರು 2019–20ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕೋತ್ತರ ವೈದ್ಯಕೀಯ ಡಿಪ್ಲೊಮಾ ಶಿಕ್ಷಣಕ್ಕೆ ಪ್ರವೇಶ ಪಡೆಯುವ ನಿಟ್ಟನಲ್ಲಿ, ಕೃಪಾಂಕ ನೀಡಲು ಮಾನದಂಡಗಳನ್ನು ನಿಗದಿಪಡಿಸಿ ರಾಜ್ಯ ಸರ್ಕಾರ ಹೊರಡಿಸಿದ್ದ ಅಧಿಸೂಚನೆಯನ್ನು ಹೈಕೋರ್ಟ್ ರದ್ದುಪಡಿಸಿದೆ.

ಸರ್ಕಾರದ ಅಧಿಸೂಚನೆ ಪ್ರಶ್ನಿಸಿ ಕಲಬುರಗಿಯ ಡಾ. ಪ್ರೀತಿ ಜಿ. ರಾಥೋಡ್, ಹಾಸನದ ಡಾ.ಆರ್.ಮಧು ಹಾಗೂ ಶಿರೂರಿನ ಡಾ.ನೀಲಪ್ಪ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಅಲೋಕ್ ಅರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.ರಾಜ್ಯ ಸರ್ಕಾರ 2019ರ ಮಾರ್ಚ್ 8 ಹೊರಡಿಸಿರುವ ಅಧಿಸೂಚನೆ ಭಾರತೀಯ ವೈದ್ಯಕೀಯ ಮಂಡಳಿಯ ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣ ನಿಯಮಗಳು-2000ರ ಕಲಂ 9 (4)ಕ್ಕೆ ವಿರುದ್ಧವಾಗಿದೆ ಎಂಬ ಅಭಿಪ್ರಾಯದೊಂದಿಗೆ ಅಧಿಸೂಚನೆ ರದ್ದುಪಡಿಸಿ ಆದೇಶಿಸಿತು.

ಅರ್ಜಿದಾರರ ಪರ ವಕೀಲೆ ಅಕ್ಕಮಹಾದೇವಿ ಹಿರೇಮಠ ವಾದ ಮಂಡಿಸಿದ್ದರು. ರಾಜೀವಗಾಂಧಿ ಆರೋಗ್ಯ ವಿವಿ ಮತ್ತು ಭಾರತೀಯ ವೈದ್ಯಕೀಯ ಮಂಡಳಿ ಅರ್ಜಿದಾರರ ವಾದವನ್ನು ಬೆಂಬಲಿಸಿದ್ದವು. ಅರ್ಜಿಗೆ ರಾಜ್ಯ ಸರ್ಕಾರ ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ವಿರೋಧ ವ್ಯಕ್ತಪಡಿಸಿತ್ತು.



ಜ.8ಕ್ಕೆ ಕಾರ್ಯಾಗಾರ

ಬೆಂಗಳೂರು: ಗಿರಿನಗರದ 7ನೇ ಅಡ್ಡರಸ್ತೆಯ ಗಣಪತಿ ಸಚ್ಚಿದಾನಂದ (ಎಸ್‌ಜಿಎಸ್) ವಾಗ್ದೇವಿ ಸಂಪರ್ಕ ನ್ಯೂನತೆ ಉಳ್ಳವರ ಪುನಃಶ್ಚೇತನ ಕೇಂದ್ರವು ಜ. 8ರಂದು ನವಜಾತ ಶಿಶುಗಳ ಶ್ರವಣ ತಪಾಸಣೆಯ ಮಹತ್ವದ ಕುರಿತು ಕಾರ್ಯಾಗಾರ ಆಯೋಜಿಸಿದೆ. ತಜ್ಞರು ಈ ಕಾರ್ಯಾಗಾರದಲ್ಲಿ ಭಾಗವಹಿಸಲಿದ್ದಾರೆ. ಆಸಕ್ತರು 2021ರ ಡಿಸೆಂಬರ್ 30ರ ಒಳಗೆ ಹೆಸರು ನೋಂದಾಯಿಸಿಕೊಳ್ಳಬೇಕು. ನೋಂದಣಿ ಉಚಿತ ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ: 080-26727141 ಸಂಪರ್ಕಿಸಬಹುದು.

ರಾಜಾನುಕುಂಟೆ ಠಾಣೆಯಲ್ಲಿ ಎಫ್‌ಐಆರ್ ದಾಖಲು • ಪುರಾವೆಗಳನ್ನು ಪೊಲೀಸರಿಗೆ ನೀಡಿದ ವಿಶ್ವನಾಥ್

ಶಾಸಕರ ಕೊಲೆಗೆ ಸಂಚು: ಕುಳ್ಳ ದೇವರಾಜ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ ಕ್ಷೇತ್ರದ ಬಿಜೆಪಿ ಶಾಸಕ ಎಸ್.ಆರ್. ವಿಶ್ವನಾಥ್ ಕೊಲೆಗೆ ಸಂಚು ರೂಪಿಸಿದ್ದ ಬಗ್ಗೆ ರಾಜಾನುಕುಂಟೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದ್ದು, ಇದರ ಬೆನ್ನಲ್ಲೇ ಆರೋಪಿ ಕುಳ್ಳ ದೇವರಾಜ್‌ನನ್ನು ಪೊಲೀಸರು ಬಂಧಿಸಿದ್ದಾರೆ.

'ಕೊಲೆಗೆ ಸಂಚು ರೂಪಿಸಿದ್ದ ಬಗ್ಗೆ ಕಾಂಗ್ರೆಸ್ ಮುಖಂಡ ಗೋಪಾಲಕೃಷ್ಣ ಹಾಗೂ ಕುಳ್ಳ ದೇವರಾಜ್ ನಡುವೆ ನಡೆದಿದೆ ಎನ್ನಲಾದ ಸಂಭಾಷಣೆಯ ವಿಡಿಯೊ ಹಾಗೂ ಆಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ವಿಶ್ವನಾಥ್ ನೀಡಿರುವ ದೂರು ಆಧರಿಸಿ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ. ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು. ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ನೀಡುವಂತೆ ನ್ಯಾಯಾಲಯವನ್ನು ಕೋರಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪದ ಬಗ್ಗೆ ಆರಂಭದಲ್ಲಿ ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ಮಾತ್ರ ದಾಖಲಿಸಿಕೊಂಡು, ನ್ಯಾಯಾಲಯಕ್ಕೆ ವರದಿ ಸಲ್ಲಿಸಲಾಗಿತ್ತು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಲಯ, ಎಫ್‌ಐಆರ್ ದಾಖಲಿಸಿಕೊಳ್ಳುವಂತೆ ಆದೇಶ ನೀಡಿದೆ. ಕಾಂಗ್ರೆಸ್‌ ಮುಖಂಡ ಗೋಪಾಲಕೃಷ್ಣ ಹಾಗೂ ಇತರರ ವಿರುದ್ಧ ಕ್ರಿಮಿನಲ್ ಪಿತೂರಿ (ಐಪಿಸಿ 120ಬಿ) ಹಾಗೂ ಜೀವ ಬೆದರಿಕೆ (ಐಪಿಸಿ 506) ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದೂ ಮೂಲಗಳು ತಿಳಿಸಿವೆ.

ಪುರಾವೆ ನೀಡಿದ ಶಾಸಕ: ಪ್ರಕರಣ ದಾಖಲಾಗುತ್ತಿದ್ದಂತೆ ವಿಶ್ವನಾಥ್ ಅವರಿಗೆ ನೋಟಿಸ್ ನೀಡಿದ್ದ ಪೊಲೀಸರು, 'ಕೊಲೆಗೆ ಸಂಚು ರೂಪಿಸಿದ್ದ ಬಗ್ಗೆ ಪುರಾವೆಗಳು ಇದ್ದರೆ ಹಾಜರುಪಡಿಸಿ' ಎಂದು ಕೋರಿದ್ದರು.

ರಾಜಾನುಕುಂಟೆ ಠಾಣೆಗೆ ಗುರುವಾರ ಹಾಜರಾದ ವಿಶ್ವನಾಥ್, ತಮ್ಮ ಬಳಿಯ ಪುರಾವೆಗಳನ್ನು ಪೊಲೀಸರಿಗೆ ನೀಡಿದರು. ಪೊಲೀಸರ ಪ್ರಶ್ನೆಗಳಿಗೂ ಉತ್ತರಿಸಿದರು.

ಠಾಣೆ ಬಳಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಪ್ರಕರಣಕ್ಕೆ ಪುರಾವೆಯಾದ ವಿಡಿಯೊಗಳು ಇರುವ ಪೆನ್‌ಡ್ರೈವ್ ಅನ್ನು ಪೊಲೀಸರಿಗೆ ನೀಡಲಾಗಿದೆ. ಎಲ್ಲವನ್ನೂ ಪೊಲೀಸರು ಪರಿಶೀಲಿಸಲಿದ್ದಾರೆ' ಎಂದರು.

'ಇಂಥ ಸಂಚುಗಳು ಹಲವು ದಿನಗಳಿಂದ ನಡೆಯುತ್ತಿದ್ದು, ವಿಡಿಯೊ ಹಾಗೂ ಆಡಿಯೊ ನೋಡಿದ ಮೇಲೆ ನನಗೆ ಗೊತ್ತಾಗಿದೆ. ಈ ಬಗ್ಗೆ ಸೂಕ್ತ ತನಿಖೆಗೆ ಆಗ್ರಹಿಸಿದ್ದೇನೆ' ಎಂದೂ ಹೇಳಿದರು.

'ಕೊಲೆ ಸಂಚಿನಲ್ಲಿ ಎಳೆತಂದು ಮಾನಹಾನಿ'

'ಶಾಸಕನಾಗಿ ನಾನು ಮಾಡುತ್ತಿರುವ ಜನಸೇವೆಯನ್ನು ಸಹಿಸದ ಗೋಪಾಲಕೃಷ್ಣ ಹಾಗೂ ಇತರರು, ದ್ವೇಷ ಹಾಗೂ ಅಸೂಯೆಯಿಂದ ನನ್ನನ್ನು ಕೊಲೆ ಮಾಡಿಸಲು ಆಂಧ್ರಪ್ರದೇಶದ ಯುವಕರಿಂದ ಸಂಚು ರೂಪಿಸಿದ್ದಾರೆ. ಚುನಾವಣಾ ದೃಷ್ಟಿಯಿಂದ ನನ್ನ ಮಾನಹಾನಿ ಮಾಡಲು ಪ್ರಯತ್ನಿಸುತ್ತಿದ್ದಾರೆ' ಎಂದು ವಿಶ್ವನಾಥ್ ದೂರಿನಲ್ಲಿ ತಿಳಿಸಿದ್ದಾರೆ.

'ಯಲಹಂಕದ ಕೋಗಿಲು ಕ್ರಾಸ್ ಬಳಿ ನಡೆದಿದ್ದ ಕಡಬಗೆರೆ ಸೀನ ಕೊಲೆ ಸಂಚಿನ ಪ್ರಕರಣದಲ್ಲೂ ನನ್ನನ್ನು ಸುಖಾಸುಮ್ಮನೇ ಎಳೆದು ತರಲಾಗಿತ್ತು. ಕೊಲೆ ಪ್ರಕರಣದಲ್ಲಿ ನನ್ನನ್ನು ಸಿಲುಕಿಸಿ ಮಾನಹಾನಿ ಸಹ ಮಾಡಿದ್ದಾರೆ' ಎಂದೂ ಅವರು ಹೇಳಿದ್ದಾರೆ.

'ಹಳೇ ವಿಡಿಯೊ: ಪ್ರಯೋಗಾಲಯಕ್ಕೆ'

'ಪ್ರಕರಣಕ್ಕೆ ಸಂಬಂಧಪಟ್ಟಂತೆ ದೂರುದಾರರು ನೀಡಿರುವ ವಿಡಿಯೊ, 2–3 ವರ್ಷಗಳ ಹಿಂದೆ ಚಿತ್ರೀಕರಿಸಿದ್ದು ಎಂಬ ಮಾಹಿತಿ ಇದೆ. ವಿಡಿಯೊವನ್ನು ಪರೀಕ್ಷೆಗಾಗಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ವರದಿ ಬಂದ ನಂತರ ಮಾಹಿತಿ ತಿಳಿಯಲಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಇಎಸ್‌ಐ ಆಸ್ಪತ್ರೆ: ಡೀನ್ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಾಜಿನಗರದ ಇಎಸ್‌ಐ ಆಸ್ಪತ್ರೆಯ ಶೈತ್ಯಾಗಾರದಲ್ಲಿ, ಕೋವಿಡ್‌ನಿಂದ ಮೃತಪಟ್ಟಿದ್ದ ಇಬ್ಬರ ಶವಗಳು ಪತ್ತೆಯಾದ ಘಟನೆಗೆ ಸಂಬಂಧಿಸಿದಂತೆ ಆಸ್ಪತ್ರೆಯ ಡೀನ್ ಡಾ.ಜಿತೇಂದ್ರ ಕುಮಾರ್ ಅವರನ್ನು ವರ್ಗಾವಣೆ ಮಾಡಿ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ ಆದೇಶ ಹೊರಡಿಸಿದೆ.

ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗದ ಪ್ರಾಧ್ಯಾಪಕಿ ಡಾ. ರೇಣುಕಾ ರಾಮಯ್ಯ ಅವರನ್ನು ಡೀನ್ ಆಗಿ ನೇಮಕ ಮಾಡಲಾಗಿದೆ.

ಕಳೆದ ತಿಂಗಳ 27ರಂದು ಆಸ್ಪತ್ರೆಯ ಶವಾಗಾರದಲ್ಲಿ ಮೃತದೇಹಗಳು ಪತ್ತೆಯಾಗಿದ್ದವು. ಪ್ರಾಥಮಿಕ ತನಿಖೆ ನಡೆಸಿದ ಪೊಲೀಸರು, ಮರಣೋತ್ತರ ಪರೀಕ್ಷೆಗೆ ಮೃತ ದೇಹಗಳನ್ನು ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಗೆ ರವಾನಿಸಿದ್ದರು. ಮೃತರನ್ನು ದುರ್ಗಾ ಸುಮಿತ್ರಾ ಹಾಗೂ ಮುನಿರಾಜು ಎಂದು ಗುರುತಿಸಲಾಗಿತ್ತು. ಆಸ್ಪತ್ರೆಯ ನಿರ್ಲಕ್ಷ್ಯದ ಬಗ್ಗೆ ಕುಟುಂಬದ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದ್ದರು.

ಘಟನೆಗೆ ಸಂಬಂಧಿಸಿದಂತೆ ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ಹಾಗೂ ಶಾಸಕ ಎಸ್. ಸುರೇಶ್ ಕುಮಾರ್ ಅವರು ಇಎಸ್‌ಐ ಆಸ್ಪತ್ರೆ ಅಧಿಕಾರಿಗಳೊಂದಿಗೆ ಚರ್ಚಿಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದರು.



ಪದವಿ ಪ್ರದಾನ

ಕಮ್ಯುನಿಟಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ನಗರದಲ್ಲಿ ಆಯೋಜಿಸಿದ್ದ ಪದವಿ ಪ್ರದಾನ ಸಮಾರಂಭವನ್ನು ಮೌಂಟ್ ಕಾರ್ಮೆಲ್ ಕಾಲೇಜಿನ 'ಇಂಟರ್‌ನ್ಯಾಷನಲ್ ಪ್ರೋಗ್ರಾಮ್ ಆ್ಯಂಡ್ ಪಾರ್ಟನರ್‌ಶಿಪ್' ಸ್ನಾತಕೋತ್ತರ ಪದವಿ ವಿಭಾಗದ ಮುಖ್ಯಸ್ಥ ಡಾ. ರಮೇಶ್ ಎಸ್. ಉದ್ಘಾಟಿಸಿದರು. ಕಮ್ಯುನಿಟಿ ಶಿಕ್ಷಣ ಸಂಸ್ಥೆಗಳ ಸಮೂಹದ ಅಧ್ಯಕ್ಷ ಕೆ.ಎಂ. ನಾಗರಾಜ್, ಕಾರ್ಯದರ್ಶಿ ಚಿಕ್ಕಯ್ಯ ಹಾಗೂ ನಿರ್ದೇಶಕ ಡಾ.ಕೆ.ಆರ್. ಮಹೇಶ್ ಕುಮಾರ್ ಇದ್ದರು.

ಅಪಘಾತ: ಬಿಬಿಎಂಪಿ ನೌಕರ ಸಾವು

ಕನಕಪುರ: ಕುಟುಂಬ ಸಮೇತ ತಿರುಪತಿಗೆ ತೆರಳಿದ್ದ ವ್ಯಕ್ತಿಯೊಬ್ಬರು ದೇವರ ದರ್ಶನ ಮುಗಿಸಿಕೊಂಡು ವಾಪಸ್ ಬರುವಾಗ ರಸ್ತೆ ಅಪಘಾತದಲ್ಲಿ ಮೃತಪಟ್ಟಿರುವ ಘಟನೆ ಬುಧವಾರ ರಾತ್ರಿ ಆಂಧ್ರಪ್ರದೇಶದ ಪಲ್ಲನೇರದಲ್ಲಿ ನಡೆದಿದೆ.

ತಾಲ್ಲೂಕಿನ ಹಾರೋಹಳ್ಳಿ ಹೋಬಳಿಯ ಹನುಮೇಗೌಡನದೊಡ್ಡಿ ಗ್ರಾಮದ ಜಿ.ಸಿ. ಬಾಲರಾಜು (59) ಮೃತಪಟ್ಟವರು. ಅವರು ಬಿಬಿಎಂಪಿ ನೌಕರರಾಗಿ ಸೇವೆ ಸಲ್ಲಿಸುತ್ತಿದ್ದರು.

ಮೂವರು ಪೊಲೀಸರ ಅಮಾನತು

ಬೆಂಗಳೂರು: 'ಕಳ್ಳತನ ಆರೋಪ ಹೊರಿಸಿ ಸಲ್ಮಾನ್ ಖಾನ್ ಎಂಬುವರನ್ನು ಥಳಿಸಿದ್ದಾರೆ' ಎಂಬ ದೂರಿಗೆ ಸಂಬಂಧಪಟ್ಟಂತೆ ವರ್ತೂರು ಠಾಣೆಯ ಮೂವರು ಪೊಲೀಸರನ್ನು ಕೆಲಸದಿಂದ ಅಮಾನತು ಮಾಡಲಾಗಿದೆ.

'ಈ ಕುರಿತು ಸಲ್ಮಾನ್ ಖಾನ್ ತಂದೆ ಅಮ್ಜದ್ ಖಾನ್ ಇತ್ತೀಚೆಗಷ್ಟೇ ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ದೂರು ನೀಡಿದ್ದರು.

ಥಣಿಸಂದ್ರ ಮುಖ್ಯ ರಸ್ತೆಯಲ್ಲಿ ಗುಂಡಿ: ಸ್ಕೂಟರ್ ಸವಾರ ಸಾವು ಪ್ರಕರಣ

ಅಪಘಾತ: ಬಿಬಿಎಂಪಿ–ಪೊಲೀಸ್ ಜಟಾಪಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಥಣಿಸಂದ್ರ ಮುಖ್ಯ ರಸ್ತೆಯಲ್ಲಿನ ಅಪಘಾತದಲ್ಲಿ ಸ್ಕೂಟರ್ ಸವಾರ ಮೃತಪಟ್ಟ ಘಟನೆ ಬಿಬಿಎಂಪಿ ಮತ್ತು ಸಂಚಾರ ಪೊಲೀಸರ ನಡುವೆ ಜಟಾಪಟಿಗೆ ಕಾರಣವಾಗಿದೆ. ಅಪಘಾತಕ್ಕೆ ರಸ್ತೆ ಗುಂಡಿಯೇ ಕಾರಣ ಎಂದು ಪೊಲೀಸರು ವಾದಿಸುತ್ತಿದ್ದರೆ, ಪೊಲೀಸರ ಕಣ್ತಪ್ಪಿಸಲು ಯತ್ನಿಸುವ ಭರದಲ್ಲಿ ಅಪಘಾತ ನಡೆದಿದೆ ಎಂದು ಬಿಬಿಎಂಪಿ ಹೇಳುತ್ತಿದೆ.

ಆಯತಪ್ಪಿ ಬಿದ್ದ ಸ್ಕೂಟರ್ ಸವಾರ ಅಜೀಂ ಅಹ್ಮದ್ (21) ಮೇಲೆ ಗೂಡ್ಸ್ ವಾಹನವೊಂದು ಹರಿದು ಗಂಭೀರವಾಗಿ ಗಾಯಗೊಂಡಿದ್ದರು. ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದರು.

ಪ್ರಕರಣ ದಾಖಲಿಸಿಕೊಂಡಿದ್ದ ಬಾಣಸವಾಡಿ ಸಂಚಾರ ಠಾಣೆ ಪೊಲೀಸರು, ಬಿಬಿಎಂಪಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಸವಿತಾ ಹಾಗೂ ಗೂಡ್ಸ್ ವಾಹನ ಚಾಲಕ ಬಂಡೇಹೊಸೂರು ಗ್ರಾಮದ ರವಿ ಅವರನ್ನು ಬಂಧಿಸಿದ್ದರು. ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದರು.

'ಘಟನೆ ಸಂಬಂಧ ವಿಶೇಷ ಆಯುಕ್ತರಿಂದ (ಯೋಜನೆ) ವರದಿ ಕೇಳಿದ್ದೇನೆ. ಊಹಾಪೋಹದ ಆಧಾರದಲ್ಲಿ ಅಧಿಕಾರಿಗಳ ಮೇಲೆ ಎಫ್‌ಐಆರ್ ದಾಖಲಿಸುವುದು ಸೂಕ್ತ ಅಲ್ಲ. ಆಕಸ್ಮಿಕ ಸಾವುಗಳ ಬಗ್ಗೆ ಸಮರ್ಥನೆ ಮಾಡಿಕೊಳ್ಳುವುದಿಲ್ಲ. ತಪ್ಪು ಮಾಡಿದ್ದರೆ ಅಧಿಕಾರಿಗಳನ್ನು ವಹಿಸಿಕೊಳ್ಳುವುದೂ ಇಲ್ಲ. ಆದರೆ, ಮೇಲ್ನೋಟಕ್ಕೆ ನಮ್ಮ ತಪ್ಪು ಇಲ್ಲ ಎಂದು ವರದಿಯಾಗಿದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಸುದ್ದಿಗಾರರಿಗೆ ತಿಳಿಸಿದರು.

ಗುರುವಾರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಮುಖ್ಯ ಎಂಜಿನಿಯರ್(ಯೋಜನೆ) ಎಂ. ಲೋಕೇಶ್, '11 ಕಿಲೋ ಮಿಟರ್ ಮಾರ್ಗದಲ್ಲಿ ವೈಟ್ ಟಾಪಿಂಗ್ ಕಾಮಗಾರಿ ವರ್ಷದ ಹಿಂದೆ ಮುಗಿದಿದೆ. ನಿರ್ದಿಷ್ಟ ಸ್ಥಳದಲ್ಲಿ ಜಲ ಮಂಡಳಿಯಿಂದ ಅಗೆದು ಮತ್ತೆ ಮುಚ್ಚಲಾಗಿದೆ' ಎಂದರು.

'ಸ್ಥಳೀಯರು ಹೇಳುವ ಮತ್ತು ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿರುವ ದೃಶ್ಯದ ಪ್ರಕಾರ ಗುಂಡಿ ಇರುವ ಜಾಗದಲ್ಲಿ ಅಪಘಾತ ನಡೆದೇ ಇಲ್ಲ. ಸ್ವಲ್ಪ ಮುಂದೆ ಅಪಘಾತ ನಡೆದಿದೆ. ಗೂಡ್ಸ್ ವಾಹನದ ಮುಂದೆ ಅಪಘಾತಕ್ಕೀಡಾದ ಸ್ಕೂಟರ್ ಹೋಗುತ್ತಿತ್ತು ಎಂಬುದು ಕೂಡ ದೃಶ್ಯದಲ್ಲಿ ಇಲ್ಲ. ಅಪಘಾತಕ್ಕೆ ಬೇರೆಯೇ ಕಾರಣ ಇದ್ದಂತಿದೆ' ಎಂದರು.

'ಸಂಚಾರ ಪೊಲೀಸರು ದಾಖಲೆಗಳ ತಪಾಸಣೆ ನಡೆಸುತ್ತಿರುವುದನ್ನು ಗಮನಿಸಿ ಸ್ಕೂಟರ್ ಸವಾರ ಹಿಂದಕ್ಕೆ ಬಂದಾಗ ಅಪಘಾತ ಸಂಭವಿಸಿತು ಎಂದು ಪ್ರತ್ಯಕ್ಷದರ್ಶಿಯೇ ತಿಳಿಸಿದ್ದಾರೆ. ಅಪಘಾತಕ್ಕೆ ಬಿಬಿಎಂಪಿ ಕಾರಣ ಅಲ್ಲ, ಸಂಚಾರ ಪೊಲೀಸರೇ ಕಾರಣ' ಎಂದು ಸ್ಥಳ ಪರಿಶೀಲನೆ ತಂಡದಲ್ಲಿದ್ದ ಪಾಲಿಕೆ ಅಧಿಕಾರಿಯೊಬ್ಬರು ಹೇಳಿದರು.

'ಅಪಘಾತಕ್ಕೆ ಗುಂಡಿಯೇ ಕಾರಣ'

'ಥಣಿಸಂದ್ರದಿಂದ ಹೆಗಡೆ ನಗರಕ್ಕೆ ಹೋಗುವ ರಸ್ತೆಯ 'ಪ್ರಕಾಶ್ ಹಾರ್ಡ್‌ವೇರ್' ಮಳಿಗೆ ಮುಂಭಾಗದಲ್ಲಿ ಗುಂಡಿಗಳು ಬಿದ್ದಿವೆ. ಇದೇ ರಸ್ತೆಯಲ್ಲಿ ಅಜೀಂ ಅಹ್ಮದ್ ತಮ್ಮ ದ್ವಿಚಕ್ರ ವಾಹನದಲ್ಲಿ ಹೊರಟಿದ್ದರು. ಗುಂಡಿಯಿಂದಾಗಿ ವಾಹನ ಉರುಳಿಬಿದ್ದು, ಅಜೀಂ ರಸ್ತೆಗೆ ಬಿದ್ದಿದ್ದರು. ಅದೇ ಸಮಯಕ್ಕೆ ಹಿಂದಿನಿಂದ ಬಂದ ಗೂಡ್ಸ್ ವಾಹನದ ಚಕ್ರ, ಅಜೀಂ ಅವರ ತೊಡೆ ಹಾಗೂ ಬಲಗೈ ಮೇಲೆ ಹರಿದಿತ್ತು' ಎಂದು ಸಂಚಾರ ಪೊಲೀಸರು ಹೇಳಿದರು.

'ಅಪಘಾತವಾದ ಸ್ಥಳದಲ್ಲಿ ಪರಿಶೀಲನೆ ನಡೆಸಲಾಗಿದೆ. ಗುಂಡಿಯೇ ಅವಘಡಕ್ಕೆ ಕಾರಣವೆಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ. ಆ ಸಂಬಂಧ ಪುರಾವೆಗಳನ್ನೂ ಸಂಗ್ರಹಿಸಲಾಗಿದೆ. ಗೂಡ್ಸ್ ವಾಹನ ಚಾಲಕ ರವಿಯನ್ನೂ ಬಂಧಿಸಲಾಗಿದ್ದು, ಆತನ ಹೇಳಿಕೆಯನ್ನೂ ಪಡೆಯಲಾಗಿದೆ' ಎಂದೂ ತಿಳಿಸಿದರು.

ದ.ಆಫ್ರಿಕಾದಿಂದ ಬಂದಿದ್ದ ಇಬ್ಬರಲ್ಲಿ ಡೆಲ್ಟಾ ಪ್ಲಸ್

ಪ್ರಜಾವಾಣಿ ವಾರ್ತೆ

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ ಜಿಲ್ಲೆ): ಐದು ದಿನಗಳ ಹಿಂದೆ (ನ. 27ರಂದು) ದಕ್ಷಿಣ ಆಫ್ರಿಕಾದಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ಪ್ರಯಾಣಿಕರ ಪೈಕಿ ಇಬ್ಬರಲ್ಲಿ ಡೆಲ್ಟಾ ಪ್ಲಸ್ ಸೋಂಕು ದೃಢಪಟ್ಟಿದೆ.

ಕೊರೊನಾ ಸೋಂಕು ವ್ಯಾಪಿಸಿರುವ ಅಪಾಯಕಾರಿ ರಾಷ್ಟ್ರಗಳಿಂದ (ಹೈ ರಿಸ್ಕ್) ಬಂದ ಪ್ರಯಾಣಿಕರನ್ನು ವಿಮಾನ ನಿಲ್ದಾಣದಲ್ಲಿ ತಪಾಸಣೆಗೆ ಒಳಪಡಿಸಿದಾಗ ದಕ್ಷಿಣ ಆಫ್ರಿಕಾದಿಂದ ಬಂದ ಇಬ್ಬರಲ್ಲಿ ಕೊರೊನಾ ಸೋಂಕು ದೃಢಪಟ್ಟಿತ್ತು.




ಇಬ್ಬರ ಗಂಟಲು ದ್ರವ ಮಾದರಿಯನ್ನು ಜಿನೋಮ್ ಸೀಕ್ವೆನ್ಸಿಂಗ್ ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ಕಳಿಸಲಾಗಿತ್ತು.

'ಇಬ್ಬರ ವರದಿ ಬಂದಿದ್ದು, ಡೆಲ್ಟಾ ಪ್ಲಸ್ ಖಚಿತವಾಗಿದೆ. ಈಗಾಗಲೇ ಈ ಇಬ್ಬರನ್ನೂ ಬಿಬಿಎಂಪಿ ವಶಕ್ಕೆ ಒಪ್ಪಿಸಲಾಗಿದೆ. ವಿಮಾನ ನಿಲ್ದಾಣದಲ್ಲಿ ನವೆಂಬರ್ ತಿಂಗಳಲ್ಲಿ ನಡೆದ ತಪಾಸಣೆ ವೇಳೆ ವಿದೇಶಗಳಿಂದ ಬಂದ ಒಟ್ಟು ಐವರು ಪ್ರಯಾಣಿಕರಲ್ಲಿ ಕೋವಿಡ್-19 ದೃಢಪಟ್ಟಿದೆ' ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಆರೋಗ್ಯಾಧಿಕಾರಿ ಡಾ.ತಿಪ್ಪೇಸ್ವಾಮಿ ತಿಳಿಸಿದ್ದಾರೆ.


'ಡಿ.1ರಿಂದ ಪ್ರಯಾಣಿಕರಿಗೆ ಆರ್‌ಟಿ–ಪಿಸಿಆರ್ ಪರೀಕ್ಷೆ ಕಡ್ಡಾಯಗೊಳಿಸಲಾಗಿದ್ದು, ಎರಡು ದಿನದಲ್ಲಿ 1,436 ಪ್ರಯಾಣಿಕರು ಬಂದಿದ್ದಾರೆ.

ಎಲ್ಲರನ್ನೂ ಪರೀಕ್ಷೆಗೆ ಒಳಪಡಿಸಲಾಗಿದೆ. ಎಲ್ಲರ ವರದಿ ನೆಗೆಟಿವ್ ಬಂದಿರುವ ಕಾರಣ ಹೋಂ ಕ್ವಾರಂಟೈನ್ ನಲ್ಲಿರುವಂತೆ ಸೂಚಿಸಲಾಗಿದೆ. ಎಲ್ಲರ ಮೇಲೂ ನಿಗಾ ಇಡಲಾಗಿದೆ' ಎಂದು ಅವರು ತಿಳಿಸಿದ್ದಾರೆ.



ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಓಮೈಕ್ರಾನ್ ಸೋಂಕಿತರು ಕಂಡುಬಂದಿಲ್ಲ. ಓಮೈಕ್ರಾನ್ ಸೋಂಕಿತರ ಬಗ್ಗೆ ನಮಗೆ ಇದುವರೆಗೂ ಯಾವುದೇ ಅಧಿಕೃತ ಮಾಹಿತಿ ಇಲ್ಲ.

ಕೆ.ಶ್ರೀನಿವಾಸ್, ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ



ರಿ ಲೈಫ್ ಆಸ್ಪತ್ರೆಯಲ್ಲಿ ಲಸಿಕೆ ಉಚಿತ

ಬೆಂಗಳೂರು: ಬನಶಂಕರಿ ಮೂರನೇ ಹಂತದಲ್ಲಿರುವ ರಿ-ಲೈಫ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯು ಇದೇ 5ರವರೆಗೆ ಕೋವಿಡ್ ಲಸಿಕೆಯನ್ನು ಉಚಿತವಾಗಿ ಹಾಕಿಸುವ ಶಿಬಿರ ಹಮ್ಮಿಕೊಂಡಿದೆ.

'ಶಿಬಿರವು ಬೆಳಿಗ್ಗೆ 11ರಿಂದ ಸಂಜೆ 7 ಗಂಟೆಯವರೆಗೆ ನಡೆಯಲಿದ್ದು, ಕೋವಿಶೀಲ್ಡ್ ಹಾಗೂ ಕೋವ್ಯಾಕ್ಸಿನ್ ಲಸಿಕೆಯ ಮೊದಲ ಹಾಗೂ ಎರಡನೇ ಡೋಸ್ ಹಾಕಲಾಗುತ್ತದೆ' ಎಂದು ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕಿ ಡಾ. ಸುಪ್ರಿಯಾ ತಿಳಿಸಿದ್ದಾರೆ. ಹೆಸರು ನೋಂದಣಿಗೆ ಮೊ.: 96060-21671

ಸಕ್ರಿಯ ಪ್ರಕರಣ ಏರಿಕೆ

ಬೆಂಗಳೂರು: ರಾಜ್ಯದಲ್ಲಿ ಗುರುವಾರ 363 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 6,743ಕ್ಕೆ ಏರಿಕೆಯಾಗಿದೆ.

ಒಂದು ದಿನದ ಅವಧಿಯಲ್ಲಿ 1.06 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 0.34 ರಷ್ಟು ದೃಢಪಟ್ಟಿದೆ. ಐದು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 17 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬೀದರ್, ಚಿಕ್ಕಬಳ್ಳಾಪುರ ಸೇರಿದಂತೆ 7 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ.

ಬೆಂಗಳೂರು ನಗರ (206), ಉತ್ತರ ಕನ್ನಡ (22) ಹಾಗೂ ದಕ್ಷಿಣ ಕನ್ನಡದಲ್ಲಿ (20) ಅಧಿಕ ಪ್ರಕರಣಗಳು ಪತ್ತೆಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 20ಕ್ಕಿಂತ ಕಡಿಮೆಯಿದೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.96 ಲಕ್ಷ ದಾಟಿದೆ.

ಬೆಂಗಳೂರಿನಲ್ಲಿ 5,024 ಸಕ್ರಿಯ ಪ್ರಕರಣಗಳಿವೆ. ಯಾದಗಿರಿ, ಬೀದರ್ ಸೇರಿದಂತೆ 10 ಜಿಲ್ಲೆಗಳಲ್ಲಿ ಸೋಂಕಿತರ ಸಂಖ್ಯೆ 10ಕ್ಕಿಂತ ಕಡಿಮೆಯಿದೆ. ಸೋಂಕಿತರಲ್ಲಿ 191 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.51 ಲಕ್ಷ ದಾಟಿದೆ.

ಮರಳು ಅಕ್ರಮ ಸಾಗಣೆಗೆ ತಡೆ: ನೌಕರನ ಪತ್ನಿ, ಮಕ್ಕಳ ಮೇಲೂ ಹಲ್ಲೆ

ಗ್ರಾಮ ಲೆಕ್ಕಿಗನ ಕೊಲೆಗೆ ಯತ್ನ: ಬಂಧನ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಮರಳು ಅಕ್ರಮ ಸಾಗಣೆಗೆ ತಡೆಯೊಡ್ಡಿದ ಎತ್ತಿನಬೂದಿಹಾಳ ಗ್ರಾ.ಪಂ ಗ್ರಾಮ ಲೆಕ್ಕಿಗ ವೆಂಕಟಸ್ವಾಮಿ (ಪ್ರಭಾರಿ ಕಂದಾಯ ನಿರೀಕ್ಷಕ) ಮನೆಗೆ ಮಚ್ಚು, ಲಾಂಗ್ ಹಾಗೂ ಚಾಕುಗಳನ್ನು ಹಿಡಿದು ಬುಧವಾರ ರಾತ್ರಿ ನುಗ್ಗಿದ ಗುಂಪೊಂದು ಅವರ ಕೊಲೆಗೆ ಯತ್ನಿಸಿತಲ್ಲದೆ, ರಕ್ಷಣೆಗೆ ಧಾವಿಸಿದ ಪತ್ನಿ, ಇಬ್ಬರು ಮಕ್ಕಳು ಮತ್ತು ನಾದಿನಿ (ಪತ್ನಿಯ ಸೋದರಿ) ಮೇಲೂ ಹಲ್ಲೆ ನಡೆಸಿದೆ.

ಗ್ರಾಮ ಲೆಕ್ಕಿಗರ ಮೇಲೆ ಹಲ್ಲೆ ಮಾಡಿರುವ ತಂಡದ ಸದಸ್ಯರನ್ನು ತಕ್ಷಣ ಬಂಧಿಸಿ, ಕಠಿಣ ಶಿಕ್ಷೆಗೆ ಗುರಿಪಡಿಸಬೇಕು ಎಂದು ಆಗ್ರಹಿಸಿ ಸರ್ಕಾರಿ ನೌಕರರ ಸಂಘದ ಜಿಲ್ಲಾ ಪದಾಧಿಕಾರಿಗಳು ಮತ್ತು ಸದಸ್ಯರು ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸುತ್ತಿದ್ದಾರೆ.

ಹಲ್ಲೆಯಿಂದ ತೀವ್ರವಾಗಿ ಗಾಯಗೊಂಡಿರುವ ವೆಂಕಟಸ್ವಾಮಿ ಮತ್ತು ಅವರ ಪತ್ನಿ ವಿಮ್ಸ್‌ಗೆ ದಾಖಲಾಗಿದ್ದಾರೆ. ಮಕ್ಕಳು ಮತ್ತು ನಾದಿನಿಗೂ ಗಾಯಗಳಾಗಿವೆ. ಅವರು ಚಿಕಿತ್ಸೆ ಪಡೆಯುತ್ತಿರುವ ವಾರ್ಡ್‌ಗೆ ಪೊಲೀಸ್ ಭದ್ರತೆ ಒದಗಿಸಲಾಗಿದೆ.

ಬಳ್ಳಾರಿ ತಾಲ್ಲೂಕು ರೂಪನಗುಡಿ ಹೋಬಳಿ ತೊಲಮಾಮಿಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಗರಿ ಹಳ್ಳದಲ್ಲಿ ಮಂಗಳವಾರ ಮಧ್ಯರಾತ್ರಿ ಅಕ್ರಮವಾಗಿ ಮರಳು ತುಂಬುತ್ತಿದ್ದ ಟ್ರ್ಯಾಕ್ಟರ್‌ಗಳನ್ನು ವೆಂಕಟಸ್ವಾಮಿ ಮತ್ತಿತರರು ತಡೆದರು. ಆಗ ಗಲಾಟೆಯಾಗಿ, ತೊಲಮಾಮಿಡಿ ಗ್ರಾಮ ಲೆಕ್ಕಿಗ ಜೆ.ಗಣೇಶ್ ಮೇಲೆ ಹಲ್ಲೆ ನಡೆದಿತ್ತು. ತದನಂತರ, ಮಕ್ಬೂಲ್, ರಫೀಕ್, ಇಲಿಯಾಸ್ ಮತ್ತಿತರರು ಬುಧವಾರ ರಾತ್ರಿ ಮಚ್ಚು, ಲಾಂಗ್, ಚಾಕುಗಳನ್ನು ಹಿಡಿದು ವೆಂಕಟಸ್ವಾಮಿ ಮನೆಗೆ ನುಗ್ಗಿ ಹಲ್ಲೆ ನಡೆಸಿದರು. ಗ್ಯಾಂಗ್‌ನಲ್ಲಿ ಕೆಲವು ಮಹಿಳೆಯರೂ ಇದ್ದರು ಎಂದು ಬ್ರೂಸ್‌ಪೇಟೆ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಲಾಗಿದೆ.

'ಹಳ್ಳದಿಂದ ಅಕ್ರಮವಾಗಿ ಮರಳು ಸಾಗಣೆ ಮಾಡಲಾಗುತ್ತಿದೆ' ಎಂಬ ಸುಳಿವು ಆಧರಿಸಿ, ವೆಂಕಟಸ್ವಾಮಿ, ಗಣೇಶ್ ಮತ್ತು ಕುಂಟನಾಳ್ ಗ್ರಾಮ ಲೆಕ್ಕಿಗ ಹಳ್ಳಿ ಮಂಜುನಾಥ್, ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳ ಜತೆಗೂಡಿ ಸ್ಥಳಕ್ಕೆ ತೆರಳಿ ಆರೋಪಿಗಳಿಗೆ ತಡೆಯೊಡ್ಡಿದ್ದರು. ಆ ಸಮಯದಲ್ಲಿ ಗಣೇಶ್ ಮೇಲೆ ಹಲ್ಲೆ ನಡೆಸಿ, ಆರೋಪಿಗಳು ಮತ್ತೊಂದು ಟ್ರ್ಯಾಕ್ಟರ್‌ನಲ್ಲಿ ಪರಾರಿಯಾದರು. ತನ್ನ ಮೇಲೆ ಹಲ್ಲೆ ನಡೆದಿದೆ ಎಂದು ವೆಂಕಟಸ್ವಾಮಿ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

14 ಮಂದಿ ಬಂಧನ: ಘಟನೆಗೆ ಸಂಬಂಧಿಸಿದಂತೆ 14 ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ. ಉಳಿದವರನ್ನು ತಕ್ಷಣ ಬಂಧಿಸುವಂತೆ ಜಿಲ್ಲಾಧಿಕಾರಿ ಪವನ್ ಕುಮಾರ್ ಮಾಲಪಾಟಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೈದುಲು ಅಡಾವತ್ ಅವರಿಗೆ ಸೂಚಿಸಿದ್ದಾರೆ.

ಮರಳು ಮಾಫಿಯಾಕ್ಕೆ ಕಡಿವಾಣ?

ಬಳ್ಳಾರಿಯಲ್ಲಿ ಸದ್ದುಗದ್ದಲವಿಲ್ಲದೆ ಕಾರ್ಯಾಚರಣೆ ನಡೆಸುತ್ತಿರುವ ಮರಳು ಮಾಫಿಯಾಕ್ಕೆ ಕಡಿವಾಣ ಹಾಕಲು ಜಿಲ್ಲಾಧಿಕಾರಿ ಪವನ್ ಕುಮಾರ್ ಮಾಲಪಾಟಿ ತೀರ್ಮಾನಿಸಿದ್ದಾರೆ. ವಾರದೊಳಗೆ ಅಂತರ್ ಇಲಾಖೆಗಳ ಅಧಿಕಾರಿಗಳನ್ನು ಒಳಗೊಂಡ ಸಮನ್ವಯ ಸಮಿತಿ ರಚಿಸುವುದಾಗಿ ತಿಳಿಸಿದ್ದಾರೆ. ಗ್ರಾಮ ಲೆಕ್ಕಿಗರ ಮೇಲೆ ನಡೆದಿರುವ ದಾಳಿಯಿಂದ ಎಚ್ಚೆತ್ತುಕೊಂಡಿರುವ ಜಿಲ್ಲಾಧಿಕಾರಿ, 'ಸಿರುಗುಪ್ಪದಲ್ಲಿ ಮರಳು ದಾಸ್ತಾನು ಅಂಗಳವಿದೆ. ಬಳ್ಳಾರಿಯಲ್ಲಿ ಇಲ್ಲ. ಇದೀಗ ಬಳ್ಳಾರಿಯಲ್ಲಿ ಎರಡು ಸ್ಥಳಗಳನ್ನು ಗುರುತಿಸಲಾಗಿದೆ. ಪರಿಸರಕ್ಕೆ ಸಂಬಂಧಿಸಿದ ಒಪ್ಪಿಗೆ ಪಡೆದು, ಮರಳು ಗಣಿಗಾರಿಕೆಗೆ ಟೆಂಡರ್ ಆಹ್ವಾನಿಸಿ, ಕೆಎಸ್‌ಎಂಸಿಎಲ್ ಮೂಲಕ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗುವುದು' ಎಂದು ಜಿಲ್ಲಾಧಿಕಾರಿ ಸ್ಪಷ್ಟಪಡಿಸಿದರು.

ಕಾಶ್ಮೀರ ಕುರಿತು ವಿಶ್ವಸಂಸ್ಥೆ ಹೇಳಿಕೆ: ಭಾರತದ ಆಕ್ಷೇಪ

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರದಲ್ಲಿನ ಪರಿಸ್ಥಿತಿ ಕುರಿತಂತೆ ವಿಶ್ವಸಂಸ್ಥೆಯ ಮಾನವಹಕ್ಕುಗಳ ಹೈಕಮಿಷನರ್ ಕಚೇರಿಯು (ಒಎಚ್‌ಸಿಎಚ್‌ಆರ್) ನೀಡಿದ್ದ ಹೇಳಿಕೆಗೆ ಭಾರತ ತೀವ್ರ ಪ್ರತಿರೋಧ ವ್ಯಕ್ತಪಡಿಸಿದೆ.

'ಗಡಿರೇಖೆಯುದ್ದಕ್ಕೂ ನಡೆಯುತ್ತಿರುವ ಭಯೋತ್ಪಾದನೆ ಕೃತ್ಯಗಳಿಂದಾಗಿ ಸುರಕ್ಷತೆ, ಭದ್ರತೆಗೆ ಎದುರಾಗಿರುವ ಸವಾಲುಗಳನ್ನು ಅರ್ಥಮಾಡಿಕೊಳ್ಳದೇ ಕಚೇರಿಯು ಹೇಳಿಕೆ ನೀಡಿದೆ' ಎಂದು ಭಾರತ ಪ್ರತಿಕ್ರಿಯಿಸಿದೆ.

10 ಮಂದಿ ವಿರುದ್ಧ ಎಫ್‌ಐಆರ್

ಹಾಸನ: ಅರಸೀಕೆರೆಯಲ್ಲಿ ನ. 30 ರಂದು ಬಿಜೆಪಿಯ ಎರಡು ಗುಂಪುಗಳ ನಡುವಿನ ಮಾರಾಮಾರಿ ಸಂಬಂಧ ನಗರ ಠಾಣೆಯಲ್ಲಿ ಮೂರು ಎಫ್‌ಐಆರ್ ದಾಖಲಾಗಿವೆ.

ಎನ್.ಆರ್. ಸಂತೋಷ್ ಮತ್ತು ಅಣ್ಣಾಯಕನಹಳ್ಳಿ ವಿಜಯಕುಮಾರ್ ಬಣದವರು ಪರಸ್ಪರ ಹೊಡೆದಾಡಿಕೊಂಡಿದ್ದರು. ಹಲ್ಲೆಗೊಳಗಾಗಿದ್ದ ವಿಜಯ ಕುಮಾರ್ ಬಣದ ಮೋಹನ್ ನಾಯ್ಕ್ ನೀಡಿದ ದೂರು ಆಧರಿಸಿ ನಗರಸಭೆ ಮಾಜಿ ಸದಸ್ಯ ಸೇರಿ ಐವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ನಗರಸಭೆ ಮಾಜಿ ಸದಸ್ಯ ಹರ್ಷವರ್ಧನ್, ಚಂದ್ರಶೇಖರ್, ಸುಬ್ರಹ್ಮಣ್ಯ ಬಾಬು, ಸೈಯದ್ ಸಿಖಂದರ್, ಮಟ್ಕಾ ಕುಮಾರ್ ವಿರುದ್ಧ ಎಫ್‌ಐಆರ್ ಆಗಿದೆ. ಪ್ರತಿಯಾಗಿ ಸಂತೋಷ್ ಬಣದವರು ನೀಡಿದ ದೂರಿನ ಅನ್ವಯ, ವಿಜಯ ಕುಮಾರ್, ಮಲ್ಲಿಕಾರ್ಜುನ, ಶಶಿ, ಚರಣ್, ಶಿವರಾಜ್ ಎಂಬುವರ ವಿರುದ್ಧ ಪ್ರಕರಣ ದಾಖಲಾಗಿದೆ.

ಕಳವು: ಚಿನ್ನ ಮಾರಿ ಪ್ರವಾಸ

ಬೆಂಗಳೂರು: ನಗರದ ಹಲವು ಮನೆಗಳಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಖಾಜಾ ಮೊಹಿನುದ್ದೀನ್ (34) ಎಂಬಾತನನ್ನು ಶೇಷಾದ್ರಿಪುರ ಪೊಲೀಸರು ಬಂಧಿಸಿದ್ದಾರೆ.

'ಕೆಂಗೇರಿ ನಿವಾಸಿ ಖಾಜಾ, ಹಲವು ವರ್ಷಗಳಿಂದ ಕೃತ್ಯ ಎಸಗುತ್ತಿದ್ದ. ಆತನಿಂದ ₹ 23 ಲಕ್ಷ ಮೌಲ್ಯದ 535 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಆತ ಹಗಲಿನಲ್ಲಿ ಸುತ್ತಾಡಿ ಮನೆಗಳನ್ನು ಗುರುತಿಸುತ್ತಿದ್ದ. ಮನೆಗಳಿಗೆ ರಾತ್ರಿ ನುಗ್ಗಿ ಕಳ್ಳತನ ಮಾಡುತ್ತಿದ್ದ. ಕದ್ದ ಚಿನ್ನಾಭರಣ ಮಾರಿ, ಬಂದ ಹಣದಲ್ಲಿ ಪ್ರವಾಸಕ್ಕೆ ಹೋಗುತ್ತಿದ್ದ. ಹಣ ಖಾಲಿಯಾದ ನಂತರ ಪುನಃ ಕಳ್ಳತನ ಎಸಗುತ್ತಿದ್ದ' ಎಂದೂ ತಿಳಿಸಿದರು.

ಲಸಿಕೆ ಹಾಕಿಸಿಕೊಳ್ಳದ ಕುಟುಂಬಗಳ ಮನೆಯ ವಿದ್ಯುತ್ ಸಂಪರ್ಕ ಕಡಿತ

ಹೊಸಹಳ್ಳಿ (ಸಾಸ್ವೆಹಳ್ಳಿ): ಗ್ರಾಮದಲ್ಲಿ ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ನಿರಾಕರಿಸಿದ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರ ಕುಟುಂಬವೂ ಸೇರಿ 10ಕ್ಕೂ ಹೆಚ್ಚು ಕುಟುಂಬಗಳ ಮನೆಯ ವಿದ್ಯುತ್ ಸಂಪರ್ಕವನ್ನು ಉಪತಹಶೀಲ್ದಾರ್ ಕಡಿತ ಮಾಡಿಸಿ, ಎಚ್ಚರಿಕೆ ನೀಡಿದರು.

ಅಧಿಕಾರಿಗಳು ಮನೆಯ ಬಾಗಿಲಿಗೆ ಬಂದು ತಿಳಿಹೇಳಿದರೂ, ಯಾರೂ ಲಸಿಕೆ ಹಾಕಿಸಿಕೊಂಡಿರಲಿಲ್ಲ. ಬಳಿಕ ಜಾಗೃತಿ ಮೂಡಿಸಿದ ಉಪತಹಶೀಲ್ದಾರ್ ಎಸ್. ಪರಮೇಶ್ ನಾಯ್ಕ್ ಲಸಿಕೆ ಹಾಕುವಲ್ಲಿ ಯಶಸ್ವಿಯಾದರು. ಆನಂತರ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಯಿತು.

ನಟ ಶಿವರಾಂ ಆರೋಗ್ಯ ಸ್ಥಿತಿ ಗಂಭೀರ



ಬೆಂಗಳೂರು: ಕನ್ನಡದ ನಟ ಶಿವರಾಂ (84) ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದ್ದು, ಅವರನ್ನು ನಗರದ ಪ್ರಶಾಂತ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರಿಗೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

‘ಅವರ ಮಿದುಳಿಗೆ ಹಾನಿಯಾಗಿದೆ. ಜೀವ ರಕ್ಷಕದ ನೆರವು ನೀಡಲಾಗಿದೆ. ವಯಸ್ಸಿನ ಕಾರಣದಿಂದ ಅವರಿಗೆ ಶಸ್ತ್ರ ಚಿಕಿತ್ಸೆ ನಡೆಸುವುದು ಅಸಾಧ್ಯ ಎಂದು ನಗರದ ಪ್ರತಿಷ್ಠಿತ ಆಸ್ಪತ್ರೆಗಳ ತಜ್ಞರೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಹೀಗಾಗಿ ಅವರನ್ನು ತಮ್ಮ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ದಾಖಲಿಸಿ ಆರೈಕೆ ಮಾಡಲಾಗುತ್ತಿದೆ. ಉಳಿದ ಅಂಗಾಂಗಗಳು ಸಮರ್ಪಕವಾಗಿದ್ದು ಮಿದುಳು ಸಂಕುಚಿತಗೊಂಡಿದೆ. ಹೀಗಾಗಿ ಸದ್ಯಕ್ಕೆ ಏನನ್ನೂ ಹೇಳಲಾಗದು’ ಎಂದು ಆಸ್ಪತ್ರೆಯ ವೈದ್ಯ ಡಾ.ಮೋಹನ್ ಹೇಳಿದರು.

‘ಕಳೆದವಾರ ಕೆ.ಆರ್. ರಸ್ತೆಯ ಬಳಿ ಅವರು ಚಲಾಯಿಸುತ್ತಿದ್ದ ಕಾರು ಕಂಬವೊಂದಕ್ಕೆ ಗುದ್ದಿ ಅಪಘಾತಕ್ಕೊಳಗಾಗಿತ್ತು. ಆದರೆ, ಅವರಿಗೆ ಯಾವುದೇ ತೊಂದರೆ ಆಗಿರಲಿಲ್ಲ. ಆ ಬಳಿಕ ತಪಾಸಣೆಗೆ ನಡೆದುಕೊಂಡೇ ಬಂದಿದ್ದರು. ಅಂದು ಆರೋಗ್ಯವಾಗಿದ್ದರು’ ಎಂದು ಡಾ.ಮೋಹನ್ ಹೇಳಿದರು.

ಅಪಘಾತದ ನಂತರ ಆಘಾತಕ್ಕೊಳಗಾಗಿದ್ದ ಶಿವರಾಂ, ಬನಶಂಕರಿಯ ತಮ್ಮ ನಿವಾಸದ ಸಮೀಪದ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುತ್ತಿದ್ದರು. ಮಂಗಳವಾರ ತಮ್ಮ ನಿವಾಸದ ಕೊಠಡಿ ಸೇರಿ ಏಕಾಂತದಲ್ಲಿದ್ದ ಅವರು, ಬಹಳ ಹೊತ್ತಾದರೂ ಹೊರಬಂದಿರಲಿಲ್ಲ. ಕುಟುಂಬದ ಸದಸ್ಯರು ನೋಡಿದಾಗ ಶಿವರಾಂ ಕುಸಿದು ಬಿದ್ದ ಸ್ಥಿತಿಯಲ್ಲಿ ಇದ್ದರು. ತಲೆಗೆ ಏಟಾಗಿತ್ತು ಎಂದು ಶಿವರಾಂ ಕುಟುಂಬದ ಆಪ್ತರಾದ ನಟ, ಕಿರುತೆರೆ ನಿರ್ದೇಶಕ ಶ್ರೀನಿವಾಸಮೂರ್ತಿ ಮಾಧ್ಯಮಗಳಿಗೆ ಮಾಹಿತಿ ನೀಡಿದರು.

ಸಂಗಾತಿ ಅರಸಿ ತವರಿನತ್ತ ಕುಶ

ಬಂಡೀಪುರದಿಂದ ದುಬಾರೆಯತ್ತ ಆನೆ: ರೇಡಿಯೊ ಕಾಲರ್‌ನಲ್ಲಿ ಓಡಾಟ ಪತ್ತೆ

● ರಘು ಹೆಬ್ಬಾಲೆ

ಕುಶಾಲನಗರ: ಆರು ತಿಂಗಳ ಹಿಂದೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಮೂಲೆಹೊಳೆ ಅರಣ್ಯ ಪ್ರದೇಶಕ್ಕೆ ಬಿಡಲಾಗಿದ್ದ ಸಾಕಾನೆ ಕುಶ ಇದೀಗ ಸಂಗಾತಿಯನ್ನು ಅರಸಿಕೊಂಡು ತವರಿನತ್ತ ಹೆಜ್ಜೆ ಹಾಕುತ್ತಿರುವುದು ರೇಡಿಯೊ ಕಾಲರ್ ಮೂಲಕ ತಿಳಿದುಬಂದಿದೆ.

ದುಬಾರೆ ಸಾಕಾನೆ ಶಿಬಿರದಲ್ಲಿ ಸರಪಳಿಯಿಂದ ಬಂಧಿಸಲಾಗಿದ್ದ ಆನೆಯನ್ನು ಸರ್ಕಾರದ ಆದೇಶದ ಹಿನ್ನೆಲೆಯಲ್ಲಿ ಬಂಡೀಪುರದಲ್ಲಿ ಬಿಡಲಾಗಿತ್ತು.

2016ರಲ್ಲಿ ಚಟ್ನಳ್ಳಿ ವ್ಯಾಪ್ತಿಯಲ್ಲಿ ಪುಂಡಾಟ ನಡೆಸುತ್ತಿದ್ದ ಆನೆಯನ್ನು ‘ಆಪರೇಷನ್ ಎಲಿಫೆಂಟ್’ ಕಾರ್ಯಾಚರಣೆ ನಡೆಸಿ ಶಿಬಿರಕ್ಕೆ ತಂದು ಪಳಗಿಸಲಾಗಿತ್ತು. 2017ನವೆಂಬರ್‌ನಲ್ಲಿ ದುಬಾರೆ ಶಿಬಿರದಿಂದ ರಾತ್ರೋರಾತ್ರಿ ತಪ್ಪಿಸಿಕೊಂಡು ಹೋಗಿ ಎರಡು ವರ್ಷ ನಾಪತ್ತೆಯಾಗಿತ್ತು. ನಂತರ ಶಿಬಿರದ ಅಧಿಕಾರಿಗಳ ನೇತೃತ್ವದಲ್ಲಿ ಹಲವು ತಂಡಗಳು ಕಾರ್ಯಾಚರಣೆ ನಡೆಸಿ ನಾಪತ್ತೆಯಾಗಿದ್ದ ಆನೆಯನ್ನು ಮರಳಿ ಶಿಬಿರಕ್ಕೆ ತರುವಲ್ಲಿ ಯಶಸ್ವಿಯಾಗಿದ್ದರು.



ದುಬಾರೆ ಶಿಬಿರದಲ್ಲಿದ್ದ ಕುಶ ಆನೆ

‘ಕುಶ ಆನೆಯ ಕಾಲಿಗೆ ಸರಪಳಿ ಹಾಕಿ ಹಿಂಸಿಸಲಾಗುತ್ತಿದೆ’ ಎಂದು ಪ್ರಾಣಿಪ್ರಿಯರು ಸಾಮಾಜಿಕ ಜಾಣದಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದರು. ಸಂಸದೆ, ಪರಿಸರವಾದಿ ಮನೇಕಾ ಗಾಂಧಿ ಆನೆ ಬಿಡುಗಡೆಗೆ ಒತ್ತಾಯಿಸಿದ್ದರು. ಆ ಹಿನ್ನೆಲೆಯಲ್ಲಿ ಅರಣ್ಯ ಸಚಿವ ಅರವಿಂದ ಲಿಂಬಾವಳಿ ಹಿರಿಯ ಅರಣ್ಯಾಧಿಕಾರಿಗಳ ಸಭೆ ನಡೆಸಿ ಆನೆಗೆ ರೇಡಿಯೊ ಕಾಲರ್ ಅಳವಡಿಸಿ ಬಿಡುಗಡೆ ಮಾಡಬೇಕು ಎಂದು ಕಳೆದ ಮಾರ್ಚ್‌ನಲ್ಲಿ ಆದೇಶಿಸಿದ್ದರು. ಸರ್ಕಾರದ ಆದೇಶದ ಪ್ರಕಾರ ಚಾಮರಾಜನಗರ ಜಿಲ್ಲೆಯ ಬಂಡೀಪುರ ಮೂಲೆಹೊಳೆ ವಲಯದ ಅರಣ್ಯ ಪ್ರದೇಶದಲ್ಲಿ ರೇಡಿಯೊ ಕಾಲರ್ ಅಳವಡಿಸಿ ಬಂಧ ಮುಕ್ತಗೊಳಿಸಲಾಗಿತ್ತು.

ಇದೀಗ ಕುಶ ಬಂಡೀಪುರ ಬಿಟ್ಟು ನಾಗರಹೊಳೆ ರಾಷ್ಟ್ರೀಯ ಅರಣ್ಯದತ್ತ ತಲುಪಿರುವ ಮಾಹಿತಿಗಳು ರೇಡಿಯೊ ಕಾಲರ್‌ನಿಂದ ಲಭಿಸುತ್ತಿದೆ. ಕುಶ ಅನೆ ಆರು ತಿಂಗಳಲ್ಲಿ 180 ರಿಂದ 200 ಕಿ.ಮೀ ಸಂಚರಿಸಿರುವುದು ಖಚಿತವಾಗಿದೆ. ಬಂಡೀಪುರದಿಂದ ಕೇರಳ ಗಡಿ ಮೂಲಕ ತೋಳ್ಪಟ್ಟಿ ಅರಣ್ಯ ಮಾರ್ಗವಾಗಿ ಇದೀಗ ನಾಗರಹೊಳೆ ಅಭಯಾರಣ್ಯಕ್ಕೆ ತಲುಪಿದೆ.

‘ಕೊಡಗು ಜಿಲ್ಲೆಯ ತಿತಿಮತಿ ಕಡೆಗೆ ಬರುತ್ತಿರುವ ಸುಳಿವು ದೊರೆತಿದ್ದು, ನಂತರ ಮಾಲ್ದಾರೆ ರಕ್ಷಿತಾರಣ್ಯ ಮೂಲಕ ದುಬಾರೆ ವ್ಯಾಪ್ತಿಗೆ ಬರುವ ನಿರೀಕ್ಷೆ ಇದೆ’ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಹೇಳುತ್ತಾರೆ.

‘ತನ್ನ ಇಚ್ಛೆಗೆ ವಿರುದ್ಧವಾಗಿ ಸ್ಥಳಾಂತರಗೊಂಡಿದ್ದ ಆನೆ ಕ್ಷೇಮವಾಗಿ ದುಬಾರೆ ಶಿಬಿರ ತಲುಪಲಿ’ ಎಂಬ ಆಶಯವನ್ನು ಕುಶನನ್ನು ಕೆಲವು ವರ್ಷಗಳ ಕಾಲ ಆರೈಕೆ ಮಾಡಿದ್ದ ಸಿಬ್ಬಂದಿ, ಮಾವುತ ಹಾಗೂ ಕಾವಾಡಿಗರು ವ್ಯಕ್ತಪಡಿಸಿದ್ದಾರೆ.

ವಿವಿಧೆಡೆ ಮುಂದುವರಿದ ಮಳೆ

ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ, ಉತ್ತರ ಕನ್ನಡ, ಬೆಳಗಾವಿ,ಹಾವೇರಿ ಸೇರಿದಂತೆ ವಿವಿಧೆಡೆ ಮಳೆ ಮುಂದುವರಿದಿದೆ.

ಹುಬ್ಬಳ್ಳಿಯಲ್ಲಿ ಬುಧವಾರ ರಾತ್ರಿ ಸುರಿದ ಧಾರಾಕಾರ ಮಳೆಗೆ ಕೆಲವೆಡೆ ಬಿದ್ದ ಮರದ ಕೊಂಬೆಗಳನ್ನು ಮಹಾನಗರ ಪಾಲಿಕೆಯವರು ತೆರವುಗೊಳಿಸಿದರು.

ವರುಣನ ಕಣ್ಣಾಮುಚ್ಚಾಲೆ ಆಟದಿಂದಾಗಿ ರೈತರ ಕೃಷಿ ಚಟುವಟಿಕೆಗಳಿಗೆ ತೊಂದರೆಯಾಯಿತು. ಹತ್ತಿ, ಮೆಣಸಿನಕಾಯಿ ಕೊಯ್ಲು ಮಾಡಲು ಹೊಲಕ್ಕೆ ಹೋಗಿದ್ದವರಿಗೆ ಮಳೆ ಅಡ್ಡಿಪಡಿಸಿತು. ಧಾರವಾಡ ನಗರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಕೆಲ ಕಾಲ ಧಾರಾಕಾರ ಮಳೆಯಾಗಿದೆ. ನಗರದ ಬಿಆರ್‌ಟಿಎಸ್ ಸೇರಿದಂತೆ ಬಹಳಷ್ಟು ರಸ್ತೆಗಳು ಜಲಾವೃತಗೊಂಡವು.

ಬೆಳಗಾವಿ ಜಿಲ್ಲೆಯ ಬಹುತೇಕ ಕಡೆಗಳಲ್ಲಿ ಬುಧವಾರ ರಾತ್ರಿಯಿಡೀ ಜೋರು ಮಳೆ ಬಿದ್ದಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಮಳೆಯಾಗಿದೆ. ಕಾರವಾರದಲ್ಲಿ ತಡರಾತ್ರಿ ಗುಡುಗು ಸಹಿತ ಜೋರಾಗಿ ವರ್ಷಧಾರೆ ಸುರಿಯಿತು. ಶಿರಸಿ, ಹಳಿಯಾಳ, ಭಟ್ಕಳ, ಗೋಕರ್ಣ, ಜೊಯಿಡಾದಲ್ಲೂ ರಾತ್ರಿಯಿಂದ ಬೆಳಗಿನ ತನಕ ಮಳೆಯಾಗಿದೆ. ಶಿರಸಿ ತಾಲ್ಲೂಕಿನಲ್ಲೇ ಸುಮಾರು 500 ಎಕರೆಗಳಷ್ಟು ಭತ್ತದ ಫಸಲಿಗೆ ಹಾನಿಯಾಗಿದೆ. ಕೊಯ್ಲು ಮಾಡಿಟ್ಟಿದ್ದ ಭತ್ತದ ತೆನೆಗಳು ನೀರಿನಲ್ಲಿ ಮುಳುಗಿ ಹಾಳಾಗಿವೆ. ಹಳಿಯಾಳ ತಾಲ್ಲೂಕಿನಲ್ಲಿ ಮೆಕ್ಕೆಜೋಳ ಮಳೆಯಲ್ಲಿ ನೆನೆದಿದೆ.

ಕೊಳ್ಳೇಗಾಲ ವರದಿ: ತಾಲ್ಲೂಕಿನ ಗುಂಡಾಲ್ ಜಲಾಶಯವು ಉದ್ಘಾಟನೆಗೊಂಡ 43 ವರ್ಷದಲ್ಲಿ ಮೊದಲ ಬಾರಿಗೆ ಭರ್ತಿಯಾಗಿದ್ದು, ಅಚ್ಚುಕಟ್ಟು ಪ್ರದೇಶದ ರೈತರು ಹರ್ಷ ವ್ಯಕ್ತಪಡಿಸಿದ್ದಾರೆ.

ಕೃಷಿಗೆ ನೀರುಣಿಸಲೆಂದೇ 1970ರಲ್ಲಿ ಜಲಾಶಯ ನಿರ್ಮಾಣಕ್ಕೆ ಭೂಮಿಪೂಜೆ ನಡೆದು, 1978ರಲ್ಲಿ ಉದ್ಘಾಟನೆಗೊಂಡಿತ್ತು. 0.97 ಟಿಎಂಸಿ ಅಡಿ ನೀರು ಸಂಗ್ರಹಿಸುವ ಸಾಮರ್ಥ್ಯದ ಜಲಾಶಯವು ಇದುವರೆಗೆ ಭರ್ತಿಯಾಗಿರಲಿಲ್ಲ. 2005 ಮತ್ತು 2015ರಲ್ಲಿ ಭರ್ತಿಯಾಗಲು ಒಂದು ಅಡಿ ಬಾಕಿ ಇತ್ತು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.62	5,159	5,434
ಹಾರಂಗಿ	2,859	2,856.87	44	1,115
ಕಬಿನಿ	2284.00	2,283.66	1,500	700
ಹೇಮಾವತಿ	2,922	2,913.89	1,410	1,550
ಲಿಂಗನಮಕ್ಕಿ	1,819	1,812.30	2,293	-
ಸೂಪಾ (ಮೀ)	564	554.82	554	2,279
ಮಾಣಿ	594	586.40	112	-
ತುಂಗಭದ್ರಾ	1,633	1,633	10,958	10,923
ಮಲಪ್ರಭಾ	2079.5	2,077.15	569	569
ಘಟಪ್ರಭಾ	2175	2,165.90	1,201	179
ಭದ್ರಾ	186	185.11	1,207	1,207
ಆಲಮಟ್ಟಿ (ಮೀ)	519.6	518.58	4,063	580
ನಾರಾಯಣಪುರ (ಮೀ)	492.25	492.15	390	167

* ನೆಲಮಟ್ಟದಿಂದ

ನಟ ಚೇತನ್ ನೇತೃತ್ವದಲ್ಲಿ ಜಿಲ್ಲಾಧಿಕಾರಿಗೆ ಮನವಿ ಪತ್ರ

ಆದಿವಾಸಿಗಳ ಮೇಲೆ ಗುಂಡಿನ ದಾಳಿ: ಆರೋಪ

ಪ್ರಜಾವಾಣಿ ವಾರ್ತೆ

ಮೈಸೂರು: ‘ಪಿರಿಯಾಪಟ್ಟಣದ ರಾಣಿಗೇಟ್ ಹಾಡಿಯ ಆದಿವಾಸಿ ಸಮುದಾಯಕ್ಕೆ ಸೇರಿದ ಬಸವ ಎಂಬುವವರು ಬಹಿರ್ದೆಸೆಗೆ ಹೋಗಿದ್ದಾಗ ಅರಣ್ಯ ಇಲಾಖೆಯ ವಾಚರ್ ಸುಬ್ರಹ್ಮಣ್ಯ ಗುಂಡು ಹಾರಿಸಿ ಗಾಯಗೊಳಿಸಿದ್ದಾರೆ’ ಎಂದು ಆರೋಪಿಸಿ ನಟ ಚೇತನ್ ನೇತೃತ್ವದಲ್ಲಿ ಇಲ್ಲಿನ ಜಿಲ್ಲಾಧಿಕಾರಿ ಕಚೇರಿಗೆ ಆದಿವಾಸಿಗಳು ಗುರುವಾರ ಮನವಿ ಪತ್ರ ಸಲ್ಲಿಸಿದರು.

‘ಗಾಯಗೊಂಡ ಬಸವ ಅವರನ್ನು ಇಲ್ಲಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ. ಪೊಲೀಸರು ಬಸವ ಅವರ ವಿರುದ್ಧವೇ ಪ್ರಕರಣ ದಾಖಲಿಸಿದ್ದು, ಪ್ರತಿದೂರನ್ನು ಸ್ವೀಕರಿಸುತ್ತಿಲ್ಲ. ಆದಿವಾಸಿಗಳ ಮೇಲಿನ ದೌರ್ಜನ್ಯ ನಿಲ್ಲಬೇಕು. ಅವರಿಗೆ ನ್ಯಾಯ ಸಿಗಬೇಕು’ ಎಂದು ಚೇತನ್ ಆಗ್ರಹಿಸಿದರು.

ಆದರೆ, ಈ ಆರೋಪ ಅಲ್ಲಗಳೆದಿರುವ ನಾಗರಹೊಳೆ ಹುಲಿ ಸಂರಕ್ಷಿತ ಅರಣ್ಯದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮಹೇಶ್ ಕುಮಾರ್, ‘ಗಂಧದ ಮರ ಕಡಿದು ಸಾಗಿಸುವ ವೇಳೆ ಗುಂಡಿನ ದಾಳಿ ನಡೆಸಲಾಗಿದೆ’ ಎಂದು ಸ್ಪಷ್ಟಪಡಿಸಿದರು.



ಮೈಸೂರಿನ ಜಿಲ್ಲಾಧಿಕಾರಿ ಕಚೇರಿಗೆ ಗುರುವಾರ ಮನವಿ ಸಲ್ಲಿಸಲು ಬಂದ ನಟ ಚೇತನ್ ಹಾಗೂ ಬೆಂಬಲಿಗರನ್ನು ಪೊಲೀಸರು ತಡೆದರು. ಗ್ರೀನ್ ಇಂಡಿಯಾ ಟ್ರಸ್ಟ್‌ನ ಯೋಜನಾ ನಿರ್ದೇಶಕ ಮಹೇಂದ್ರಕುಮಾರ್ ಇದ್ದಾರೆ

‘ಆದಿವಾಸಿ ಬಸವ ಇನ್ನಿಬ್ಬರೊಂದಿಗೆ ಸೇರಿಕೊಂಡು ಡಿ.1ರಂದು ಬೆಳಿಗ್ಗೆ 11 ಗಂಟೆ ಸುಮಾರಿಗೆ ಕಾಡಿನೊಳಗೆ ಗಂಧದ ಮರ ಕಡಿದು ಸಾಗಿಸುವ ವೇಳೆ ಅರಣ್ಯ ಸಿಬ್ಬಂದಿ ದಾಳಿ ನಡೆಸಿದ್ದರು. ಪ್ರತಿಯಾಗಿ ಆರೋಪಿಗಳೂ ದಾಳಿ ನಡೆಸಿದಾಗ ಆತ್ಮರಕ್ಷಣೆಗಾಗಿ ಗುಂಡು ಹಾರಿಸಲಾಗಿದೆ. ಇಲಾಖೆಯ ಮೂವರು ಸಿಬ್ಬಂದಿ ಗಾಯಗೊಂಡಿದ್ದು ಚಿಕಿತ್ಸೆ ಪಡೆದಿದ್ದಾರೆ. ಆರೋಪಿಗಳಿಂದ 50 ಕೆ.ಜಿ ಗಂಧದ ಮರಗಳನ್ನು ವಶಪಡಿಸಿಕೊಂಡು ಬೈಲುಕುಪ್ಪೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ’ ಎಂದು ‘ಪ್ರಜಾವಾಣಿ’ಗೆ ತಿಳಿಸಿದರು.

‘ಆರೋಪಿಗಳ ಪೈಕಿ ಗುಂಡೇಟು ತಗುಲಿದ ಬಸವ ಮಾತ್ರ ಸಿಕ್ಕಿದ್ದಾನೆ. ಉಳಿದಿಬ್ಬರು ಪರಾರಿಯಾಗಿದ್ದಾರೆ. ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ’ ಎಂದು ಪೊಲೀಸರು ಹೇಳಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್ ಪ್ರತಿಕ್ರಿಯಿಸಿ, ‘ಆದಿವಾಸಿಗಳು ನೀಡಿರುವ ಪ್ರತಿದೂರನ್ನೂ ಈ ಪ್ರಕರಣದಲ್ಲಿಯೇ ಸೇರಿಸಿಕೊಂಡು ತನಿಖೆ ನಡೆಸಲಾಗುತ್ತದೆ’ ಎಂದರು.

ದರೋಡೆ: ಪೊಲೀಸರು ಸೇರಿ 6 ನೌಕರರ ಬಂಧನ

ಕೋಲಾರ: ಜಿಲ್ಲೆಯ ಮಾಲೂರು ತಾಲ್ಲೂಕಿನ ಚಿಕ್ಕಕುಂತೂರು ಬಳಿ ಐದು ದಿನಗಳ ಹಿಂದೆ ನಡೆದಿದ್ದ ದರೋಡೆ ಪ್ರಕರಣದಲ್ಲಿ ಇಬ್ಬರು ಪೊಲೀಸರು ಸೇರಿದಂತೆ ಒಟ್ಟು ಆರು ಸರ್ಕಾರಿ ನೌಕರರು ಸಿಕ್ಕಿ ಬಿದ್ದಿದ್ದಾರೆ.

ಜಿಲ್ಲಾ ಸಶಸ್ತ್ರ ಮೀಸಲು ಪಡೆಯ (ಡಿಎಆರ್) ಕಾನ್‌ಸ್ಟೆಬಲ್‌ಗಳಾದ ವೇಣುಗೋಪಾಲ್ ಮತ್ತು ಬಸವರಾಜು ಸೇರಿದಂತೆ ಆರು ಆರೋಪಿಗಳನ್ನು ನಗರದ ಗಲ್‌ಪೇಟೆ ಠಾಣೆ ಪೊಲೀಸರು ಗುರುವಾರ ಬಂಧಿಸಿದ್ದಾರೆ. ಕಾನ್‌ಸ್ಟೆಬಲ್ ವೇಣುಗೋಪಾಲ್, ನ್ಯಾಯಾಧೀಶರೊಬ್ಬರ ಅಂಗರಕ್ಷಕರಾಗಿ ನಿಯೋಜನೆಗೊಂಡಿದ್ದರು.

ಇವರೊಂದಿಗೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಚಾಲಕ ಉದಯ್, ಅರಣ್ಯ ಇಲಾಖೆ ಗಾರ್ಡ್ ನವೀನ್, ಬೆಸ್ಕಾಂ ನೌಕರರಾದ ಮಾರ್ಕೊಂಡ ಮತ್ತು ಹರ್ಷದ್ ಅವರನ್ನು ಬಂಧಿಸಲಾಗಿದೆ.

ಹೊಸಕೋಟೆ ತಾಲ್ಲೂಕಿನ ಕಟ್ಟಿಗೇನಹಳ್ಳಿಯ ಶಬ್ಬೀರ್ ಎಂಬುವರ ಕಾರನ್ನು ನ.27ರಂದು ಚಿಕ್ಕಕುಂತೂರು ಗೇಟ್ ಬಳಿ ಪೊಲೀಸ್ ಸಮವಸ್ತ್ರದಲ್ಲಿ ಬಂದಿದ್ದ ಆರೋಪಿಗಳು ಅಡ್ಡಗಟ್ಟಿ ದರೋಡೆ ಮಾಡಿದ್ದರು.

ಸರ್ಕಾರಿ ಎಂಜಿನಿಯರಿಂಗ್ ಕಾಲೇಜು: ಶುಲ್ಕ ಹೆಚ್ಚಳ

ಬೆಂಗಳೂರು: ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ರಾಜ್ಯ ಸರ್ಕಾರ ₹ 10 ಸಾವಿರ ಶುಲ್ಕ ಹೆಚ್ಚಿಸಿದೆ.

ಈ ಹಿಂದೆ ಸರ್ಕಾರಿ ಕಾಲೇಜುಗಳಿಗೆ ವಿದ್ಯಾರ್ಥಿಗಳು ಒಟ್ಟು ₹ 23,810 ಪಾವತಿ ಮಾಡಬೇಕಿತ್ತು. ಶುಲ್ಕ ಪರಿಷ್ಕರಿಸಿರುವುದರಿಂದ ವಿದ್ಯಾರ್ಥಿಗಳು ₹ 33,810 ಪಾವತಿಸಬೇಕಿದೆ.

ಸರ್ಕಾರ ವಿವಿಧ ಕಾರಣಗಳಿಂದಾಗಿ ನಾಲ್ಕು ವರ್ಷಗಳಿಂದ ಎಂಜಿನಿಯರಿಂಗ್ ಕಾಲೇಜುಗಳ ಶುಲ್ಕ ಹೆಚ್ಚಳ ಮಾಡಿರಲಿಲ್ಲ. ಪ್ರಸಕ್ತ ಸಾಲಿಗೆ ಶೇ 25ರಿಂದ 30ರಷ್ಟು ಶುಲ್ಕ ಹೆಚ್ಚಳಕ್ಕೆ ಅವಕಾಶ ನೀಡುವಂತೆ ಖಾಸಗಿ ಎಂಜಿನಿಯರಿಂಗ್ ಕಾಲೇಜು ಆಡಳಿತ ಮಂಡಳಿಗಳು ಮನವಿ ಮಾಡಿದ್ದವು. ಆದರೆ, ಕೋವಿಡ್‌ನಿಂದಾಗಿ ಈ ವರ್ಷ ಶುಲ್ಕ ಹೆಚ್ಚಳ ಮಾಡುವುದಿಲ್ಲ ಎಂದು ಸರ್ಕಾರ ಸ್ಪಷ್ಟಪಡಿಸಿತ್ತು.

ಬೋಧನಾ ಶುಲ್ಕದೊಂದಿಗೆ ಸ್ಕಿಲ್ ಲ್ಯಾಬ್ ಹಾಗೂ ಇತರ ಶುಲ್ಕಗಳನ್ನು ₹ 20 ಸಾವಿರಗಳಿಗಿಂತ ಹೆಚ್ಚಳ ಮಾಡದಂತೆ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳಿಗೆ ಸೂಚಿಸಿತ್ತು. ಆದರೆ, ನ. 30ರಂದು ಶುಲ್ಕ ಹೆಚ್ಚಿಸಿದ್ದು, ಪರಿಷ್ಕೃತ ಶುಲ್ಕ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

‘ಕೆಇಎ ಸೀಟ್ ಮ್ಯಾಟ್ರಿಕ್ಸ್ ಹೊರಡಿಸಿದ್ದಾಗ ಆಪ್ಷನ್ ಎಂಟ್ರಿ ಸಮಯದಲ್ಲೂ ಶುಲ್ಕ ₹ 23,810 ಇತ್ತು. ಆದರೆ, ಅಂತಿಮವಾಗಿ ಸೀಟು ಆಯ್ಕೆ ಮಾಡಿಕೊಂಡು ಶುಲ್ಕ ಪಾವತಿಸುವ ವೇಳೆಗೆ ₹ 33,810 ತೋರಿಸುತ್ತಿದೆ. ಈ ಬಾರಿ ಎಂಜಿನಿಯರಿಂಗ್ ಶುಲ್ಕ ಹೆಚ್ಚಳವಿಲ್ಲ ಎಂದು ಹೇಳಿದ್ದ ಸರ್ಕಾರ ದಿಢೀರನೆ ಶುಲ್ಕ ಹೆಚ್ಚಿಸಿದೆ’ ಎಂದು ವಿದ್ಯಾರ್ಥಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಪ್ರಥಮ್

ಒಳ್ಳೆ ಹುಡುಗ ಅಲ್ಲ... ನಟ ಭಯಂಕರ!

ರಾಜ್‌ಕುಮಾರ್ ಇಂಟರ್‌ನ್ಯಾಷನಲ್ ಹೋಟೆಲ್ ಹಾಗೂ ಕಲರ್ಸ್ ಕನ್ನಡ ವಾಹಿನಿಯ ಸೆಕ್ಯುರಿಟಿ ಗಾರ್ಡ್ ಆಗಿ ಕೆಲಸ ಮಾಡಿದ್ದ ಪ್ರಥಮ್, ರಾಜ್ ಕುಟುಂಬದವರನ್ನೇ ತಾರಾಬಳಗದಲ್ಲಿ ಹೊಂದಿ ಚಿತ್ರ ನಿರ್ದೇಶನ ಮಾಡುವ ಮಟ್ಟಕ್ಕೆ ಏರಿದವರು. ಮೂರು ಚಿತ್ರಗಳನ್ನು ತೆರೆಗೆ ತರಲು ಸಿದ್ಧರಾದ ಅವರ ಜೊತೆ ಒಂದಿಷ್ಟು ಮಾತುಕತೆ...

ಶರತ್ ಹೆಗ್ಡೆ

• ಪ್ರಥಮ್ ಯಾರು? ಬರಿ ಒಳ್ಳೆ ಹುಡುಗನಾ ಅಥವಾ....?

ನೀವು ಇದುವರೆಗೆ ಏನಾದರೂ ಅಭಿಪ್ರಾಯ ಹೊಂದಿದ್ದರೆ ಅದನ್ನು ಬದಲಿಸುವುದಿಲ್ಲ. ನಾನು ಸಾಮಾನ್ಯರಲ್ಲಿ ಸಾಮಾನ್ಯ ಅಷ್ಟೆ. ಸೆಲೆಬ್ರಿಟಿ ಸ್ಟೇಟಸ್ ಕೂಡಾ ನನಗಿಲ್ಲ. ಜನವರಿ ವೇಳೆಗೆ 'ನಟ ಭಯಂಕರ' ಚಿತ್ರ ಬಂದಮೇಲೆ ನೀವೇ ಹೇಳಬೇಕು. 'ನಾವು ಇದುವರೆಗೆ ನೋಡಿದ ಪ್ರಥಮ್ ಅಲ್ಲ. ಇವನು ಬೇರೆಯೇ ಥರ' ಅನ್ನುತ್ತೀರಿ. ಅದು ನನಗೆ ಬೇಕು. ನಾನು ಏನು ಎಂಬುದನ್ನು ತೋರಿಸಿಕೊಳ್ಳಲು ಅವಕಾಶ ಸಿಕ್ಕಿದೆ.

• ಈ ಬಿಗ್‌ಬಾಸ್ ವಿಜೇತ ಸಮಾಜ ಸೇವೆಯಲ್ಲೂ ತೊಡಗಿಸಿಕೊಂಡಿದ್ದಾರಲ್ಲ?

ನಮ್ಮದು ಕೃಷಿ ಬದುಕಿನ ಕುಟುಂಬ. ಹೌದು ಬಿಗ್ ಬಾಸ್‌ನಲ್ಲಿ ಹಣ ಬಂತು. ಕಾರು, ಐಷಾರಾಮಿ ವಸ್ತುಗಳನ್ನು ಖರೀದಿಸಿ ನನಗೆ ಒತ್ತಡ ಮಾಡಿಕೊಳ್ಳುವುದು ಬೇಡವಾಗಿತ್ತು. ಐದಾರು ಕೋಟಿ ಜನರಲ್ಲಿ ಸಾವಿರಾರು ಜನರ ಪ್ರೀತಿ ಸಿಕ್ಕಿದೆ. ಇನ್ನು ಮೂರು ವರ್ಷ ಆದ ಬಳಿಕ ನನ್ನಲ್ಲಿ ಇಷ್ಟೊಂದು ಶಕ್ತಿ ಇರುತ್ತೋ ಇಲ್ಲವೋ ಗೊತ್ತಿಲ್ಲ. ಆದರೆ, ಕೈ ನಡೆಯುವಾಗ ಏನಾದರೂ ಮಾಡಬೇಕು. ಇದೆಲ್ಲಾ ತೋರ್ಪಡಿಕೆಗೆ ಅಲ್ಲ. ನಾವು ಮಾಡಿರುವುದನ್ನು ನೋಡಿ ಇನ್ಯಾರಾದರೂ ಕನಿಷ್ಠ 100 ಜನರಿಗೆ ಸ್ಫೂರ್ತಿಯಾಗಿ ಅವರು ಒಂದಷ್ಟು ಜನರಿಗೆ ನೆರವಾದರೆ ಸಂತೋಷ ಅಲ್ವಾ?

• ಕರ್ನಾಟಕದ ಅಳಿಯ ಮತ್ತು ಡಾ.ರಾಜ್‌ಕುಮಾರ್ ಕುಟುಂಬದ ನಡುವಿನ ನಂಟು ಏನು?

ಇದರಲ್ಲಿ ರಾಘವೇಂದ್ರ ರಾಜ್‌ಕುಮಾರ್ ಅವರನ್ನು ಶಕ್ತಿಶಾಲಿಯಾಗಿ ತೋರಿಸಿದ್ದೇವೆ. ಇದನ್ನು ನೋಡಿ ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರೇ ಖುಷಿಪಟ್ಟಿದ್ದರು. 'ರಾಘವೇಂದ್ರ ರಾಜ್‌ಕುಮಾರ್ ಅವರನ್ನು ಈ ಎನರ್ಜಿಯಲ್ಲಿ ತೋರಿಸಿದವರು ಯಾರೂ ಇಲ್ಲ' ಎಂದು ಅಪ್ಪು ಮೆಚ್ಚಿಕೊಂಡಿದ್ದರು. ಹೀಗೆ 'ಕರ್ನಾಟಕದ ಅಳಿಯ'ದಲ್ಲಿ ರಾಜ್ ನಂಟು, ನನ್ನ ನಿರ್ದೇಶನ, ರಾಜ್ ಕುಟುಂಬದ ಮಾರ್ಗದರ್ಶನ ನಿರಂತರವಾಗಿದೆ.

• ಸಿನಿಮಾಕ್ಕೆ ಬರಬೇಕಾದರೆ ಸಿದ್ಧತೆ ಬೇಕಿತ್ತಲ್ಲಾ?

ಹೌದು ಬೆಂಗಳೂರಿಗೆ ಬಂದು ಪದವಿ ಓದುತ್ತಿದ್ದೆ. ಅದೇ ವೇಳೆಗೆ ನಿರ್ದೇಶನ ಕೋರ್ಸ್ ಸೇರಿದೆ. ಪದವಿ ಪೂರ್ಣವಾಗಲಿಲ್ಲ. ಆದರೆ, ಆಗಲೇ 'ಸಿಲ್ಲಿಲಲ್ಲಿ', 'ಪರಮಪದ' ಧಾರಾವಾಹಿಗಳಲ್ಲಿ ಕೆಲಸ ಮಾಡಲು ಶುರು ಮಾಡಿದೆ. ಆಗಲೂ ಸೆಕ್ಯುರಿಟಿ ಗಾರ್ಡ್ ಆಗಿದ್ದ ಕಾರಣ ಹಗಲೆಲ್ಲಾ ಸಿಕ್ಕಾಪಟ್ಟೆ ನಿದ್ದೆ ಬರುತ್ತಿತ್ತು. ಆದರೂ ಅದ್ಹೇಗೋ ಚಿತ್ರ ನಿರ್ದೇಶನದ ಪಟ್ಟುಗಳನ್ನು ಅರಗಿಸಿಕೊಂಡೆ. ಆಗ ಗೆಳೆಯರಾಗಿದ್ದ ಶ್ರೀಕಾಂತ್, ಅಕುಲ್ ಬಾಲಾಜಿ ಇವರೆಲ್ಲಾ ಸೇರಿ ಕಲರ್ಸ್ ಕನ್ನಡದ ಮುಖ್ಯಸ್ಥ ಪರಮೇಶ್ವರ ಗುಂಡ್ಕಲ್ ಅವರಿಗೆ ಪರಿಚಯಿಸಿದರು. ಅವರೂ ಸಾಕಷ್ಟು ಅಳೆದು ತೂಗಿದ ಬಳಿಕವಷ್ಟೇ ಬಿಗ್ ಬಾಸ್‌ನಲ್ಲಿ ಭಾಗವಹಿಸಲು ಅವಕಾಶ ಕೊಟ್ಟರು. ಮತ್ತೆ ಹಿಂದಿರುಗಿ ನೋಡಲಿಲ್ಲ.

• ಸಿನಿಮಾಗಳಲ್ಲಿ ಕಾಶಿನಾಥ್ ಶೈಲಿ ಅನುಸರಿಸುತ್ತೀರಂತೆ ಹೌದಾ?

ಹೌದು, ಪ್ರತಿ ನಾಯಕನಿಗೂ ಅವರದ್ದೇ ಆದ ಪ್ರೇಕ್ಷಕರು ಇರುತ್ತಾರೆ. ಮಾಸ್, ಕ್ಲಾಸ್, ರೊಮ್ಯಾನ್ಸ್... ಹೀಗೆ ಹಲವಾರು ಪ್ರಕಾರಗಳಿವೆ. ಹೀಗೆ ನನ್ನದೇ ಆದ ಶೈಲಿಯನ್ನು ರೂಪಿಸಬೇಕು. ಹಾಗಾಗಿ ಜನರನ್ನು ನಗಿಸುವುದು ನನಗೆ ಇಷ್ಟ. ಪ್ರೇಕ್ಷಕರು ಖುಷಿಯಾಗಿರಬೇಕು.

• ಏನಿದು ನಟ ಭಯಂಕರ?

ಇಲ್ಲಿ ನಾನು ನಾಯಕ ಅಲ್ಲ. ಗಟ್ಟಿ ಕಥೆ, ಆ್ಯಕ್ಷನ್, ತಾಂತ್ರಿಕತೆ, ನವಿರಾದ ನಿರೂಪಣೆ, ಹೈ ವೋಲ್ಟೇಜ್ ಗ್ರಾಫಿಕ್ಸ್, ಹಾರರ್, ತಿಳಿ ಹಾಸ್ಯ ಈ ಚಿತ್ರದ ಹೀರೊಗಳು.

• 'ಡ್ರೋಣ್ ಪ್ರಥಮ್', 'ಕರ್ನಾಟಕದ ಅಳಿಯ' ಏನಿದೆಲ್ಲಾ?

ಮೊದಲು 'ಡ್ರೋಣ್ ಪ್ರಥಮ್' ಬರುತ್ತೆ. ಕರ್ನಾಟಕದಲ್ಲಿ 2020ರಲ್ಲಿ ನಡೆದ ದೊಡ್ಡ ಹಗರಣದ ಸುತ್ತ ಕಥೆ ಇದೆ. ಉದಾಹರಣೆಗೆ ಅನಂತ್‌ನಾಗ್ ಅವರ 'ಗೌರಿಗಣೇಶ', 'ಉಂಡೂ ಹೋದ ಕೊಂಡೂ ಹೋದ' ಈ ಶೈಲಿಯ ಚಿತ್ರಗಳನ್ನು ನೋಡಿದ್ದೀರಲ್ಲಾ. ಹೆಚ್ಚೂ ಕಡಿಮೆ ಅದೇ ರೀತಿ ಈ ಕಥೆಯೂ ಇದೆ. 'ಡ್ರೋಣ್ ಪ್ರಥಮ್' ದೊಡ್ಡವರಿಗೆಲ್ಲಾ ಟೋಪಿ ಹಾಕಿದ್ದಾನೆ. ಯಾರಿಗೆಲ್ಲಾ ಅಂದರೆ ಹಿರಿಯ ಪೊಲೀಸ್ ಅಧಿಕಾರಿಗಳನ್ನೂ ಬಿಟ್ಟಿಲ್ಲ. ಇದಕ್ಕಿಂತ ಅದ್ಭುತ ಕಥೆ ಬೇಕಾ ಹೇಳಿ. ಒಬ್ಬ ವ್ಯಕ್ತಿ ತನ್ನ ಮಾತಿನಿಂದ ಇಡೀ ಪ್ರಪಂಚವನ್ನೇ ನಂಬಿಸಿಬಿಟ್ಟನಲ್ಲಾ ನೋಡಿ.

'ಕರ್ನಾಟಕದ ಅಳಿಯ' ಪುನೀತ್ ರಾಜ್‌ಕುಮಾರ್ ಅವರ ಹೆಸರು ಉಳಿಸುವ ಚಿತ್ರವಾಗಿ ಉಳಿಯಲಿದೆ. ಚಿತ್ರೀಕರಣದ ಪ್ರತಿ ಹಂತದಲ್ಲೂ ಪುನೀತ್ ಫೋನ್ ಮಾಡುತ್ತಿದ್ದರು. ರಾಘವೇಂದ್ರ ರಾಜ್‌ಕುಮಾರ್ ಅವರ ಬಗ್ಗೆ ತುಂಬಾ ಕಾಳಜಿ ವಹಿಸಿದ್ದರು. ಈ ಚಿತ್ರದಲ್ಲಿ ವಾಮಾಚಾರದ ಸುತ್ತ ಕತೆ ಸಾಗುತ್ತದೆ.

• ಮುಂದಿನ ಕನಸು?

ಏನು ಅಂದುಕೊಂಡಿದ್ದೇನೋ ಅದನ್ನು ಮುಗಿಸುತ್ತೇನೆ. ದೀರ್ಘ ಭವಿಷ್ಯದ ಕನಸು ಇಟ್ಟುಕೊಂಡಿಲ್ಲ. ಒಳ್ಳೆಯ ಸಿನಿಮಾಗಳನ್ನು ಕೊಡುತ್ತೇನೆ. ಮುಂದೆ ಊರಿಗೆ (ಕೊಳ್ಳೇಗಾಲದ ಸಮೀಪ ಹಲಗಾಪುರ) ವಾಪಸಾಗಿ ಅದೇ ಗ್ರಾಮದಲ್ಲಿ ಬದುಕು ಕಟ್ಟಿಕೊಳ್ಳುತ್ತೇನೆ. ❖

ಇಂದು ತೆರೆಗೆ



ಶ್ರೀಮುರಳಿ

800ಕ್ಕೂ ಅಧಿಕ ಸ್ಕ್ರೀನ್ಸ್‌ಗೆ ಮದಗಜ

ರೋರಿಂಗ್ ಸ್ಟಾರ್ ಶ್ರೀಮುರಳಿ ನಟನೆಯ, ಎಸ್.ಮಹೇಶ್ ಕುಮಾರ್ ನಿರ್ದೇಶನದ 'ಮದಗಜ' ಇಂದು ರಾಜ್ಯದ ಸುಮಾರು 600 ಚಿತ್ರಮಂದಿರಗಳಲ್ಲಿ 800ಕ್ಕೂ ಅಧಿಕ ಸ್ಕ್ರೀನ್‌ಗಳಿಗೆ ಲಗ್ಗೆ ಇಡುತ್ತಿದೆ.

ಎರಡನೇ ಅಲೆಯ ಲಾಕ್‌ಡೌನ್ ನಂತರ ಚಿತ್ರಮಂದಿರಗಳಲ್ಲಿ ಪೂರ್ಣ ಪ್ರಮಾಣದ ಪ್ರೇಕ್ಷಕರ ಪ್ರವೇಶಕ್ಕೆ ಅನುಮತಿ ನೀಡಿದ ಬಳಿಕ ಇಷ್ಟೊಂದು ಚಿತ್ರಮಂದಿರಗಳಲ್ಲಿ ಇದೇ ಮೊದಲ ಬಾರಿಗೆ ಬಿಗ್‌ಬಜೆಟ್ ಚಿತ್ರವೊಂದು ತೆರೆಕಾಣುತ್ತಿದೆ. 'ಇದು ಚಿತ್ರರಂಗಕ್ಕೆ ಸಕಾರಾತ್ಮಕ ಸುದ್ದಿ. ಚಿತ್ರಮಂದಿರಗಳ ಸಂಖ್ಯೆ ಶುಕ್ರವಾರಕ್ಕೆ ಮತ್ತಷ್ಟು ಹೆಚ್ಚಲಿದೆ' ಎನ್ನುತ್ತಾರೆ ನಿರ್ಮಾಪಕ ಉಮಾಪತಿ ಶ್ರೀನಿವಾಸಗೌಡ. ಶ್ರೀಮುರಳಿ ಅವರಿಗೆ ಜೋಡಿಯಾಗಿ ಆಶಿಕಾ ರಂಗನಾಥ್ ಈ ಚಿತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ತಮಿಳು ಹಾಗೂ ತೆಲುಗಿನಲ್ಲೂ ಈ ಚಿತ್ರ ಡಿ.10ಕ್ಕೆ ತೆರೆಕಾಣಲಿದೆ.

ತೆಲುಗಿನ ಖ್ಯಾತ ನಟ ಜಗಪತಿ ಬಾಬು, ಗರುಡಾ ರಾಮ್, ರಂಗಾಯಣ ರಘು, ಚಿಕ್ಕಣ್ಣ, ಶಿವರಾಜ್ ಕೆ.ಆರ್. ಪೇಟೆ ಈ ಚಿತ್ರದಲ್ಲಿ ಬಣ್ಣ ಹಚ್ಚಿದ್ದಾರೆ. ರವಿ ಬಸ್ರೂರು ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ. ❖

'ಪದವಿಪೂರ್ವ'ಕ್ಕೆ ದಿವ್ಯ ಉರುಡುಗ



ಬಿಗ್‌ಬಾಸ್ ಖ್ಯಾತಿಯ ದಿವ್ಯ ಉರುಡುಗ ಇದೀಗ 'ಪದವಿಪೂರ್ವ'ಕ್ಕೆ ಕಾಲಿಟ್ಟಿದ್ದಾರೆ. ಯೋಗರಾಜ್ ಭಟ್ ಅವರ ತಂಡ ಸೇರಿಸಿಕೊಂಡಿರುವ ದಿವ್ಯ, ಈ ಚಿತ್ರದಲ್ಲಿ ಅತಿಥಿ ಪಾತ್ರವೊಂದರಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಯೋಗರಾಜ್ ಸಿನಿಮಾಸ್ ಹಾಗೂ ರವಿ ಶಾಮನೂರ್ ಫಿಲಂಸ್‌ರವರ ಜಂಟಿ ನಿರ್ಮಾಣದಲ್ಲಿ ಹರಿಪ್ರಸಾದ್ ಜಯಣ್ಣ ನಿರ್ದೇಶಿಸುತ್ತಿರುವ ಈ ಚಿತ್ರದ ನಾಲ್ಕನೇ ಹಂತದ ಚಿತ್ರೀಕರಣವು ಕಳೆದ ತಿಂಗಳಷ್ಟೇ ಪೂರ್ಣಗೊಂಡಿದೆ. ದಿವ್ಯ ನಟಿಸಲಿರುವ ಭಾಗದ ಚಿತ್ರೀಕರಣವು ಬೆಂಗಳೂರು ಹಾಗೂ ಮಂಗಳೂರಿನ ಸುತ್ತಮುತ್ತ ಶೀಘ್ರದಲ್ಲೇ ಶುರು ಆಗಲಿದ್ದು, ಚಿತ್ರದ ಐದನೇ ಹಂತದ ಚಿತ್ರೀಕರಣಕ್ಕೆ ಚಿತ್ರತಂಡ ಸಕಲ ಸಿದ್ಧತೆ ಆರಂಭಿಸಿದೆ.

ಹೊಸಬರ ದಂಡೇ ಇರುವ ಈ ಚಿತ್ರಕ್ಕೆ ಪೃಥ್ವಿ ಶಾಮನೂರು ನಾಯಕನಾದರೆ, ಅಂಜಲಿ ಅನೀಶ್ ಮತ್ತು ಯಶ ಶಿವಕುಮಾರ್ ನಾಯಕಿಯರು. ಪದವಿಪೂರ್ವ ಚಿತ್ರಕ್ಕೆ ಅರ್ಜುನ್ ಜನ್ಯ ಸಂಗೀತ ನೀಡಿದ್ದು ಯೋಗರಾಜ್ ಭಟ್ ಸಾಹಿತ್ಯವಿದೆ. ಸಂತೋಷ್ ರೈ ಪಾತಾಜೆ ಛಾಯಾಗ್ರಾಹಣ ಹಾಗೂ ಮಧು ತುಂಬಕೆರೆಯ ಸಂಕಲನ ಈ ಚಿತ್ರಕ್ಕಿದೆ. ❖

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಕೆಲಸ ಮಾಡಲು ಸುಲಭದ ಮಾರ್ಗ ಅಥವಾ ತ್ವರಿತವಾಗಿ ಮಾಡಿ ಮುಗಿಸುವ ಮಾರ್ಗ ಯಾವುದು ಎಂಬುದಕ್ಕಿಂತ, ಅದನ್ನು ಮಾಡಲು ಅತ್ಯಂತ ಅದ್ಭುತವಾದ ಮಾರ್ಗ ಯಾವುದಿದೆ ಎಂದು ಯೋಚಿಸಿ.

–ರಿಚರ್ಡ್ ಬ್ರಾನ್ಸನ್

ರಸ್ತೆಗುಂಡಿಗಳಿಂದ ಆಗುತ್ತಿರುವ ಅಮೂಲ್ಯ ಜೀವಹಾನಿ ತಪ್ಪಿಸಿ

ದೇಶದ ಮಾಹಿತಿ ತಂತ್ರಜ್ಞಾನ ರಾಜಧಾನಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಬೆಂಗಳೂರಿಗೆ ರಸ್ತೆ ಗುಂಡಿಗಳಿಂದ ಮುಕ್ತಿ ಪಡೆಯಲು ಇನ್ನೂ ಸಾಧ್ಯವಾಗಿಲ್ಲ. ನಗರದ ರಸ್ತೆಗಳಲ್ಲಿನ ಗುಂಡಿಗಳು ಮೂರು ತಿಂಗಳಿನಲ್ಲಿ ಮೂರು ಜೀವಗಳನ್ನು ಬಲಿ ಪಡೆದಿರುವುದು ಅತ್ಯಂತ ನೋವಿನ ಸಂಗತಿ. ಮಂಗನಹಳ್ಳಿ ಮುಖ್ಯರಸ್ತೆಯಲ್ಲಿದ್ದ ಗುಂಡಿಯಿಂದಾಗಿ ದ್ವಿಚಕ್ರ ವಾಹನವೊಂದು ಆಯತಪ್ಪಿ ಉರುಳಿಬಿದ್ದು 65 ವರ್ಷ ವಯಸ್ಸಿನ ಅಂಗವಿಕಲರೊಬ್ಬರು ಸೆಪ್ಟೆಂಬರ್ 7ರಂದು ಮೃತಪಟ್ಟಿದ್ದರು. ಇದಾಗಿ 10 ದಿನಗಳಲ್ಲಿ ಹೆಸರಘಟ್ಟ ಮುಖ್ಯ ರಸ್ತೆಯಲ್ಲಿ ಕಾಮಗಾರಿ ಸಲುವಾಗಿ ರಸ್ತೆಯಲ್ಲಿ ಅಗೆದ ಗುಂಡಿಗೆ ಬಿದ್ದು ಮತ್ತೊಬ್ಬ ದ್ವಿಚಕ್ರ ವಾಹನ ಸವಾರ ಜೀವ ಕಳೆದುಕೊಂಡರು. ಎರಡು ಜೀವಗಳನ್ನು ಬಲಿ ಪಡೆದ ಬಳಿಕ ರಸ್ತೆ ಗುಂಡಿಗಳನ್ನು ಮುಚ್ಚುವಂತೆ ಗಡುವುಗಳ ಮೇಲೆ ಗಡುವುಗಳನ್ನು ನಿಗದಿಪಡಿಸಲಾಗಿದೆ. ಗಡುವುಗಳೆಲ್ಲ ಮುಗಿದ ಬಳಿಕವೂ ನಗರದ ಗುಂಡಿಮಯ ರಸ್ತೆಗಳ ಪರಿಸ್ಥಿತಿ ಬದಲಾಗಿಲ್ಲ. ಥಣಿಸಂದ್ರದಲ್ಲಿ ನವೆಂಬರ್ 27ರಂದು ರಸ್ತೆಗುಂಡಿಯಿಂದಾಗಿ ಮತ್ತೊಂದು ಅಪಘಾತ ಸಂಭವಿಸಿದೆ. ಇನ್ನೂ ಬಾಳಿ ಬದುಕಬೇಕಾದ 21 ವರ್ಷ ವಯಸ್ಸಿನ ಯುವಕನ ಅಮೂಲ್ಯ ಜೀವವನ್ನೇ ಇದು ಬಲಿ ಪಡೆದಿದೆ. 'ಈ ಬಾರಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದ್ದರಿಂದ ರಸ್ತೆ ಗುಂಡಿಗಳ ಸಮಸ್ಯೆ ಹೆಚ್ಚು ಕಾಣಿಸಿಕೊಂಡಿದೆ. ಮಳೆ ಬರುವಾಗ ಗುಂಡಿ ಮುಚ್ಚಿದರೂ ಕೆಲವೇ ದಿನಗಳಲ್ಲಿ ಡಾಂಬರು ಮತ್ತೆ ಕಿತ್ತು ಹೋಗುತ್ತದೆ' ಎಂಬುದು ಬಿಬಿಎಂಪಿ ಅಧಿಕಾರಿಗಳು ನೀಡುವ ಸಬೂಬು. ಬಿಬಿಎಂಪಿ ವ್ಯಾಪ್ತಿಯಲ್ಲಿ ಮಳೆ ಹಾನಿ ಪರಿಹಾರ ಕಾರ್ಯಕ್ಕೆ ಸರ್ಕಾರ ಹಣ ಬಿಡುಗಡೆ ಮಾಡಿದೆ. 'ರಸ್ತೆ ಗುಂಡಿ ಮುಚ್ಚಲು ತಕ್ಷಣ ಕ್ರಮ ಕೈಗೊಳ್ಳಬೇಕು. ಮಾರಣಾಂತಿಕ ರಸ್ತೆ ಗುಂಡಿಗಳ ಬಳಿ ಬ್ಯಾರಿಕೇಡ್ ಹಾಗೂ ಲೈಟಿಂಗ್ ವ್ಯವಸ್ಥೆ ಮಾಡಬೇಕು. ಗುಂಡಿಗಳ ದುರಸ್ತಿಗೆ ಕ್ರಮ ವಹಿಸಬೇಕು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು 10 ದಿನಗಳ ಹಿಂದೆ ನಡೆಸಿದ ಸಭೆಯಲ್ಲಿ ಸೂಚನೆ ನೀಡಿದ್ದರು. ಕನಿಷ್ಠಪಕ್ಷ ಈ ಕೆಲಸವನ್ನು ಮಾಡಿದ್ದರೂ ರಸ್ತೆ ಗುಂಡಿಗೆ ಜೀವ ಬಲಿಯಾಗುವುದು ತಪ್ಪುತ್ತಿತ್ತು. ಬೆಂಗಳೂರು ನಗರದ ಉಸ್ತುವಾರಿ ಹೊತ್ತಿರುವ ಮುಖ್ಯಮಂತ್ರಿಯವರೇ ಖುದ್ದು ಸೂಚನೆ ನೀಡಿದರೂ ಗುಂಡಿಗಳಿಂದ ಮುಕ್ತಿ ಪಡೆಯುವ ಭಾಗ್ಯ ನಗರದ ರಸ್ತೆಗಳಿಗೆ ಇನ್ನೂ ಸಿಕ್ಕಿಲ್ಲ. ಇದು ರಾಜ್ಯದ ಆಡಳಿತ ವ್ಯವಸ್ಥೆಗೆ ಹಿಡಿದ ಕೈಗನ್ನಡಿ. ರಸ್ತೆಗಳನ್ನು ದುರಸ್ತಿಪಡಿಸಿ ಸಾವು–ನೋವು ತಪ್ಪಿಸಲು ಕ್ರಮಗಳನ್ನು ಕೈಗೊಳ್ಳುವ ಬದಲು ಬಿಬಿಎಂಪಿ ಅಧಿಕಾರಿಗಳು, 'ಜೀವ ಬಲಿಯಾಗಿರುವುದು ರಸ್ತೆ ಗುಂಡಿಯಿಂದಲ್ಲ' ಎನ್ನುವ ಮೂಲಕ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಪ್ರಯತ್ನಿಸುತ್ತಿರುವುದು ಅಕ್ಷಮ್ಯ.



ರಸ್ತೆಗುಂಡಿ ಮುಚ್ಚಲು ಗಡುವು ಮೇಲೆ ಗಡುವು ನೀಡಿದರೂ ಪರಿಸ್ಥಿತಿಯಲ್ಲಿ ಕಿಂಚಿತ್ ಬದಲಾವಣೆಯೂ ಇಲ್ಲ

ರಸ್ತೆಗಳಲ್ಲಿ ಗುಂಡಿ ಬಿದ್ದ ತಕ್ಷಣವೇ ಅವುಗಳನ್ನು ಮುಚ್ಚಿದರೆ ಯಾವುದೇ ಸಮಸ್ಯೆ ಇರದು. ಈ ಉದ್ದೇಶಕ್ಕಾಗಿಯೇ ಬಿಬಿಎಂಪಿಯು ಬೆಂಗಳೂರಿನ ಹೊರವಲಯದ ಕಣ್ಣೂರಿನಲ್ಲಿ ಡಾಂಬರು– ಜಲ್ಲಿ ಮಿಶ್ರಣ ಘಟಕವನ್ನು ₹7.5 ಕೋಟಿ ವೆಚ್ಚದಲ್ಲಿ ಆರಂಭಿಸಿದೆ. ಎರಡು ವರ್ಷಗಳ ಹಿಂದೆಯೇ ಈ ಘಟಕ ಕಾರ್ಯಾರಂಭ ಮಾಡಿದ್ದರೂ ನಗರದ ರಸ್ತೆಗಳ ದುಃಸ್ಥಿತಿ ಮಾತ್ರ ಹಾಗೆಯೇ ಮುಂದುವರಿದಿದೆ. ಈ ಘಟಕವನ್ನು ಸಮರ್ಥವಾಗಿ ಬಳಸಿಕೊಂಡು, ಸಮರೋಪಾದಿಯಲ್ಲಿ ಗುಂಡಿ ಮುಚ್ಚುವ ಕೆಲಸ ಮಾಡಿದ್ದೇ ಆದರೆ, ಕೊನೇಪಕ್ಷ ನಗರದ ಮುಖ್ಯ ರಸ್ತೆಗಳಲ್ಲಿರುವ ಗುಂಡಿಗಳನ್ನಾದರೂ ಒಂದೆರಡು ವಾರಗಳಲ್ಲಿ ಮುಚ್ಚಬಹುದು. ಆದರೆ, ಇದನ್ನು ಈಡೇರಿಸುವ ಇಚ್ಛಾಶಕ್ತಿ ಅಧಿಕಾರಿಗಳಿಗೆ ಇದ್ದಂತಿಲ್ಲ. ಅಧಿಕಾರಿಗಳಿಂದ ಕೆಲಸ ಮಾಡಿಸುವ ಛಾತಿ ನಮ್ಮನ್ನಾಳುತ್ತಿರುವ ಜನಪ್ರತಿನಿಧಿಗಳಿಗೂ ಇಲ್ಲ. ಹಾಗಾಗಿ ಎಲ್ಲ ಸೌಕರ್ಯಗಳಿದ್ದರೂ ನಗರದ ರಸ್ತೆ ಗುಂಡಿಗಳ ಸಮಸ್ಯೆಗೆ ಪರಿಹಾರ ಪಡೆಯುವುದು ಕನ್ನಡಿಯೊಳಗಿನ ಗಂಟಾಗಿಯೇ ಉಳಿದಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರತೀ ಕಿಲೊಮೀಟರ್ ಉದ್ದದ ರಸ್ತೆ ನಿರ್ವಹಣೆಗೆ ಐದು ವರ್ಷಗಳಲ್ಲಿ ₹ 1.44 ಕೋಟಿ ವೆಚ್ಚ ಮಾಡಲಾಗಿದೆ. ಇಷ್ಟೊಂದು ವೆಚ್ಚ ಮಾಡಿದ ಬಳಿಕವೂ ಗುಂಡಿಗಳಿಲ್ಲದ, ಉಬ್ಬು ಮತ್ತು ತಗ್ಗುಗಳಿಲ್ಲದ ರಸ್ತೆಗಳಿಲ್ಲ. ದ್ವಿಚಕ್ರ ವಾಹನ ಸವಾರರಂತೂ ಇಂತಹ ರಸ್ತೆಗಳಲ್ಲಿ ಸಂಚರಿಸಿ ನಿತ್ಯವೂ ಬೆನ್ನುನೋವು ತರಿಸಿಕೊಳ್ಳುತ್ತಿದ್ದಾರೆ. ರಸ್ತೆಗಳು ಹಾಳಾದರೆ ಅವುಗಳನ್ನು ದುರಸ್ತಿಪಡಿಸಿ ಸುಸ್ಥಿತಿಯಲ್ಲಿಡುವ ಗುತ್ತಿಗೆದಾರರ ಹೊಣೆಗಾರಿಕೆಯ ಅವಧಿ ಪೂರ್ಣಗೊಳ್ಳುವ ಮೊದಲೇ ರಸ್ತೆಗಳು ಹದಗೆಡುತ್ತಿವೆ. ಕೊನೇಪಕ್ಷ ಗುತ್ತಿಗೆದಾರರಿಂದ ಈ ಕಾರ್ಯ ಮಾಡಿಸಿದ್ದರೂ ನಗರದ ರಸ್ತೆಗಳ ಪರಿಸ್ಥಿತಿ ಇಷ್ಟೊಂದು ಅಧ್ವಾನವಾಗುತ್ತಿರಲಿಲ್ಲ. ರಸ್ತೆಗಳನ್ನು ಸರಿಯಾಗಿ ನಿರ್ವಹಣೆ ಮಾಡುವ ಹೊಣೆಯನ್ನು ಆಯಾ ವಾರ್ಡ್‌ನ ಎಂಜಿನಿಯರ್‌ಗಳಿಗೆ ವಹಿಸಲಾಗಿದೆ. ಆದರೆ ಹೊಣೆ ಮರೆತವರ ಮೇಲೆ ಕ್ರಮ ಜರುಗಿಸಿದ ನಿದರ್ಶನಗಳು ವಿರಳ. ರಸ್ತೆ ಗುಂಡಿಗಳನ್ನು ಮುಚ್ಚುವುದಕ್ಕೂ ತಮಗೂ ಸಂಬಂಧ ಇಲ್ಲ ಎಂಬಂತೆ ವರ್ತಿಸುವ ಅಧಿಕಾರಿಗಳು ಹತ್ತಾರು ಕೋಟಿ ರೂಪಾಯಿ ವೆಚ್ಚದಲ್ಲಿ ಭಾರಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ವಿಚಾರದಲ್ಲಿ ಎಲ್ಲಿಲ್ಲದ ಮುತುವರ್ಜಿ ತೋರಿಸುತ್ತಾರೆ. ಸರ್ಕಾರಕ್ಕೆ, ನಗರವನ್ನು ಪ್ರತಿನಿಧಿಸುವ ಸಚಿವರಿಗೆ, ಶಾಸಕರಿಗೂ ಅಷ್ಟೇ; ಹೆಚ್ಚು ಅನುದಾನ ಬಯಸುವ ದೊಡ್ಡ ಯೋಜನೆಗಳೆಂದರೆ ಅಚ್ಚುಮೆಚ್ಚು! ಒಂದು ಕಿ.ಮೀ. ಉದ್ದದ ರಸ್ತೆಯ ವೈಟ್‌ಟಾಪಿಂಗ್‌ಗೆ ₹ 35 ಕೋಟಿ ವ್ಯಯಿಸುವುದಕ್ಕೂ ಬಿಬಿಎಂಪಿಯಾಗಲೀ ಸರ್ಕಾರವಾಗಲೀ ಹಿಂದೆ ಮುಂದೆ ನೋಡುವುದಿಲ್ಲ. ಇಂತಹದ್ದೇ ಕಾಳಜಿ ರಸ್ತೆ ಗುಂಡಿ ಮುಚ್ಚುವ ವಿಚಾರದಲ್ಲಿ ಏಕಿಲ್ಲ ಎಂಬುದು ಯಕ್ಷಪ್ರಶ್ನೆ!

ದಿನದ ಟ್ವೀಟ್


ಪ್ರಬುದ್ಧತೆಯ ಫಲ



ಮಲಯಾಳಂ ಚಲನಚಿತ್ರ ಅಭಿಮಾನಿಗಳು ಪ್ರಬುದ್ಧರು. ನಟ ಯಾರೇ ಆಗಿರಲಿ ಚಿತ್ರವು ಸೋತಿದೆಯೆಂದರೆ ಸೋತಿದೆಯೆಂದೇ ಅರ್ಥ. ಹೀಗಾಗಿಯೇ ಆ ಚಿತ್ರರಂಗವು ವೇಗವಾಗಿ ಬೆಳವಣಿಗೆ ಸಾಧಿಸುತ್ತಿದೆ ಮತ್ತು ಭಾರತದ ಗುಣಾತ್ಮಕ ಚಲನಚಿತ್ರ ತಯಾರಕರಲ್ಲಿ ಅವರೀಗ ಮುಂಚೂಣಿಯಲ್ಲಿದ್ದಾರೆ.

ಪ್ರಶಾಂತ್ ರಂಗಸ್ವಾಮಿ, ಉದ್ಯಮಿ

ಕಿಡಿನುಡಿ



ರಾಜ್ಯಸಭೆಯಿಂದ ಈಗ ಅಮಾನತುಗೊಂಡಿರುವ 12 ಸಂಸದರು ಮುಂಗಾರು ಅಧಿವೇಶನದಲ್ಲಿ ರಸ್ತೆಬದಿಯ ಪುಂಡರಂತೆ ವರ್ತಿಸಿದ್ದು ಕೆಟ್ಟ ಬೆಳವಣಿಗೆ. ಮಹಿಳಾ ಮಾರ್ಷಲ್ ಮೇಲೆ ಅವರು ಹಲ್ಲೆ ನಡೆಸಿದ್ದು ಅಪರಾಧ ಕೃತ್ಯ. ಇದೇನಾದರೂ ಸಂಸತ್ತಿನ ಹೊರಗೆ ನಡೆದಿದ್ದರೆ ಈ ಸಂಸದರು ಜೈಲಿನಲ್ಲಿ ಇರುತ್ತಿದ್ದರೇ ವಿನಾ ಧರಣಿಯಲ್ಲಿ ಅಲ್ಲ. ಇವರೆಲ್ಲ ಅಮಾನತಿಗೆ ಅರ್ಹರು.

ಮಿನ್ಹಾಜ್ ಮರ್ಚಂಟ್, ಪತ್ರಕರ್ತ, ಲೇಖಕ

25 ವರ್ಷಗಳ ಹಿಂದೆ

ಮಂಗಳವಾರ, 3-12-1996

• ತಾಂತ್ರಿಕ ಕಾರಣ: ಸಚಿವ ಶಾಣಪ್ಪ ರಾಜೀನಾಮೆ

ಬೆಂಗಳೂರು, ಡಿ. 2– ವಿಧಾನ ಪರಿಷತ್ತಿಗೆ ನಾಮಕರಣ ಹೊಂದುವಲ್ಲಿನ ವಿಳಂಬ ಹಾಗೂ ತಾಂತ್ರಿಕ ತೊಡಕುಗಳಿಂದಾಗಿ ಅಬಕಾರಿ ಸಚಿವ ಕೆ.ಬಿ. ಶಾಣಪ್ಪ ಅವರು ಸ್ವಯಂಪ್ರೇರಣೆಯಿಂದ ಇಂದು ಇಲ್ಲಿ ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರಾದರೂ ಅವರೂ ಸೇರಿದಂತೆ ಒಟ್ಟು ಮೂವರನ್ನು ಮೇಲ್ಮನೆಗೆ ನಾಮಕರಣ ಸದಸ್ಯರನ್ನಾಗಿ ನೇಮಿಸಲು ಸಚಿವ ಸಂಪುಟ ಇಂದು ಒಪ್ಪಿಗೆಯನ್ನು ನೀಡಿತು.

6 ತಿಂಗಳ ಅವಧಿ ಪೂರೈಸಲಿರುವ ಕೆ.ಬಿ. ಶಾಣಪ್ಪ ಅವರು ಅಧಿಕಾರದಲ್ಲಿ ಮುಂದುವರಿಯಲು ವಿಧಾನ ಪರಿಷತ್ತಿಗೆ ಆಯ್ಕೆ ಅನಿವಾರ್ಯ ಆಗಿದ್ದರ ಹಿನ್ನೆಲೆಯಲ್ಲಿ ಅವರ ಹೆಸರಿನೊಂದಿಗೆ ಮಂಡ್ಯ ಜಿಲ್ಲಾ ಜನತಾದಳದ ಅಧ್ಯಕ್ಷ ಸಿದ್ದರಾಜು ಹಾಗೂ ಕಲ್ಬುರ್ಗಿಯ ಡೇವಿಡ್ ಸಿಮೆಯೋನ್ ಅವರನ್ನು ನಾಮಕರಣ ಸದಸ್ಯರನ್ನಾಗಿ ನೇಮಿಸಲು ಸಂಪುಟದ ತೀರ್ಮಾನವನ್ನು ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರು ರಾಜ್ಯಪಾಲರಿಗೆ ಇಂದು ಕಳುಹಿಸಿದರು.

ಸಚಿವ ಶಾಣಪ್ಪ ಅವರ ಅನಿರೀಕ್ಷಿತ ರಾಜೀನಾಮೆ ಪಕ್ಷದಲ್ಲಿ ಸ್ವಲ್ಪ ಮಟ್ಟಿಗೆ ಗೊಂದಲ ಸೃಷ್ಟಿಸಿತಾದರೂ, ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರಿಗೆ ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲು ಮುಕ್ತ ಅವಕಾಶ ಮಾಡಿಕೊಟ್ಟಿತು. ಶಾಣಪ್ಪ ಅವರು ನಾಮಕರಣ ಸದಸ್ಯರಾಗಿ ಪುನಃ ಅಧಿಕಾರ ವಹಿಸಿಕೊಳ್ಳುವವರೆಗೆ ಮುಖ್ಯಮಂತ್ರಿ ತಾವೇ ಅಬಕಾರಿ ಖಾತೆಯನ್ನು ವಹಿಸಿಕೊಳ್ಳುವರು ಎಂದು ಹೇಳಲಾಗಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 3-12-1971

• ದೂರದಿಂದ ಬ್ರಿಟನ್ ಆಜ್ಞೆ ಮಾಡುವ ಕಾಲ ಮುಗಿದಿದೆ: ಇಂದಿರಾ ಬಿಚ್ಚುಮಾತು

ನವದೆಹಲಿ, ಡಿ. 2– ಯಾವುದೇ ರೀತಿಯ ಆಕ್ರಮಣವನ್ನೂ ನಡೆಸದಿರುವ ಭಾರತವನ್ನು ಆಕ್ರಮಣ ಎಸಗಿರುವ ರಾಷ್ಟ್ರವೆಂದು ಕರೆದರೆ ಅದಕ್ಕಾಗಿ ಭಾರತ ಚಿಂತಿಸದು ಎಂದು ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರು ಇಂದು ಇಲ್ಲಿ ಘೋಷಿಸಿದರು.

ಪ್ರಸ್ತುತ ಉಂಟಾಗಿರುವ ರಾಷ್ಟ್ರೀಯ ತುರ್ತು ಪರಿಸ್ಥಿತಿಯಲ್ಲಿ ಬೆಂಬಲ ವ್ಯಕ್ತಪಡಿಸಲು ತಮ್ಮ ನಿವಾಸದೆದುರು ಸಭೆ ಸೇರಿದ್ದ ಆಡಳಿತ ಕಾಂಗ್ರೆಸ್ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಇಂದಿರಾ ಅವರು ಲಂಡನ್ ಪತ್ರಿಕೆಗಳ ಇತ್ತೀಚಿನ ವರದಿಗೆ ಪ್ರತಿಕ್ರಿಯೆಯಾಗಿ ಈ ರೀತಿ ನುಡಿದರು.

'ಕಳೆದ ಐದು ವರ್ಷಗಳಲ್ಲಿ ಕಾಲ ಬದಲಾಗಿದೆ. ಆಕ್ರಮಣ ಎಸಗುವ ರಾಷ್ಟ್ರವೆಂದು ಕರೆಯುವ ಮೂಲಕ ರಾಷ್ಟ್ರೀಯ ಹಿತಾಸಕ್ತಿ ಮರೆಯುವಂತೆ ನಮ್ಮ ಮೇಲೆ ಒತ್ತಡ ಹೇರಬಹುದೆಂದು ಯಾವ ರಾಷ್ಟ್ರವಾದರೂ ಯೋಚಿಸಿದ್ದಲ್ಲಿ ಅಂಥ ರಾಷ್ಟ್ರ ತನ್ನದೇ ಆದ ಭ್ರಮೆಯ ಲೋಕದಲ್ಲಿ ವಿಹರಿಸುತ್ತಿದೆಯೆಂದಷ್ಟೇ ಹೇಳಬಹುದು' ಎಂದು ತಿಳಿಸಿದರು.

ಪ್ರಧಾನಿ ಮೋದಿ ಅವರು ರೈತರನ್ನು ಭೇಟಿಯಾಗಿ, ಅವರ ಆತಂಕಗಳಿಗೆ ಕಿವಿಗೊಡಬೇಕು

ಗಣರಾಜ್ಯದಲ್ಲಿನ ಅವಿವೇಕ ಮತ್ತು ಅದೃಷ್ಟ



ವಿಶ್ಲೇಷಣೆ

ಕ್ಯಾಪ್ಟನ್ ಜಿ.ಆರ್. ಗೋಪಿನಾಥ್

ಒಂದು ವರ್ಷದ ಹಿಂದೆ ಶುರುವಾದ ರೈತರ ಪ್ರತಿಭಟನೆಯು ವಿವಾದಿತ ಕೃಷಿ ಕಾಯ್ದೆಗಳನ್ನು ಹಿಂಪಡೆಯುವುದಾಗಿ ಪ್ರಧಾನಿ ಭರವಸೆ ನೀಡಿ (ಅವುಗಳನ್ನು ಹಿಂಪಡೆಯುವ ಮಸೂದೆಗೆ ಸಂಸತ್ತು ಅನುಮೋದನೆ ನೀಡಿದೆ), ಕ್ಷಮೆ ಯಾಚಿಸಿದ ನಂತರವೂ ಮುಂದುವರಿದಿದೆ. 2014ರಲ್ಲಿ ತಮ್ಮ ಪಕ್ಷಕ್ಕೆ ಜಯ ತಂದುಕೊಟ್ಟು, ಪ್ರಧಾನಿ ಗದ್ದುಗೆಗೆ ಏರಿದ ನಂತರ ನರೇಂದ್ರ ಮೋದಿ ಅವರು ಎದುರಿಸುತ್ತಿರುವ ಅತ್ಯಂತ ತೀವ್ರವಾದ ಸವಾಲಿನ ಸಂದರ್ಭ ಇದಾಗಿರಬೇಕು. ಕೃಷಿಗೆ ಸಂಬಂಧಿಸಿದ ಮೂರು ಕಾನೂನುಗಳನ್ನು ಸುಗ್ರೀವಾಜ್ಞೆಯ ಮೂಲಕ ಜಾರಿಗೆ ತಂದಿದ್ದು, ನಂತರ ಅವುಗಳಿಗೆ ಸಂಬಂಧಿಸಿದ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಿ ಅನುಮೋದನೆ ಪಡೆದುಕೊಂಡಿದ್ದು ಮೋದಿ ಅವರು ಮಾಡಿದ ಅತಿದೊಡ್ಡ ತಪ್ಪು ಎಂದು ಈಗ ಇಷ್ಟೆಲ್ಲ ವಿದ್ಯಮಾನಗಳು ನಡೆದ ನಂತರದಲ್ಲಿ ಹೇಳಬಹುದು. ಹೀಗಿದ್ದರೂ, ಈಗಿನ ಸಂದರ್ಭದಲ್ಲಿ ಮೂರು ಕಾಯ್ದೆಗಳನ್ನು ಹಿಂಪಡೆಯುವ ತೀರ್ಮಾನ ಹಾಗೂ ಕ್ಷಮೆ ಯಾಚನೆಯು (ಕಾಯ್ದೆಗಳ ಸದುದ್ದೇಶದ ಬಗ್ಗೆ ರೈತರಿಗೆ ಮನವರಿಕೆ ಮಾಡಿಕೊಡಲು ಸಾಧ್ಯವಾಗದ್ದಕ್ಕೆ) ಅವರು ಇರಿಸಬಹುದಾಗಿದ್ದ ಅತ್ಯಂತ ವಿವೇಕದ ನಡೆಗಳು. ಈ ಕ್ರಮವು ರೈತರ ಜೊತೆ ಚರ್ಚೆ, ಮಾತುಕತೆಗಳಿಗೆ ಬಾಗಿಲು ತೆರೆದಿರಿಸಿದೆ.

ಅಧಿಕಾರದ ಮಹಲಿನ ತುದಿಯಲ್ಲಿ ಕುಳಿತಿರುವ, ತಳಮಟ್ಟದ ವಾಸ್ತವಗಳಿಂದ ದೂರ ಸಾಗಿರುವ ರಾಜಕೀಯ ನಾಯಕರ ದೃಷ್ಟಿ ಮಂಜಾಗುತ್ತದೆ. ಅವರಿಗೆ ಅತ್ಯಂತ ಸ್ಪಷ್ಟವಾಗಿರುವ ಸಂದೇಶವನ್ನೂ ಓದಲು ಆಗುವುದಿಲ್ಲ. ರಾಜಕೀಯ ಲೆಕ್ಕಾಚಾರಗಳು ಇಲ್ಲದೆಯೇ ಅವರು ನಿರ್ಧಾರಗಳನ್ನು ಕೈಗೊಳ್ಳುವುದಿಲ್ಲ. ಅವರ ಒಂದು ಕಣ್ಣು ಸದಾ ಚುನಾವಣೆಗಳ ಮೇಲೆಯೇ ಇರುತ್ತದೆ. ಇದರ ಜೊತೆಗೆ, ಅಹಂಕಾರವು ಅವರು ಸತ್ಯಕ್ಕೆ ಎದುರಾಗದಂತೆ ಮಾಡುತ್ತದೆ. ಮೋದಿ ಅವರು ಕೂಡ ಈ ಪ್ರವೃತ್ತಿಗೆ ಹೊರತಾದ ವ್ಯಕ್ತಿಯಲ್ಲ. ಗಡಿಯಲ್ಲಿ ಚೀನಾ ಸೇನೆಯ ಜಮಾವಣೆ ಕುರಿತ ವರದಿಗಳ ಬಗ್ಗೆ ಜವಾಹರಲಾಲ್ ನೆಹರೂ ಅವರು ಕಿವುಡಾಗಿದ್ದರು. ನಂತರದಲ್ಲಿ, ದೇಶದ ಮೇಲೆ ಚೀನಾದವರು ವಿನಾಶಕಾರಿ ದಾಳಿ ನಡೆಸಿದರು. ಇಂದಿರಾ ಗಾಂಧಿ ಅವರು ಸಂಸ್ಥೆಗಳ ಸ್ವಾಯತ್ತೆಯನ್ನು ಹಾಳುಮಾಡಿಬಿಟ್ಟರು. ನರಸಿಂಹ ರಾವ್ ಅವರು ಧರ್ಮನಿರಪೇಕ್ಷ ನಿಲುವು ಹೊಂದಿದ್ದರಾದರೂ, ಹಿಂದೂಗಳ ಓಲೈಕೆಗಾಗಿ ಬಾಬರಿ ಮಸೀದಿ ಧ್ವಂಸಕ್ಕೆ ನೆರವಾದರು. ರಾಜೀವ್ ಗಾಂಧಿ ಅವರು ಶಾ ಬಾನೊ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನ ತೀರ್ಪನ್ನು ಪಾಲಿಸಲಿಲ್ಲ. ಮುಸ್ಲಿಂ ಮತಬ್ಯಾಂಕ್ ಮೇಲೆ ಅವರಿಗೆ ಒಂದು ಕಣ್ಣಿತ್ತು. ಇಂತಹ ಅಪರಾಧಗಳ ಪಟ್ಟಿ ದೊಡ್ಡದಾಗಿದೆ.

ಗಣರಾಜ್ಯ ದೇಶವೊಂದರ ಸರ್ಕಾರವನ್ನು ಮುನ್ನಡೆಸುವ, ರಾಜಕೀಯ ಪಕ್ಷವೊಂದರ ಬಲಿಷ್ಠ ನಾಯಕನ ಸುತ್ತ ಆಪ್ತರ ಸಣ್ಣ ಗುಂಪೊಂದು ಯಾವಾಗಲೂ ಇರುತ್ತದೆ. ಈ ಗುಂಪಿನಲ್ಲಿನ ಜನ ಭಟ್ಟಂಗಿಗಳಾಗಿ ಪರಿವರ್ತಿತರಾಗುತ್ತಾರೆ. ಅವರು ಹೊರಜಗತ್ತಿನ ಸಂಪರ್ಕಕ್ಕೆ ನಾಯಕ ಬಾರದಂತೆ ನೋಡಿಕೊಳ್ಳುತ್ತಾರೆ. ಮಹಾರಾಜನೊಬ್ಬ ಮೂರ್ಖತನಕ್ಕೆ ಯಾವ ರೀತಿಯಲ್ಲಿ ಬಲಿಯಾಗಬಲ್ಲನೋ ಅದೇ ರೀತಿಯಲ್ಲಿ ಈ ನಾಯಕನೂ ಬಲಿಯಾಗಬಲ್ಲ. ಈ ನಾಯಕ ಜನಸಾಮಾನ್ಯರ ಜೊತೆ ಬೆರೆಯಬಲ್ಲ ಸಾಮರ್ಥ್ಯ ಕಳೆದುಕೊಳ್ಳುತ್ತಾನೆ.

ಈಗ ನಡೆದಿರುವ ರೈತರ ಪ್ರತಿಭಟನೆಯಂತಹ ಜನಸಾಮಾನ್ಯರ ಪ್ರತಿಭಟನೆಯು ಮಾಮೂಲಿ ರಾಜಕೀಯ ಪ್ರತಿಭಟನೆಗಳಂತೆ ಅಲ್ಲ. ಇದು ರಾಜಕೀಯಕ್ಕೆ ಹೊರತಾದುದು. ಸಮಾನ ಹಿತಾಸಕ್ತಿಗಳ ಕಾರಣದಿಂದಾಗಿ ನಡೆಯುವ ಇಂತಹ ಪ್ರತಿಭಟನೆಗಳು ವಿಫಲವಾಗುವ ಸಾಧ್ಯತೆ ಇಲ್ಲ. ಮಳೆಗಾಲ, ಚಳಿಗಾಲ ಮತ್ತು ಬೇಸಿಗೆ ಕಾಲ ಒಂದಾದ ನಂತರ ಒಂದರಂತೆ ಬರುವುದು, ಬಿತ್ತನೆ ಮತ್ತು ಕೊಯ್ಲಿನಲ್ಲಿ ಇರುವ ಲಯ, ಕೃಷಿ ಚಟುವಟಿಕೆಗಳ ಜೊತೆ ನಂಟು ಹೊಂದಿರುವ ಸಾಕುಪ್ರಾಣಿಗಳೊಂದಿಗಿನ ಒಡನಾಟ, ತಾವು ನಿಭಾಯಿಸಬೇಕಿರುವ ಕರ್ತವ್ಯ ಹಾಗೂ ತಮ್ಮ ಮೇಲಿರುವ ಸಾಲದ ಹೊರೆ... ಇವುಗಳ ಕಾರಣದಿಂದಾಗಿ ರೈತರು ನೆಲದ ಜೊತೆ ಸದಾ ನಂಟು ಹೊಂದಿರುತ್ತಾರೆ. ರೈತರು ನಡೆಸಿದ ಇಂತಹ ಚಳವಳಿ ಗಣರಾಜ್ಯವೊಂದರ ಪಾಲಿನ ಅದೃಷ್ಟವೆಂದು ನೋಡಬೇಕು. ರೂಪಿಸಿದ ಕಾನೂನುಗಳ ಹಿಂದೆ ಒಳ್ಳೆಯ ಆಶಯ ಇದ್ದರೂ, ಪ್ರಗತಿಪರವಾದ ಸುಧಾರಣೆಗಳು ಜಾರಿಗೆ ಬಂದಿದ್ದರೂ, ಪ್ರಜಾತಾಂತ್ರಿಕ ಪ್ರಕ್ರಿಯೆಯ ಪಾಲನೆ ಆಗಿಲ್ಲವೆಂದಾದರೆ ಹಾಗೂ ಸಂಬಂಧಪಟ್ಟ ಸಮುದಾಯಗಳ ಜೊತೆ ಸಮಾಲೋಚನೆ ನಡೆಸಲಿಲ್ಲವೆಂದಾದರೆ ಪ್ರತಿರೋಧ ಎದುರಾಗುತ್ತದೆ ಎಂಬ ಸಂದೇಶವನ್ನು ಈ ಚಳವಳಿಯು ಆಳುವವರಿಗೆ ಸ್ಪಷ್ಟವಾಗಿ ರವಾನಿಸುತ್ತದೆ. ಗುರಿ ಎಷ್ಟು ಪವಿತ್ರವೋ ಮಾರ್ಗವೂ ಅಷ್ಟೇ ಪವಿತ್ರ. ಈಗಿನ ಸಂದರ್ಭದಲ್ಲಿ ರೈತರು ನಡೆಸಿರುವ ಚಳವಳಿಯು ನಮ್ಮ ಪ್ರಜಾತಂತ್ರಕ್ಕೆ ಸಿಕ್ಕಿರುವ ದೃಢೀಕರಣ ಪತ್ರ ಇದ್ದಂತೆ. ಇದು ಸಂಭ್ರಮಿಸಬೇಕಾದುದು.

ಗೆದ್ದುಕೊಳ್ಳುವುದು ಆಡಳಿತ ನಡೆಸುವುದಕ್ಕಿಂತಲೂ ಸುಲಭದ್ದು. ಸಾಮ್ರಾಜ್ಯಗಳನ್ನು ಆಳಿದವರಿಗೆ ಈ ಸಂಗತಿಯು ತಾವು ಯುದ್ಧ ಗೆದ್ದುಕೊಂಡ ನಂತರದಲ್ಲಿ ಗೊತ್ತಾಗಿದ್ದಿದೆ. ಇದು ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರಿಗೆ ಗೊತ್ತಾಗಿರಬಹುದು. ಚುನಾವಣೆಗಳನ್ನು ಗೆಲ್ಲುವ ಕಲೆಯನ್ನು, ಬೇರೆ ಪಕ್ಷಗಳ ಆಡಳಿತ ಇರುವ ರಾಜ್ಯಗಳಲ್ಲಿ ಆಡಳಿತಾರೂಢ ಪಕ್ಷಗಳಲ್ಲಿನ ಆಂತರಿಕ ಭಿನ್ನಮತದಿಂದಾಗಿ ಅಸ್ಥಿರತೆ ಮೂಡಿದಾಗ ಅಲ್ಲಿ ಅಧಿಕಾರ ಕಸಿದುಕೊಳ್ಳುವ ಕಲೆಯನ್ನು ಇವರಿಬ್ಬರೂ ಕರಗತ ಮಾಡಿಕೊಂಡಿದ್ದಾರೆ. ಆದರೆ, ಇದನ್ನು ಮಾಡುವುದೇ ಬೇರೆ; ಸಮಾನ ಅಭಿವೃದ್ಧಿಯನ್ನು ಸಾಧಿಸುವ, ಸ್ಥಿರತೆ ಮತ್ತು ಕೋಮು ಸೌಹಾರ್ದವನ್ನು ತರುವ ಆಡಳಿತವನ್ನು ನೀಡುವುದೇ ಬೇರೆ.



ಅಂತರರಾಷ್ಟ್ರೀಯ ಸಂಬಂಧದ ಜೊತೆ ಬೆಸೆದುಕೊಂಡಿರುವ ರಾಜಕಾರಣ ಮತ್ತು ಜಾಗತೀಕರಣದ ನಡುವಿನ ಸಂಬಂಧ ಹೆಚ್ಚುತ್ತಿರುವಂತೆಯೇ ಆರ್ಥಿಕತೆಗೆ ಸಂಬಂಧಿಸಿದ ಸಂಗತಿಗಳು ಹೆಚ್ಚು ಸಂಕೀರ್ಣವಾಗುತ್ತಿವೆ. ಈ ವಿಚಾರದಲ್ಲಿ ಪಂಡಿತರ ಮಾತುಗಳನ್ನು ಆಲಿಸುವುದು ಒಳ್ಳೆಯದೇ. ಆದರೆ, ಅವರ ಅಭಿಪ್ರಾಯಗಳು ಹಲವು ಬಾರಿ ಭಿನ್ನವಾಗಿರುತ್ತವೆ. ಎಲ್ಲ ಅರ್ಥಶಾಸ್ತ್ರಜ್ಞರನ್ನು ಒಂದೆಡೆ ಸೇರಿಸಿದರೆ ಎಲ್ಲರೂ ಒಂದೊಂದು ದಿಕ್ಕಿನತ್ತ ಬೆರಳು ತೋರಿಸುತ್ತಿರುತ್ತಾರೆ ಎಂದು ಜಾರ್ಜ್ ಬರ್ನಾರ್ಡ್ ಶಾ ಒಮ್ಮೆ ಹೇಳಿದ್ದರು. ಸಂಕೀರ್ಣ ಸಮಸ್ಯೆಗಳಿಗೆ ಸುಲಭದ ಪರಿಹಾರ ಇರುವುದಿಲ್ಲ. ಅಂತಿಮವಾಗಿ ಬೇಕಿರುವುದು, ರಾಜಕೀಯ ಇಚ್ಛಾಶಕ್ತಿ ಮತ್ತು ಸಂಬಂಧಪಟ್ಟವರ ಜೊತೆ ವ್ಯಾಪಕ ಚರ್ಚೆ. ಇವೆರಡು ಇದ್ದರೆ ಸಮ್ಮತಿ ಮೂಡಬಹುದು.

ಈಗ ಹಿಂದಕ್ಕೆ ಪಡೆದಿರುವ ಮೂರು ಕಾಯ್ದೆಗಳು ಲಕ್ಷಾಂತರ ಜನ ರೈತರಿಗೆ ಒಳಿತು ಮಾಡಬಲ್ಲವಾಗಿದ್ದವು. ಆದರೆ, ಈ ಕಾಯ್ದೆಗಳಿಂದಾಗಿ ಎಪಿಎಂಸಿ ವ್ಯವಸ್ಥೆ ಕುಸಿದು ಬೀಳಬಹುದು ಎಂಬ ಆತಂಕ ಮೂಡಿದ್ದರಲ್ಲಿ ಹುರುಳಿಲ್ಲದಿಲ್ಲ. ಆ ರೀತಿ ಆಗಿದ್ದರೆ ರೈತರು ಎಂಎನ್‌ಸಿಗಳ, ಭಾರತದ ಕಾರ್ಪೊರೇಟ್ ಕಂಪನಿಗಳ ಮರ್ಜಿಗೆ ಸಿಲುಕಬೇಕಾಗುತ್ತದೆ ಎಂಬ ಆತಂಕವೂ ಇತ್ತು. ಕೃಷಿ ಕಾಯ್ದೆಗಳನ್ನು ಹಿಂಪಡೆಯುವ ಮಸೂದೆಯನ್ನು ಚರ್ಚೆಯೇ ಇಲ್ಲದೆ ಅಂಗೀಕರಿಸಿದ ಬಗೆಯು ಪ್ರಧಾನಿಯವರು ತಾವು ಸಂಪಾದಿಸಿದ್ದ ಒಂದಿಷ್ಟು ವಿಶ್ವಾಸವನ್ನು ಹಾಳುಮಾಡಿತು. ವಿಸ್ತೃತ ಚರ್ಚೆ ಸಾಧ್ಯವಾಗಿದ್ದಿದ್ದರೆ, ಕೃಷಿ ಕಾಯ್ದೆಗಳಿಗೆ ಸಂಬಂಧಿಸಿದ ಅನುಮಾನಗಳಿಗೆ ಸ್ಪಷ್ಟನೆ ಸಿಗುತ್ತಿತ್ತು. ಎಲ್ಲರ ಅಭಿಪ್ರಾಯವನ್ನೂ ಆಲಿಸಿ, ಹೊಸ ಕಾಯ್ದೆ ರೂಪಿಸಲು ಹಾದಿ ಸುಗಮವಾಗುತ್ತಿತ್ತು.

ಕೃಷಿ ಕಾಯ್ದೆಗಳನ್ನು ಹಿಂದಕ್ಕೆ ಪಡೆಯಲಾಗುವುದು ಎಂದು ಮೋದಿ ಅವರು ಮಾಡಿದ ಘೋಷಣೆಯು ಸಮಷ್ಟಿಯಲ್ಲಿ ಸಮಾಧಾನದ ನಿಟ್ಟುಸಿರೊಂದು ಹೊರಡುವಂತೆ ಮಾಡಿತು. ಮೋದಿ ಅವರು ಪೂರ್ಣ ಪ್ರಮಾಣದಲ್ಲಿ ಕ್ಷಮೆ ಯಾಚಿಸಲಿಲ್ಲವಾದರೂ, ಇಟ್ಟ ಹೆಜ್ಜೆಯನ್ನು ಹಿಂದಕ್ಕೆ ಇರಿಸುವವರೇ ಅಲ್ಲ ಎಂಬ ಹೆಗ್ಗಳಿಕೆ ಹೊತ್ತಿರುವ ಅವರು ತುಸು ಔದಾರ್ಯ ತೋರಿಸಿದರು. ರೈತರ ಜೊತೆ ಚರ್ಚೆ ಹಾಗೂ ಮಾತುಕತೆಗೆ ಬಾಗಿಲು ತೆರೆದರು. ರೈತರು ತಮ್ಮ ಹೊಲಗಳಿಗೆ ಮರಳುತ್ತಾರೆ ಎಂದು ಎಲ್ಲರೂ ನಿರೀಕ್ಷಿಸಿದ್ದರು. ಆದರೆ, ಈಗ ರೈತರು ಇನ್ನೊಂದಿಷ್ಟು ಹೊಸ ಬೇಡಿಕೆಗಳನ್ನು ಇರಿಸಿದ್ದಾರೆ. ಬೇಡಿಕೆಗಳು ಈಡೇರುವವರೆಗೂ ವಾಪಸ್ ಹೋಗುವುದಿಲ್ಲ ಎಂದಿದ್ದಾರೆ.

ಇದನ್ನು ಮೋದಿ ಅವರು ತಮ್ಮ ಅಧಿಕಾರಕ್ಕೆ ಸವಾಲು ಎಂದು ಭಾವಿಸಬಾರದು. ಮೋದಿ ಅವರು ಹೊಂದಾಣಿಕೆಯ ಹೆಜ್ಜೆ ಇರಿಸಬೇಕು. ಅವರು ರೈತರನ್ನು ಭೇಟಿಯಾಗಿ, ಅವರ ಆತಂಕಗಳಿಗೆ ಕಿವಿಗೊಡಬೇಕು. 'ಭಯದಿಂದ ನಾವು ಹೊಂದಾಣಿಕೆ ಮಾಡಿಕೊಳ್ಳಬೇಕಾಗಿಲ್ಲ. ಆದರೆ, ಹೊಂದಾಣಿಕೆಗೆ ಭಯಪಡಬೇಕಾದ ಅಗತ್ಯವೂ ಇಲ್ಲ' ಎಂದು ಜಾನ್ ಎಫ್. ಕೆನಡಿ ಹೇಳಿದ್ದ ಮಾತನ್ನು ಮೋದಿ ಅವರು ನೆನಪಿನಲ್ಲಿ ಇರಿಸಿಕೊಂಡರೆ ಚೆನ್ನ.

ಚುರುಮುರಿ



ಗೋಡಂಬಿ ಗಿಮಿಕ್ಕು!

• ಬಿ.ಎನ್.ಮಲ್ಲೇಶ್

'ರೀ... ಪೇಪರ್ ನೋಡಿದ್ರಾ? ಗೋಡಂಬಿ 30 ರೂಪಾಯಿಗೆ ಕೆ.ಜಿ, ಗಸಗಸೆ 20 ರೂಪಾಯಿಗೆ ಕೆ.ಜಿ.ಯಂತೆ. ಯಾರಿಗಾದ್ರು ಹೇಳಿ ನಮಗೂ ಎರಡೆರಡು ಕೆ.ಜಿ. ತರಿಸಿರೀ...' ಮಡದಿ ನ್ಯೂಸ್ ಪೇಪರ್ ತಂದು ತೋರಿಸಿದಾಗ ನನಗೆ ನಗು ಬಂತು. 'ಆತು, ಆದ್ರೆ ಅವರು ತೊಗರಿಬೇಳೆ, ಕೊತ್ತಮರಿ ಸೊಪ್ಪು ತಗಂಡ್ರೆ ಮಾತ್ರ ಗೋಡಂಬಿ, ಗಸಗಸೆ ಕೊಡ್ತಾರಂತೆ' ಎಂದೆ.

'ಹೌದಾ? ಅವನ್ನೂ ತಗಂಡ್ರಾತು, ಏನೀಗ?'

'ಏನಿಲ್ಲ, ತೊಗರಿಬೇಳೆ ಕೆ.ಜಿ.ಗೆ 500 ರೂಪಾಯಿ, ಕೊತ್ತಮರಿ ಸೊಪ್ಪು ಕಟ್ಟಿಗೆ 200 ರೂಪಾಯಿಯಂತೆ...'

'ಹೇ ಹೋಗ್ರಿ, ಹತ್ತು ರೂಪಾಯಿ ಕೊತ್ತಮರಿಗೆ ಯಾರಾದ್ರು 200 ರೂಪಾಯಿ ಕೊಡ್ತಾರಾ?'

'ಅದೇ ಮತ್ತೆ... ಕೆ.ಜಿ.ಗೆ ಎರಡು ಸಾವಿರ ರೂಪಾಯಿ ಇರೋ ಗಸಗಸೆನ ಯಾರಾದ್ರು 20 ರೂಪಾಯಿಗೆ ಕೊಡ್ತಾರಾ?'

'ಮತ್ತೆ ಪೇಪರ್‌ನಲ್ಲಿ ಬಂದಿರೋದು ಸುಳ್ಳಾ?'

ಸುಳ್ಳಲ್ಲ, ನಿಜನೇ... ಅದು ಹಾಸ್ಟೆಲ್ ಟೆಂಡರ್‌ನೋರ ಗಿಮಿಕ್ಕು. ಗಸಗಸೆ, ಗೋಡಂಬಿ ತೋರಿಸಿ ಕೋಟಿಗಟ್ಲೆ ಟೆಂಡರ್ ಹೊಡ್ಕಂತಾರೆ. ಆಮೇಲೆ ಗೋಡಂಬಿನೂ ಇಲ್ಲ, ಗಸಗಸೆನೂ ಇಲ್ಲ. ಎಲ್ಲ ಅಡ್ಜಸ್ಟ್‌ಮೆಂಟು...'

'ಹೌದಾ? ಇದೆಲ್ಲ ನಿಮಗೆ ಹೆಂಗೊತ್ತು?'

'ನೋಡೇ, ಯಾವುದನ್ನೇ ಆಗಲಿ ಕಡಿಮೆ ರೇಟಿಗೆ ಕೊಡೋರು, ಜಾಸ್ತಿ ಪ್ರಚಾರ ಮಾಡೋರು, ಒಂದಕ್ಕೊಂದು ಫ್ರೀ ಕೊಡೋರು ಎಲ್ಲ ಮೋಸನೇ...'

'ಹೌದಾ ಅದೆಂಗೇಳ್ತೀರಾ?'

'ಇಲ್ಲಿ ಮೋಸ ಹೋಗಿರೋನು ನಾನೇ ಇಲ್ವ? ನಿಮ್ಮಪ್ಪ ಭಾರೀ ಶ್ರೀಮಂತ ಅದೂ ಇದೂ ಅಂತ ಬಿಲ್ಡಪ್ ನೋಡಿ ನಿನ್ನ ಮದುವೆಯಾದೆ. ಆಮೇಲೆ ಸಿಕ್ಕಿದ್ದೆಲ್ಲ ಒಣ ಗಣೇಶ...'

'ಏನು? ಒಣ ಗಣೇಶನಾ? ನಿಮ್ಮ ಮುಖಕ್ಕೆ...'

ಮಡದಿ ಕೋಪ ತಾರಕಕ್ಕೇರುವ ಮೊದಲೇ ಅಲ್ಲಿಂದ ಜಾಗ ಖಾಲಿ ಮಾಡಿದೆ.

ಸಂಗತ

ಸಾವನ್ನು ಬೆನ್ನಟ್ಟುವ ಸಾವು

ಚಿತ್ರನಟರ ಅಭಿಮಾನಿಗಳ ಅತಿರೇಕಕ್ಕೆ ಸ್ವಯಂ ಮಿತಿ ಅಗತ್ಯ

• ಶಿವಲಿಂಗಸ್ವಾಮಿ ಎಚ್.ಕೆ.

ವರ್ಚಸ್ವಿ ನಟರ ಚಲನಚಿತ್ರವೊಂದು ಬಿಡುಗಡೆಯಾಗುತ್ತಿದೆ ಎಂದರೆ ಅಭಿಮಾನಿಗಳ ಕುತೂಹಲ ಮತ್ತು ಉದ್ವೇಗಗಳಿಗೆ ಮಿತಿಯೇ ಇರುವುದಿಲ್ಲ. ತಮ್ಮ ನೆಚ್ಚಿನ ನಾಯಕನಟನ ಬೃಹದಾಕಾರದ ಭಿತ್ತಿಚಿತ್ರಗಳ ಮೇಲೆ ಹಾಲಿನ ಅಭಿಷೇಕ ಮಾಡುವುದು, ಹೇರಳವಾಗಿ ತೆಂಗಿನಕಾಯಿ ಒಡೆಯುವಂತಹ ಕಾರ್ಯಗಳು ನಡೆಯುತ್ತವೆ. ಕೆಲವೊಮ್ಮೆ ಅತಿರೇಕಗಳೂ ಸಂಭವಿಸುತ್ತವೆ.

ವಿಷ್ಣುವರ್ಧನ್ ಅಭಿನಯದ 'ನಾಗರಹಾವು' ಚಿತ್ರವು 2018ರಲ್ಲಿ ಮರು ಬಿಡುಗಡೆಯಾದಾಗ ಅಭಿಮಾನಿಯೊಬ್ಬ ತನ್ನ ನೆಚ್ಚಿನ ನಟನ ಕಟ್‌ಔಟ್ ಮೇಲೆ ರಕ್ತದ ಅಭಿಷೇಕ ಮಾಡಿದ್ದು ಸಹ ದಾಖಲಾಗಿದೆ. ಇದು ಸಾಲದೆಂಬಂತೆ ತಮ್ಮ ಪ್ರಿಯ ನಟರ ಆದರ್ಶಗಳನ್ನಲ್ಲದೆ, ಅವರ ಕೇಶಶೈಲಿ, ಮಾತಿನಶೈಲಿ, ಹಾವಭಾವಗಳನ್ನು ಅನುಸರಿಸುವುದಂತೂ ಸರ್ವೇಸಾಮಾನ್ಯ. ಅಭಿಮಾನಿಗಳ ಅತಿರೇಕದ ವರ್ತನೆಗಳಲ್ಲಿ ತೀವ್ರ ನೋವಿನ ಸಂಗತಿಯೆಂದರೆ, ತಮ್ಮ ನೆಚ್ಚಿನ ನಟನ ಸಾವು ಸಂಭವಿಸಿದರೆ ಆ ನೋವು ಭರಿಸಲಾರದೆ ಆತ್ಮಹತ್ಯೆ ಮಾಡಿಕೊಳ್ಳುವುದು. ಪುನೀತ್ ರಾಜ್‌ಕುಮಾರ್ ಅಗಲಿಕೆ ಭರಿಸಲಾಗದೆ ಒಂದಿಬ್ಬರು ಆತ್ಮಹತ್ಯೆ ಮಾಡಿಕೊಂಡ ನಿದರ್ಶನ ಇತ್ತೀಚಿನದು.

ಅಭಿಮಾನಿಗಳ ಇಂತಹ ವರ್ತನೆಯನ್ನು ಮನಃಶಾಸ್ತ್ರೀಯವಾಗಿ ಹೀಗೆ ವ್ಯಾಖ್ಯಾನಿಸಬಹುದಾಗಿದೆ: ಕನ್ನಡದ ಪದ 'ಅಭಿಮಾನಿ' ಎಂಬುದು ಇಂಗ್ಲಿಷಿನ ಪದವಾದ 'fan'ನಿಂದ (ಫ್ಯಾನ್) ಬಂದಿದೆ. ಫ್ಯಾನ್ ಪದದ ಹಿನ್ನೆಲೆಯನ್ನು ಗಮನಿಸಿದರೆ, ಅದರ ಅರ್ಥ fanatic (ಅಂಧಾಭಿಮಾನಿ) ಎಂದಿದೆ. ಒಟ್ಟಿನಲ್ಲಿ, ಫ್ಯಾನ್ ಎಂದರೆ ಕೇವಲ ಅಭಿಮಾನಿ ಎಂದಿರುವುದಿಲ್ಲ, ಅಂಧಾಭಿಮಾನಿ ಎಂದು ಸಹ ಆಗಿರುತ್ತದೆ. ರಾಷ್ಟ್ರ, ಧರ್ಮ, ಭಾಷೆ ಮುಂತಾದವುಗಳಿಗಾಗಿ ಖಾಸಗಿ ಬದುಕನ್ನು ಸಹ ತ್ಯಾಗ ಮಾಡಲು ಸಿದ್ಧರಿರುವವರನ್ನು ಆ್ಯಕ್ಟಿವಿಸ್ಟ್ ಎಂದು ಕರೆಯಬಹುದು. ಆದರೆ ನಟರಿಗಾಗಿ ತಮ್ಮ ಜೀವವನ್ನೇ ಕಳೆದುಕೊಳ್ಳುವುದು ಅಂಧಾಭಿಮಾನದಿಂದ.

ತಮ್ಮ ಅತಿರೇಕದ ಅಭಿಮಾನದಲ್ಲಿ ಅಂಧತ್ವ ಇದೆ ಎಂಬುದು ಫ್ಯಾನ್‌ಗಳಿಗೆ ತಿಳಿದಿರುವುದಿಲ್ಲ. ಈ ಪರಿಕಲ್ಪನೆಯನ್ನು 'ದೈವೀಕರಿಸುವುದು' ಅಥವಾ 'ಹೀರೊ ವರ್ಷಿಪ್' ಎನ್ನುತ್ತಾರೆ. ಈ ನಟರು ಎಂದಿಗೂ ಸಾಧಾರಣ ಜೀವಿಗಳಾಗಿರದೆ ದೈವೀಕರಣಗೊಂಡ ಮೃತ್ಯುಂಜಯರಂತೆ ಕಾಣತೊಡಗುತ್ತಾರೆ. ತಮ್ಮ ಚಿತ್ರಗಳಲ್ಲಿ ಅಜೇಯರಾಗಿ ಉಳಿಯುವ ನಟರು ಖಾಸಗಿ ಜೀವನದಲ್ಲಿ ತಮ್ಮಂತೆಯೇ ಸಾಧಾರಣ ನಶ್ವರ ಜೀವಿಗಳು ಎಂಬ ಕಲ್ಪನೆ ಅಭಿಮಾನದ ಅತಿರೇಕದಲ್ಲಿ ಅಭಿಮಾನಿಗಳಿಗೆ ಬರುವುದಿಲ್ಲ.

ಹುಟ್ಟಿದವರು ಸಾಯಲೇಬೇಕು, ನಿಜಾಂಶವನ್ನು ಒಪ್ಪಿಕೊಂಡು ನಾವು ಬದುಕು ಸವೆಸಬೇಕು ಎಂಬ ಮಾತುಗಳಿಗೆ ಅಭಿಮಾನಿಗಳ ಕಿವಿ ಸಂಪೂರ್ಣ ಕಿವುಡಾಗಿರುತ್ತದೆ. ಬೆಳ್ಳಿತೆರೆಯ ಮೇಲೆ ಅಭಿಮಾನಿಗಳ ಭಾವನಾತ್ಮಕ, ಬೌದ್ಧಿಕ ಅವಶ್ಯಕತೆಗಳನ್ನು ತಮ್ಮ ನಟನೆ, ಹಾವಭಾವದಂಥ ಕೌಶಲಗಳಿಂದ ಪೂರೈಸುವ ನಟರು, ಅಭಿಮಾನಿಗಳಿಗೆ ತಮ್ಮ ಜೀವನದ ಬಗ್ಗೆ ಮಾನಸಿಕ ತೃಪ್ತಿ ತಂದುಕೊಟ್ಟಿರುತ್ತಾರೆ. ಈ ಕಾರಣದಿಂದ ಅಂತಹ ನಟರ ಸಾವಿನಿಂದ ಅಭಿಮಾನಿಗಳು ಅನುಭವಿಸುವ ದುಃಖಕ್ಕೆ ಸಾಂತ್ವನ ಹೇಳಲು ಮಾನವನಿರ್ಮಿತ ಭಾಷೆಗಳು ವಿಫಲವಾಗುತ್ತವೆ.

ನಿಜಜೀವನದ ಬವಣೆಯಲ್ಲಿ ಬೇಸತ್ತ ಮನಸ್ಸುಗಳಿಗೆ ಬೆಳ್ಳಿತೆರೆಯ ಮೇಲೆ ಕಾಣುವ ನಟರು ಎಲ್ಲ ಸಮಸ್ಯೆಗಳಿಗೆ ಪರಿಹಾರದ ಮೂಲವಾಗಿ ಕಾಣುತ್ತಿರುತ್ತಾರೆ. ಇದರ ಕಾರಣವು ಕತೆಗಳನ್ನು ಹುಟ್ಟುಹಾಕುವ ನಮ್ಮ ಸಂಪ್ರದಾಯದಲ್ಲಿಯೇ ಇದೆ. ಜೀವನದ ವಿವಿಧ ಮುಖಗಳನ್ನು ಅರ್ಥೈಸಲು ಬಹಳ ಹಿಂದಿನಿಂದಲೇ ಕತೆ ಹೇಳುವ ಅಭ್ಯಾಸ ಎಲ್ಲ ಸಂಸ್ಕೃತಿಗಳಲ್ಲಿ ಇದೆ. ಈ ಕತೆಗಳಲ್ಲಿ ಜೀವನದ ಸಮಸ್ಯೆ ಕುರಿತು ಚರ್ಚೆಯಾದರೆ ಅದಕ್ಕೆ ಪರಿಹಾರವಾಗಿ ಕಥಾನಾಯಕನ ಆದರ್ಶಪ್ರಾಯ ಬದುಕು ಕಂಡುಬರಬಹುದು. ಕೆಲವೊಮ್ಮೆ ಜೀವನದಲ್ಲಿ ಎಲ್ಲರಿಗೂ ಎದುರಾಗಬಹುದಾದ ಖಳನಾಯಕರನ್ನು ನಾಯಕನು ತನ್ನ ಸಾಮರ್ಥ್ಯದಿಂದ ಸದೆಬಡಿದು ಪರಿಹಾರ ನೀಡಬಹುದು.



ಇಂತಹ ಕಥಾನಾಯಕರು ಸಾಹಿತ್ಯದಲ್ಲಾಗಲೀ ಬೆಳ್ಳಿತೆರೆಯಲ್ಲಾಗಲೀ ಕಂಡುಬಂದಾಗ ಕೆಲವು ಅಭಿಮಾನಿಗಳು ಅವರನ್ನು ತಮ್ಮ ಹೃದಯಾಂತರಾಳದಲ್ಲಿ ಇಟ್ಟುಕೊಂಡು ಪೂಜಿಸುತ್ತಾರೆ. ಕತೆಯ ಕರ್ತೃ ತನ್ನ ಕತೆಯ ಮೂಲಕ ಸಾಮಾಜಿಕ ಬದಲಾವಣೆ ಅಥವಾ ಬೆಳವಣಿಗೆ ಆಗಲಿ ಎಂಬ ಇಚ್ಛೆಯನ್ನು ಹೊಂದಿರುತ್ತಾನೆ. ಕಥಾನಾಯಕನ ಪಾತ್ರ ನೋವು, ತ್ಯಾಗ, ಪ್ರೀತಿ, ಧೈರ್ಯ ಮುಂತಾದ ಅಂಶಗಳನ್ನು ಪ್ರತಿನಿಧಿಸುವುದು ಜೀವನದ ಬಗ್ಗೆ ವಿವಿಧ ಅರ್ಥಗಳನ್ನು ಸೃಷ್ಟಿಸಲು ಮಾತ್ರ. ಆದರೆ ತಮ್ಮ ನೆಚ್ಚಿನ ನಟರನ್ನು ದೈವೀಕರಿಸುವ ಅಭಿಮಾನಿಗಳು ಅವರ ಚಿತ್ರಗಳಲ್ಲಿ ಭಾವನಾತ್ಮಕವಾಗಿ ಲೀನವಾಗಿ ಬುದ್ಧಿಯನ್ನು ಅಥವಾ ತರ್ಕವನ್ನು ಬದಿಗೊತ್ತಿರುತ್ತಾರೆ.

ಈ ಸಂದರ್ಭದಲ್ಲಿ ಅಭಿಮಾನಿಗಳು ಅರ್ಥ ಮಾಡಿಕೊಳ್ಳಬೇಕಾದ ಸಂಗತಿಯೆಂದರೆ, ಒಬ್ಬ ನಟ ತನ್ನ ಅಭಿಮಾನಿಗಳ ಒಳಿತನ್ನು ಮಾತ್ರ ಬಯಸುತ್ತಾನೆ. ತನ್ನ ಸಾವಿನಲ್ಲಿಯೂ ತನ್ನ ಅಭಿಮಾನಿಗಳ ಬಾಳು ಬಂಗಾರವಾಗಲಿ ಎಂದು ಬಯಸಿ ಅಮರನಾಗಿರುವ ನಟ ಎಲ್ಲರಿಗೂ 'ಪ್ರೇರಣೆ'ಯಾಗಿರುತ್ತಾನೆಯೇ ಹೊರತು ಸಾವು ತರುವ ಮಾರಕ 'ಪ್ರಭಾವಿ'ಯಾಗಿರುವುದಿಲ್ಲ. ಹೀಗಾಗಿ ಅಭಿಮಾನಿಗಳು ಭಾವನೆಗಳ ಅತಿರೇಕಕ್ಕೆ ಒಳಗಾಗದೆ ತಾರ್ಕಿಕ ಚಿಂತನೆಯ ಮೂಲಕ ನಟರ ಬದುಕನ್ನು ಸಂಭ್ರಮಿಸುವುದನ್ನು ಕಲಿಯಬೇಕಿದೆ.

ವಾಚಕರ ವಾಣಿ

ಕಸಾಪ: ಅಧ್ಯಕ್ಷರ ಅಧಿಕಾರಾವಧಿ ಇಳಿಯಲಿ

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಅಸ್ಮಿತೆಯ ಧ್ವನಿಯಾಗಿ ಕಾರ್ಯನಿರ್ವಹಿಸುವ ಪ್ರತಿಷ್ಠಿತ ಸಂಸ್ಥೆ. ಇಂತಹ ಮಹತ್ವದ ಸಂಸ್ಥೆಯ ರಾಜ್ಯ, ಜಿಲ್ಲಾ ಘಟಕಗಳ ಅಧ್ಯಕ್ಷ ಸ್ಥಾನಗಳಿಗೆ ಈಗಷ್ಟೇ ಚುನಾವಣೆ ನಡೆದು ಹೊಸ ಅಧ್ಯಕ್ಷರು ಆಯ್ಕೆಯಾಗಿದ್ದಾರೆ. ಕಳೆದ ಅವಧಿಯಲ್ಲಿ ರಾಜ್ಯ, ಜಿಲ್ಲೆ, ತಾಲ್ಲೂಕು ಘಟಕಗಳ ಅಧ್ಯಕ್ಷರ ಅಧಿಕಾರಾವಧಿಯನ್ನು ಹಲವರ ವಿರೋಧದ ನಡುವೆಯೂ ಮೂರು ವರ್ಷದಿಂದ ಐದು ವರ್ಷಗಳಿಗೆ ವಿಸ್ತರಿಸಲಾಗಿತ್ತು. ಅಲ್ಲದೆ ಸದಸ್ಯತ್ವ ಶುಲ್ಕವನ್ನು ₹ 500ಕ್ಕೆ ಏರಿಸಲಾಗಿತ್ತು. ಕಸಾಪ ನೂತನ ಅಧ್ಯಕ್ಷರು, ಸದಸ್ಯತ್ವ ಶುಲ್ಕವನ್ನು ₹ 250ಕ್ಕೆ ಇಳಿಸುವುದಾಗಿ ಮತ್ತು ತಾಲ್ಲೂಕು ಘಟಕಗಳ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸುವುದಾಗಿ ಹೇಳಿರುವುದು ಒಳ್ಳೆಯ ತೀರ್ಮಾನವಾಗಿದೆ. ಇದರ ಜೊತೆಗೆ ಅಧ್ಯಕ್ಷರ ಅಧಿಕಾರಾವಧಿಯನ್ನು ಐದು ವರ್ಷದಿಂದ ಮೊದಲು ಇದ್ದಂತೆ ಮೂರು ವರ್ಷಕ್ಕೆ ಇಳಿಸುವ ಮೂಲಕ, ನಾಡು-ನುಡಿಯ ಸೇವೆ ಮಾಡಲು ಉತ್ಸುಕತೆಯಿಂದ ಕಾಯುತ್ತಿರುವ ಹೊಸ ಪ್ರತಿಭೆಗಳಿಗೆ ಕನ್ನಡದ ಕೆಲಸ ಮಾಡಲು ಅವಕಾಶ ದೊರಕಿಸಲು ಮುಂದಾಗಬೇಕು.

ಡಾ. ನಂದೀಶ್ವರ ದಂಡೆ, ಕೊಂಡನಾಯಕನಹಳ್ಳಿ, ಹೊಸಪೇಟೆ

ಕಳ್ಳಕಾಕರ ಭಯವಲ್ಲ, ಕಳ್ಳಕಾಮಗಾರಿಗಳ ಪ್ರತಿಫಲ!

ಉತ್ತಮವಾದ ರಸ್ತೆಯು ನಾಗರಿಕ ಸಮಾಜದ ಮೂಲಸೌಕರ್ಯಗಳಲ್ಲೊಂದು. ರಾಜ್ಯದ ಆರ್ಥಿಕ ಚಟುವಟಿಕೆಗಳಿಗೆ ಬಲ ತುಂಬುವುದಲ್ಲದೆ ಜನರ ಜೀವನವನ್ನು ಉತ್ತಮಪಡಿಸುವಲ್ಲಿ ಸುಸಜ್ಜಿತ ರಸ್ತೆಗಳ ಪಾತ್ರ ಬಹುಮುಖ್ಯ. ಹಾಳಾದ ರಸ್ತೆಗಳಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಒಂದೆರಡು ತಿಂಗಳ ಹಿಂದಷ್ಟೇ ತೇಪೆಹಾಕಿ ಸರಿಮಾಡಿತ್ತಾದರೂ ಮಳೆ ಬಂದ ಕಾರಣಕ್ಕೆ ಅದು ಕಿತ್ತುಬರುತ್ತಿದೆ. ಇದನ್ನು ಕಳಪೆ ಕಾಮಗಾರಿ ಎನ್ನದೇ ಬೇರೆ ಏನನ್ನಬೇಕು?

ಕೆಲವು ವಾಹನ ಸವಾರರು ಇತ್ತೀಚೆಗೆ ರಸ್ತೆಗುಂಡಿಗೆ ಬಿದ್ದು ಅಸುನೀಗಿದ ಪ್ರಕರಣಗಳನ್ನು ಅಪಘಾತವೆಂದು ವ್ಯಾಖ್ಯಾನಿಸುವ ಬದಲು ಕೊಲೆಯೆನ್ನಬಹುದು. ಈ ಕಳಪೆ ಕಾಮಗಾರಿಗೆ ಕಾರಣರಾದವರೆಲ್ಲಾ ಕೊಲೆಗಡುಕರೆ. ಬೆಂಗಳೂರಿನ ಜನ ವಾಹನ ಚಲಾಯಿಸಲು ಹೆದರುವಂತಾಗಿದೆ. ಕಳ್ಳಕಾಕರ ಭಯವಲ್ಲ, ಕಳ್ಳಕಾಮಗಾರಿಗಳ ಪ್ರತಿಫಲ! ಕಳಪೆ ರಸ್ತೆಗಳಿಂದಾಗಿ ವಾಹನ ಸವಾರರು ದೈಹಿಕ ಮತ್ತು ಮಾನಸಿಕ ಒತ್ತಡಕ್ಕೆ ಒಳಗಾಗುತ್ತಿದ್ದಾರೆ. ಬೆಂಗಳೂರನ್ನು ಸಿಲಿಕಾನ್ ಸಿಟಿ ಎಂದು ಗ್ರಹಿಸಲಾಗಿದೆ. ಆಡಳಿತವು ಈ ಗ್ರಹಿಕೆಯನ್ನು ಕಾಪಿಟ್ಟುಕೊಂಡು ಉತ್ತಮವಾದ ಮೂಲಸೌಕರ್ಯ ಕೊಡುವಲ್ಲಿ ಮುಂದಾಗಲಿ. ಪುನಃ ಪುನಃ ಸರ್ಕಾರದ ಖಜಾನೆಗೆ ಪೆಟ್ಟುಬೀಳುವುದನ್ನು ನಿಲ್ಲಿಸಲಿ.

ಪೂಜಾ ಎಂ.ಎಸ್., ಬೆಂಗಳೂರು

ಪೋರನ ಕೃತಜ್ಞತೆ...!

ಓ ಭಗವಂತನೇ...
ಪೆಟ್ರೋಲ್ ಬೆಲೆ, ಗ್ಯಾಸ್ ಸಿಲಿಂಡರ್ ಬೆಲೆ
ಈರುಳ್ಳಿ, ಟೊಮ್ಯಾಟೊ, ಬೇಳೆ, ಎಣ್ಣೆಗಳ
ಬೆಲೆಯೆಲ್ಲ ಏರಿತು,
ಆದರೆ, ಸದ್ಯ...
ಪಾಸ್ ಮಾರ್ಕ್ಸ್‌ಗೆ ಬೇಕಾದ
35 ನಂಬರನ್ನು ಮಾತ್ರ ಏರಿಸಲಿಲ್ಲವಲ್ಲ
ಅದಕ್ಕೆ ನಿನಗೆ ಕೋಟಿ ವಂದನೆ...!

ವಿ.ವಿಜಯೇಂದ್ರ ರಾವ್, ಬೆಂಗಳೂರು

ದೇಸಿ ಪ್ರತಿಭೆಗಳ ಸೇವೆ ಲಭಿಸಲಿ

ಗೂಗಲ್, ಮೈಕ್ರೊಸಾಫ್ಟ್, ಅಡೋಬಿ, ಐಬಿಎಂ ಮುಂತಾದ ವಿಶ್ವದ ಪ್ರಮುಖ ತಂತ್ರಜ್ಞಾನ ಕಂಪನಿಗಳಿಗೆ ಭಾರತದವರು ಸಿಇಒಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈಗ ಈ ಗರಿಗೆ ಮತ್ತೊಂದು ಕಿರೀಟವೆಂಬಂತೆ ಟ್ವಿಟರ್‌ನ ಸಿಇಒ ಆಗಿ ಪರಾಗ್ ಅಗರ್‌ವಾಲ್ ಆಯ್ಕೆಯಾಗಿದ್ದಾರೆ. ಇವರಲ್ಲಿ ಹೆಚ್ಚಿನವರು ಭಾರತದ ಐಐಟಿಯಲ್ಲಿ ವ್ಯಾಸಂಗ ಮಾಡಿದವರು ಎನ್ನುವುದು ವಿಶೇಷ. ಇಂತಹವರನ್ನು ಸದೃಢ ಜ್ಞಾನಿಗಳನ್ನಾಗಿಸಿದ ನಂತರ ನಮ್ಮ ದೇಶದಲ್ಲೇ ಯಾಕೆ ದುಡಿಸಿಕೊಳ್ಳುವ ವ್ಯವಸ್ಥೆ ಇಲ್ಲ. ಎಲ್ಲ ಸೌಲಭ್ಯವಿದ್ದರೂ ಯಾಕೆ ಇವರೆಲ್ಲ ಭಾರತವನ್ನು ಬಿಟ್ಟು ವಿದೇಶಗಳಿಗೆ ಹಾರುತ್ತಿದ್ದಾರೆ. ಇವರ ತರಹವೇ ಎನ್.ಆರ್.ನಾರಾಯಣಮೂರ್ತಿ ಮತ್ತು ಅವರ ಸ್ನೇಹಿತರು ವಿದೇಶಕ್ಕೆ ಹೋಗಿದ್ದರೆ 'ಇನ್ಫೊಸಿಸ್' ಎನ್ನುವ ದೈತ್ಯ ಸಂಸ್ಥೆ ನಮ್ಮ ದೇಶದಲ್ಲಿ ಬೆಳೆಯಲು ಸಾಧ್ಯವಾಗುತ್ತಿತ್ತೇ?

ಭಾರತೀಯರು ಅನ್ಯ ದೇಶಗಳ ದೊಡ್ಡ ದೊಡ್ಡ ಕಂಪನಿಗಳ ಸಿಇಒ ಆಗುವುದಕ್ಕಿಂತ ನಮ್ಮ ದೇಶದಲ್ಲೇ ಬೃಹತ್ ಸಂಸ್ಥೆಗಳನ್ನು ಕಟ್ಟಿ ವಿದೇಶಗಳಿಗೆ ಸಡ್ಡು ಹೊಡೆಯುವಂತೆ ಭಾರತವನ್ನು ಬೆಳೆಸಬೇಕು. ಆಗ ಮಾತ್ರ ಐಐಟಿಯಂತಹ ಜ್ಞಾನಸಾಗರದಲ್ಲಿ ಮಿಂದೆದ್ದದ್ದಕ್ಕೂ ಸಾರ್ಥಕವಾಗುತ್ತದೆ.

ರಾಜು ಬಿ. ಲಕ್ಕಂಪುರ, ಜಗಳೂರು

ಇತಿಹಾಸ ಅರಿಯುವುದು ವಿವಾದಾತ್ಮಕವೇ?

'ಅವಿತಿಟ್ಟ ಅಂಬೇಡ್ಕರ್' ಪುಸ್ತಕ ಬಿಡುಗಡೆ ಸಮಯದಲ್ಲಿ ಪ್ರಕಾಶ್ ಬೆಳವಾಡಿ ಅವರು ಆಡಿದ ಮಾತಿಗೆ ಚಂದನ್ ಎನ್ನುವವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ (ವಾ.ವಾ., ಡಿ. 2). ಕಾಂಗ್ರೆಸ್ ಪಕ್ಷಕ್ಕೆ ಆಗ ನಿಜವಾಗಿಯೂ ಅಂಬೇಡ್ಕರ್ ಅವರ ಬಗ್ಗೆ ಗೌರವ ಇದ್ದಿದ್ದರೆ ಅವರನ್ನು ಅವಿರೋಧವಾಗಿ ಆಯ್ಕೆ ಮಾಡುವ ಅವಕಾಶ ಇತ್ತಲ್ಲವೆ? ಅಷ್ಟಾಗಿಯೂ ಅವರ ಸಹಾಯಕನನ್ನೇ ಅವರ ವಿರುದ್ಧ ನಿಲ್ಲಿಸಿ ಸೋಲಿಸಿದ್ದರ ಹಿಂದೆ ಯಾವ ಅಜೆಂಡಾ ಇತ್ತು? ಮಹಾನಾಯಕ ಅಂಬೇಡ್ಕರ್ ಅವರನ್ನು ಬಿಟ್ಟು ಅವರ ಸಹಾಯಕನಿಗೆ ಅಷ್ಟೊಂದು ಜನ ಮತ ಹಾಕಿದ್ದಾರೆ ಎಂದರೆ ಅದರ ಹಿಂದೆ ಎಷ್ಟು ಅಪಪ್ರಚಾರ ನಡೆದಿರಬಹುದು? ಮತ ಎಣಿಕೆಯಲ್ಲಿ ಮೋಸ ಆಗಿರುವ ಸಾಧ್ಯತೆಯನ್ನೂ ತಳ್ಳಿಹಾಕಲು ಸಾಧ್ಯವೇ?

ಅದೇ ರೀತಿ ಶ್ಯಾಮ್ ಪ್ರಸಾದ್ ಮುಖರ್ಜಿ ಅವರನ್ನು ಅನಗತ್ಯವಾಗಿ ಬಂಧಿಸಿ ಜೈಲಿನಲ್ಲಿಟ್ಟು, ಅಲ್ಲಿಂದ ಅವರನ್ನು ಜೀವಂತವಾಗಿ ಹೊರಬಾರದಂತೆ ಮಾಡಿದ ಹಿಂದೆ ಯಾರಿದ್ದಾರೆ, ಯಾವ ಕಾರಣ ಇದೆ ಎನ್ನುವುದನ್ನು ತಿಳಿದುಕೊಳ್ಳಲು ಇಚ್ಛಿಸುವುದರಲ್ಲಿ ತಪ್ಪೇನಿದೆ? ಮಹಾವೀರ್ ತ್ಯಾಗಿ ಎಂಬ ಕಾಂಗ್ರೆಸ್ ಸದಸ್ಯ 'ನೀವು ಇಂದು ರಚಿಸಿರುವ ಸಂವಿಧಾನದ ಅಡಿಯಲ್ಲಿ ನೀವೇ ಬಂಧಿತರಾಗುವ ಅವಕಾಶ ನಿಮಗೆ ನಿಮ್ಮ ಜೀವಿತಾವಧಿಯಲ್ಲಿ ಒಮ್ಮೆಯಾದರೂ ಖಂಡಿತವಾಗಿಯೂ ಸಿಗುತ್ತದೆ' ಎಂದು ಘಂಟಾಘೋಷವಾಗಿ ಹೇಳಿದ್ದರು. ಇದನ್ನೆಲ್ಲ ಸಮಾಜ ತಿಳಿಯುವುದು ಬೇಡವೇ? ಇತಿಹಾಸದಲ್ಲಿ ಮುಚ್ಚಿಹೋದ ಅಧ್ಯಾಯಗಳನ್ನು ಹುಡುಕುವುದು ವಿವಾದ ಏಕೆ ಆಗಬೇಕು?

ಪಟಾಪಟ್ ಶ್ರೀನಿವಾಸ್, ಅತ್ತಿಬೆಲೆ, ಆನೇಕಲ್

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮಕ್ಕಳು, ಬಾಲಕಿಯರು, ಮಹಿಳೆಯರಿಗೆ ತೊಂದರೆ


ಬೆಂಬಿಡದ ರಕ್ತಹೀನತೆ



ರಕ್ತದಲ್ಲಿ ಹಿಮೋಗ್ಲೋಬಿನ್ (ಬಿಳಿ ರಕ್ತ ಕಣ) ಅಂಶ ಕಡಿಮೆ ಆಗುವುದನ್ನು ರಕ್ತಹೀನತೆ (ಅನೀಮಿಯಾ) ಎನ್ನುತ್ತಾರೆ. ಕಬ್ಬಿಣದ ಅಂಶ ಕೊರತೆಯನ್ನು ಇದು ಸೂಚಿಸುತ್ತದೆ. ರಕ್ತಹೀನತೆಯು ಹೆರಿಗೆ ವೇಳೆ ತಾಯಿಯ ಮರಣ, ಮಕ್ಕಳ ಅವಧಿಪೂರ್ವ ಜನನ, ಕಡಿಮೆ ತೂಕ ಮೊದಲಾದ ಸಮಸ್ಯೆಗಳನ್ನು ತಂದೊಡ್ಡುತ್ತದೆ. ಕರ್ನಾಟಕದಲ್ಲಿ ರಕ್ತಹೀನತೆಯು ಅತಿದೊಡ್ಡ ಆರೋಗ್ಯ ಸಮಸ್ಯೆಗಳಲ್ಲಿ ಒಂದಾಗಿದ್ದು, ಮಕ್ಕಳು ಹಾಗೂ ಮಹಿಳೆಯರನ್ನು ಕಾಡುತ್ತಿದೆ.

ರಾಜ್ಯದ ಶೇ 48ರಷ್ಟು ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಿದ್ದಾರೆ ಎಂದು ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ವರದಿ ಅಭಿಪ್ರಾಯಪಟ್ಟಿದೆ. ಈ ಪೈಕಿ ಶೇ 22ರಷ್ಟು ಮಹಿಳೆಯರು ಕಡಿಮೆ ಪ್ರಮಾಣ, ಶೇ 23ರಷ್ಟು ಮಹಿಳೆಯರ ಮಧ್ಯಮ ಪ್ರಮಾಣ ಹಾಗೂ ಶೇ 3ರಷ್ಟು ಮಹಿಳೆಯರು ತೀವ್ರ ಸ್ವರೂಪದ ರಕ್ತಹೀನತೆ ಎದುರಿಸುತ್ತಿದ್ದಾರೆ. ಗ್ರಾಮೀಣ ಭಾಗದ ಮಹಿಳೆಯರು ಹಾಗೂ ಪರಿಶಿಷ್ಟ ಜಾತಿಗೆ ಸೇರಿದ ಮಹಿಳೆಯರಲ್ಲಿ ರಕ್ತಹೀನತೆ ಪ್ರಮಾಣ ಅಧಿಕವಾಗಿದೆ. ಎಲ್ಲ ವಯೋಮಾನದ ಮಹಿಳೆಯರಲ್ಲಿ ಐದನೇ ಎರಡರಷ್ಟು ಮಂದಿಗೆ, ಎಲ್ಲ ವಯೋಮಾನದ ಪುರುಷರಲ್ಲಿ ಐದನೇ ಒಂದರಷ್ಟು ಮಂದಿಗೆ ರಕ್ತಹೀನತೆ ಸಮಸ್ಯೆಯಿದೆ ಎಂದು ವರದಿ ಹೇಳಿದೆ. 15ರಿಂದ 19 ವರ್ಷದೊಳಗಿನ ಬಾಲಕರಿಗೆ (ಶೇ 26.5) ಹೋಲಿಸಿದರೆ, ಬಾಲಕಿಯರಲ್ಲಿ (49.4) ರಕ್ತಹೀನತೆ ಪ್ರಮಾಣ ಸರಿಸುಮಾರು ಒಂದು ಪಟ್ಟು ಅಧಿಕವಾಗಿದೆ. ಗರ್ಭಿಣಿಯರು ಹಾಗೂ ಗರ್ಭಿಣಿ ಅಲ್ಲದವರನ್ನೂ ಇದು ಸಮಾನವಾಗಿ ಕಾಡುತ್ತಿದೆ. ನಗರದ ಗರ್ಭಿಣಿಯರಿಗಿಂತ (ಶೇ 37.3) ಗ್ರಾಮೀಣ ಭಾಗದ ಗರ್ಭಿಣಿಯರು (ಶೇ 50.3) ಹೆಚ್ಚು ಅಪಾಯ ಎದುರಿಸುತ್ತಿದ್ದಾರೆ.

6ರಿಂದ 59 ತಿಂಗಳು ವಯೋಮಾನದ ಮೂರನೇ ಎರಡರಷ್ಟು ಮಕ್ಕಳಲ್ಲಿ (ಶೇ 66) ರಕ್ತಹೀನತೆ ಕಂಡುಬಂದಿದೆ. ಕಳೆದ ನಾಲ್ಕು ವರ್ಷಗಳಲ್ಲಿ ಈ ವಯೋಮಾನದ ಮಕ್ಕಳಲ್ಲಿ ರಕ್ತಹೀನತೆ ಪ್ರಮಾಣ ಏರಿಕೆಯಾಗಿದೆ. 2015-16ರ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ವರದಿಯಲ್ಲಿ ಶೇ 61ರಷ್ಟಿದ್ದ ರಕ್ತಹೀನತೆಯು, 2019-20ರ ವರದಿಯ ಪ್ರಕಾರ, 66ಕ್ಕೆ ಹೆಚ್ಚಳವಾಗಿದೆ.



ತೆಳ್ಳಗೆ ಇಲ್ಲವೇ ದಢೂತಿ

ರಾಜ್ಯದ ಶೇ 47ರಷ್ಟು ಮಹಿಳೆಯರು ಹಾಗೂ ಶೇ 45ರಷ್ಟು ಪುರುಷರು ತೀರಾ ತೆಳ್ಳಗಿದ್ದಾರೆ ಅಥವಾ ದಢೂತಿಯಾಗಿದ್ದಾರೆ ಎಂದು ವರದಿ ಹೇಳಿದೆ. ತೆಳ್ಳಗಿರುವವರಿಗೆ ಹೋಲಿಸಿದರೆ, ದಪ್ಪಗಿರುವವರ ಪ್ರಮಾಣ ಅಧಿಕವಾಗಿದೆ. ಈ ಪ್ರಮಾಣ ಮಹಿಳೆಯರಲ್ಲಿ ಶೇ 30ರಷ್ಟಿದ್ದರೆ, ಪುರುಷರಲ್ಲಿ ಶೇ 31ರಷ್ಟಿದೆ. 2015-16ರ ಸಮೀಕ್ಷಾ ವರದಿಯಲ್ಲೂ ಇದೇ ಪ್ರವೃತ್ತಿ ಇತ್ತು. ಶೇ 50ಕ್ಕೂ ಹೆಚ್ಚಿನ ಜನರು ಎತ್ತರಕ್ಕೆ ತಕ್ಕ ತೂಕ ಹೊಂದಿದ್ದಾರೆ. ಗ್ರಾಮೀಣ ಭಾಗದಲ್ಲಿ ಹಾಗೂ ಪರಿಶಿಷ್ಟ ಪಂಗಡ ಸಮುದಾಯಕ್ಕೆ ಸೇರಿದ ಜನರಲ್ಲಿ ಅಪೌಷ್ಟಿಕತೆ ಹೆಚ್ಚು ಕಂಡುಬಂದಿದೆ. ನಗರದಲ್ಲಿ ವಾಸಿಸುವ ಹಿರಿಯ ನಾಗರಿಕರು ಹಾಗೂ ಸುಶಿಕ್ಷಿತರಲ್ಲಿ ಸ್ಥೂಲಕಾಯ ಹೆಚ್ಚು ಎಂದು ವರದಿ ತಿಳಿಸಿದೆ.

ಸಮತೋಲನ: ಮನುಷ್ಯನ ದೇಹ ಸಮತೋಲನದಿಂದ ಕೂಡಿರಬೇಕು. ದೇಹಕ್ಕೆ ಪೂರೈಕೆಯಾಗುವ ಪೌಷ್ಟಿಕಾಂಶಗಳ ಪ್ರಮಾಣ ಕಡಿಮೆ ಅಥವಾ ಹೆಚ್ಚು ಆದರೆ ಅದನ್ನು ಅಸಮತೋಲನ ಎಂದು ಪರಿಗಣಿಸಲಾಗುತ್ತದೆ. ವ್ಯಕ್ತಿಯ ಎತ್ತರ ಮತ್ತು ತೂಕವನ್ನು ಲೆಕ್ಕಹಾಕಿ, ಇಷ್ಟು ಎತ್ತರ ಇರುವವರಿಗೆ ಇಷ್ಟೇ ತೂಕ ಇರಬೇಕು ಎಂದು ನಿಗದಿ ಮಾಡಲಾಗಿದೆ. ಇದನ್ನೇ ಬಾಡಿ ಮಾಸ್ ಇಂಡೆಕ್ಸ್ (ಬಿಎಂಐ) ಎನ್ನುತ್ತಾರೆ. ಇದರಲ್ಲಿ ಅಸಮತೋಲನ ಕಂಡುಬಂದರೆ, ಪೌಷ್ಟಿಕಾಂಶಗಳ ಪೂರೈಕೆಯಲ್ಲಿ ಏರುಪೇರಾಗಿದೆ ಎಂದು ಪರಿಗಣಿಸಲಾಗುತ್ತದೆ.

ನಗರಗಳಲ್ಲಿ ಮದ್ಯ, ಗ್ರಾಮಗಳಲ್ಲಿ ತಂಬಾಕು ಬಳಕೆ ಹೆಚ್ಚು

ರಾಜ್ಯದ 15-49 ವಯಸ್ಸಿನ ಪುರುಷರಲ್ಲಿ ಶೇ 27ರಷ್ಟು ಮಂದಿ ವಿವಿಧ ರೂಪದಲ್ಲಿ ತಂಬಾಕು ಸೇವಿಸುತ್ತಾರೆ ಎಂದು ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷಾ ವರದಿ ಹೇಳುತ್ತದೆ. ಇದೇ ವಯಸ್ಸಿನ ಮಹಿಳೆಯರಲ್ಲಿ ತಂಬಾಕು ಸೇವಿಸುವವರ ಪ್ರಮಾಣ ಶೇ 3ರಷ್ಟಿದೆ. ಆದರೆ ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ತಂಬಾಕು ಬಳಸುವವರ ಪ್ರಮಾಣವು ನಗರ ಪ್ರದೇಶ ಮತ್ತು ರಾಜ್ಯ ಸರಾಸರಿಗಿಂತ ಹೆಚ್ಚು. ನಗರ ಪ್ರದೇಶದ ಶೇ 22ರಷ್ಟು ಪುರುಷರು ಮತ್ತು ಶೇ 1ರಷ್ಟು ಮಹಿಳೆಯರು ತಂಬಾಕು ಬಳಸುತ್ತಾರೆ. ಆದರೆ ಗ್ರಾಮೀಣ ಪ್ರದೇಶದ ಶೇ 31ರಷ್ಟು ಪುರುಷರು ಮತ್ತು ಶೇ 4ರಷ್ಟು ಮಹಿಳೆಯರು ತಂಬಾಕು ಸೇವಿಸುತ್ತಾರೆ.

ಸಿಗರೇಟ್ ರೂಪದಲ್ಲಿ ತಂಬಾಕು ಸೇವಿಸುವವರ ಪ್ರಮಾಣ ಹೆಚ್ಚು. ಗುಟ್ಕಾ, ಪಾನ್ ಮಸಾಲ, ಬೀಡಿ ರೂಪದಲ್ಲಿ ತಂಬಾಕು ಬಳಸುವವರ ಪ್ರಮಾಣ ಕಡಿಮೆ ಇದೆ. ರಾಜ್ಯದಲ್ಲಿ ಸಿಗರೇಟ್ ಸೇದುವ ಪುರುಷರಲ್ಲಿ ಶೇ 69ರಷ್ಟು ಜನರು ದಿನವೊಂದರಲ್ಲಿ ಐದು ಮತ್ತು ಅದಕ್ಕಿಂತಲೂ ಹೆಚ್ಚು ಸಿಗರೇಟ್ ಸೇದುತ್ತೇವೆ ಎಂದು ಸಮೀಕ್ಷೆ ವೇಳೆ ಹೇಳಿಕೊಂಡಿದ್ದಾರೆ.

ರಾಜ್ಯದ ಇದೇ ವಯಸ್ಸಿನ ಶೇ 23ರಷ್ಟು ಪುರುಷರು ಮದ್ಯ ಸೇವಿಸುತ್ತಾರೆ. ಪುರುಷರಿಗೆ ಹೋಲಿಸಿದರೆ ಮದ್ಯ ಸೇವಿಸುವ ಮಹಿಳೆಯರ ಪ್ರಮಾಣ ತೀರಾ ಕಡಿಮೆ ಇದೆ. ರಾಜ್ಯದ ಶೇ 0.3ರಷ್ಟು ಮಹಿಳೆಯರಷ್ಟೇ ಮದ್ಯ ಸೇವಿಸುತ್ತೇವೆ ಎಂದು ಹೇಳಿಕೊಂಡಿದ್ದಾರೆ. ಗ್ರಾಮೀಣ ಪ್ರದೇಶದ ಪುರುಷರಿಗೆ (ಶೇ 21) ಹೋಲಿಸಿದರೆ, ಮದ್ಯ ಸೇವಿಸುವ ನಗರ ಪ್ರದೇಶದ ಪುರುಷರ ಪ್ರಮಾಣ (ಶೇ 26) ಹೆಚ್ಚು. ಮದ್ಯ ಸೇವಿಸುವವರಲ್ಲಿ ಶೇ 54ರಷ್ಟು ಜನರು ವಾರಕ್ಕೆ ಒಮ್ಮೆ ಮತ್ತು ಶೇ 19ರಷ್ಟು ಮಂದಿ ಪ್ರತಿದಿನವೂ ಮದ್ಯ ಸೇವಿಸುತ್ತೇವೆ ಎಂದು ಹೇಳಿಕೊಂಡಿದ್ದಾರೆ.

ಆಧಾರ: ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ-5ರ ವರದಿ

ಸರ್ಕಾರಿ ಆಸ್ಪತ್ರೆಗಳಲ್ಲಿ ಹೆರಿಗೆ: ಸ್ವಂತ ಹಣದ ವೆಚ್ಚ ಏರಿಕೆ

ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಹೆರಿಗೆಗಾಗಿ ಸಾರ್ವಜನಿಕರು ತಮ್ಮ ಜೇಬಿನಿಂದ ಮಾಡಬೇಕಿರುವ ವೆಚ್ಚವು ಸ್ವಲ್ಪ ಏರಿಕೆಯಾಗಿದೆ. 2015-16ರಲ್ಲಿ ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಪ್ರತಿ ಹೆರಿಗೆಗೆ ಸರಾಸರಿ ₹4,824 ವೆಚ್ಚ ಮಾಡಬೇಕಿತ್ತು. ಇದು 2019-20ರಲ್ಲಿ ₹4,954ಕ್ಕೆ ಏರಿಕೆಯಾಗಿದೆ. ನಾಲ್ಕು ವರ್ಷಗಳಲ್ಲಿ ಕೇವಲ ₹130ರಷ್ಟು ಏರಿಕೆಯಾಗಿದೆ.

ಈ ವೆಚ್ಚವು ನೋಂದಣಿ ಶುಲ್ಕ, ಕೆಲವು ಪರೀಕ್ಷಾ ಶುಲ್ಕಗಳು, ರೋಗಿಯ ಮೇಲ್ವಿಚಾರಕರ ವೆಚ್ಚವನ್ನು ಒಳಗೊಂಡಿದೆ. ಅದರ ಜತೆಯಲ್ಲಿ ಕೆಲಸ ತ್ವರಿತವಾಗಿ ಆಗಲು ಮತ್ತು ಹೆಚ್ಚು ಅನುಕೂಲ ಪಡೆಯಲು ನೀಡಬೇಕಿರುವ ಲಂಚದ ಮೊತ್ತವನ್ನೂ ಈ ವೆಚ್ಚ ಒಳಗೊಂಡಿದೆ. ಸರ್ಕಾರವು ಉಚಿತವಾಗಿ ಹೆರಿಗೆ ಸೇವೆ ನೀಡುತ್ತಿದ್ದರೂ, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜನರು ತಮ್ಮ ಸ್ವಂತ ಹಣವನ್ನು ವೆಚ್ಚ ಮಾಡಲೇಬೇಕಿದೆ. ಜನರು ಹೀಗೆ ಮಾಡಬೇಕಿರುವ ವೆಚ್ಚದ ಮೊತ್ತವು ಜಿಲ್ಲೆಯಿಂದ ಜಿಲ್ಲೆಗೆ ಭಿನ್ನವಾಗಿದೆ.


ಜತೆಗೆ 2015-16ಕ್ಕೆ ಹೋಲಿಸಿದರೆ, 2019-20ರಲ್ಲಿ ಪ್ರತೀ ಜಿಲ್ಲೆಗಳಲ್ಲಿ ಆಗಿರುವ ವೆಚ್ಚ ಬದಲಾವಣೆ ಏಕ ಸ್ವರೂಪದ್ದಲ್ಲ. ಹಲವು ಜಿಲ್ಲೆಗಳಲ್ಲಿ ಈ ಸ್ವರೂಪದ ವೆಚ್ಚವು ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಕೆಲವು ಜಿಲ್ಲೆಗಳಲ್ಲಿ ಸ್ವಲ್ಪ ಪ್ರಮಾಣದಲ್ಲಿ ಏರಿಕೆಯಾಗಿದೆ. ಕೆಲವು ಜಿಲ್ಲೆಗಳಲ್ಲಿ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿದೆ.

ಬಳ್ಳಾರಿ ಮತ್ತು ಹಾವೇರಿ ಜಿಲ್ಲೆಯಲ್ಲಿ ಈ ಸ್ವರೂಪದ ವೆಚ್ಚವು ಹಲವು ಪಟ್ಟು ಏರಿಕೆಯಾಗಿದೆ. ಬಳ್ಳಾರಿಯಲ್ಲಿ ಈ ವೆಚ್ಚವು ₹4,413ರಿಂದ ₹12,348ಕ್ಕೆ ಏರಿಕೆಯಾಗಿದೆ. ಹಾವೇರಿಯಲ್ಲಿ ₹2,886ರಿಂದ ₹11,573ಕ್ಕೆ ಏರಿಕೆಯಾಗಿದೆ. ಬೆಂಗಳೂರು ನಗರದಲ್ಲಿ ₹9,333ರಿಂದ ₹3,633ಕ್ಕೆ ಇಳಿಕೆಯಾಗಿದೆ.

ಅಭಿವೃದ್ಧಿಯಲ್ಲಿ ಹಿಂದುಳಿದ ಜಿಲ್ಲೆಗಳು ಮತ್ತು ಮೂಲಸೌಕರ್ಯಗಳ ಕೊರತೆ ಇರುವ ಜಿಲ್ಲೆಗಳಲ್ಲಿ ಈ ಸ್ವರೂಪದ ವೆಚ್ಚವು ಅಧಿಕ. ಜತೆಗೆ ಇಂತಹ ಜಿಲ್ಲೆಗಳಲ್ಲೇ ಈ ವೆಚ್ಚವು ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿದೆ. ಆದರೆ ಬೆಂಗಳೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಅಕ್ಕಪಕ್ಕದ ಜಿಲ್ಲೆಗಳಲ್ಲಿ ಈ ವೆಚ್ಚವು ಇಳಿಕೆಯಾಗಿದೆ.

ಕೆಲವೆಡೆ ಏರಿಕೆ, ಕೆಲವೆಡೆ ಇಳಿಕೆ (ವೆಚ್ಚ ₹ಗಳಲ್ಲಿ)

(ಆವರಣದಲ್ಲಿ ಇರುವುದು 2015-16ರಲ್ಲಿ ಮಾಡಬೇಕಿದ್ದ ವೆಚ್ಚ)



ವೇದವ್ಯಾಸರ ಶಿವಪುರಾಣದ ಕುಮಾರಖಂಡಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 20

ಸಿದ್ಧಿ-ಬುದ್ಧಿಯೊಂದಿಗೆ ಗಣೇಶನ ಮದುವೆ

ವಿಶ್ವರೂಪ ಅಥವಾ ವಿಶ್ವಕರ್ಮನೆಂಬ ಬ್ರಹ್ಮನಿಗೆ ಸಿದ್ಧಿ ಮತ್ತು ಬುದ್ಧಿ ಎಂಬ ಇಬ್ಬರು ಸರ್ವಾಂಗ ಸುಂದರಿಯರಾದ ಹೆಣ್ಣುಮಕ್ಕಳು ಇದ್ದರು. ವಿಶ್ವಕರ್ಮಬ್ರಹ್ಮನೂ ತನ್ನ ಮಕ್ಕಳನ್ನು ಗಣೇಶನಿಗೆ ಕೊಟ್ಟು ವಿವಾಹವನ್ನು ಮಾಡಿ ಪಾರ್ವತೀಪರಮೇಶ್ವರರೊಂದಿಗೆ ಸಂತೋಷಪಟ್ಟ. ಕೆಲವು ಕಾಲಾನಂತರ ಗಣಪತಿಗೆ ಇಬ್ಬರು ದಿವ್ಯಾಕಾರವುಳ್ಳ ಪುತ್ರರು ಹುಟ್ಟಿದರು. ಸಿದ್ಧಿ ಎಂಬುವಳಲ್ಲಿ 'ಕ್ಷೇಮ' ಎಂಬ ಪುತ್ರ, ಬುದ್ಧಿಯಲ್ಲಿ 'ಲಾಭ' ಎಂಬ ಪುತ್ರ ಹುಟ್ಟಿದರು. ಇಬ್ಬರು ಪುತ್ರರತ್ನಗಳೊಂದಿಗೆ ಗಣಪತಿಯು ಸುಖವನ್ನನುಭವಿಸುತ್ತಿರುವಾಗ ಶಿವನ ಮತ್ತೊಬ್ಬ ಮಗನಾದ ಷಣ್ಮುಖ ಪೃಥ್ವಿಯನ್ನೂ ಪ್ರದಕ್ಷಿಣೆಮಾಡಿ ಬಂದ.

ಆ ಸಮಯದಲ್ಲಿ ಕಲಹಪ್ರಿಯನಾದ ನಾರದನು ಷಣ್ಮುಖನನ್ನು ಭೇಟಿಯಾಗಿ ಚಾಡಿ ಹೇಳಿದ. 'ಎಲೈ ಷಣ್ಮುಖನೇ, ನಿನ್ನ ಮಾತಾಪಿತೃಗಳಾದ ಪಾರ್ವತೀಪರಮೇಶ್ವರರು ನಿನ್ನ ವಿಷಯದಲ್ಲಿ ನಡೆದುಕೊಂಡಿರುವುದು, ಲೋಕದಲ್ಲಿ ಬೇರೆ ಯಾರೂ ತಮ್ಮ ಮಕ್ಕಳ ವಿಷಯದಲ್ಲಿ ನಡೆಯಲಾರರು. ಯಾವುದೋ ನೆಪ ಮಾಡಿ ನಿನ್ನನ್ನು ಮನೆಯಿಂದ ಕಳುಹಿಸಿ, ಗಣಪತಿಯನ್ನು ಮನೆಯಲ್ಲಿಯೇ ಇರಿಸಿಕೊಂಡು ಅವನಿಗೆ ವಿವಾಹವನ್ನೂ ಮಾಡಿದ್ದಾರೆ. ಆ ಗಣಪತಿಯು ವಿಶ್ವಕರ್ಮಬ್ರಹ್ಮನ ಇಬ್ಬರು ಹೆಣ್ಣುಮಕ್ಕಳನ್ನು ಮದುವೆಮಾಡಿಕೊಂಡು ಸುಖವಾಗಿದ್ದಾನೆ. ಇಬ್ಬರು ಮಕ್ಕಳನ್ನು ಪಡೆದು ಆನಂದ ಪಡುತ್ತಿದ್ದಾನೆ. ಆದರೆ ನೀನು ತಾಯಿತಂದೆಗಳ ಮಾತಿನಂತೆ ಭೂಮಿಯನ್ನೂ ಸುತ್ತಿ ಕಷ್ಟಪಟ್ಟೆ. ನಿನ್ನ ತಾಯಿತಂದೆಯರು ನಿನಗೆ ಮಾಡಿರುವ ಮೋಸವು ಯೋಗ್ಯವಲ್ಲ. ಅವರ ಮುಖವನ್ನು ಕೂಡ ನೋಡಬಾರದು' ಎಂದು ಕಿವಿ ಚುಚ್ಚಿದ.

ನಾರದನ ಮಾತು ಕೇಳಿ ಸ್ಕಂದನಿಗೆ ಅತ್ಯಂತ ಕೋಪಬಂತು. ಮಾತಾಪಿತೃಗಳಿಗೆ 'ನಾನು ಕ್ರೌಂಚಪರ್ವತಕ್ಕೆ ಹೋಗುತ್ತಿದ್ದೇನೆ' ಎಂದ. 'ಏಕೆ ಮಗು ಹೋಗುವೆ? ನೀನಿಲ್ಲೆ ಇರು' ಎಂದು ಪಾರ್ವತೀಪರಮೇಶ್ವರರು ಹೇಳಿದಾಗ, ಷಣ್ಮುಖನು 'ತಾಯಿತಂದೆಗಳಾದ ನೀವೇ ನನ್ನಲ್ಲಿ ಕಪಟವಾದ ಪ್ರೀತಿಯನ್ನು ತೋರಿಸುತ್ತಿದ್ದೀರ. ನಾನು ಒಂದು ಕ್ಷಣವೂ ಇಲ್ಲಿ ನಿಲ್ಲಲಾರೆ' ಎಂದು ಷಣ್ಮುಖನು ಕ್ರೌಂಚಪರ್ವತಕ್ಕೆ ಹೊರಟುಹೋದ. ಅವನು ಈಗಲೂ ಅಲ್ಲೆ ನೆಲೆಸಿರುವನು. ಅವನ ದರ್ಶನವನ್ನು ಮಾಡಿದರೆ ಪಾಪವೆಲ್ಲವೂ ನಾಶವಾಗುವುದು. ಅವನ ನಾಮಸ್ಮರಣೆಯಿಂದ ಶ್ರೇಷ್ಠವಾದ ಬ್ರಹ್ಮಚರ್ಯವನ್ನು ಹೊಂದಬಹುದು. ಕಾರ್ತೀಕಮಾಸದಲ್ಲಿ ದೇವತೆಗಳೂ ಋಷಿಗಳೂ ಅವನ ದರ್ಶನಮಾಡಲು ಕ್ರೌಂಚಪರ್ವತಕ್ಕೆ ಹೋಗುವರು. ಕಾರ್ತೀಕಮಾಸದಲ್ಲಿ ಕೃತ್ತಿಕಾನಕ್ಷತ್ರವು ಸೇರಿದ ಪೂರ್ಣಿಮೆಯಲ್ಲಿ ಯಾರು ಕಾರ್ತೀಕೆಯನ ದರ್ಶನವನ್ನು ಮಾಡುವರೋ, ಅವರ ಪಾಪಗಳೆಲ್ಲವೂ ನಾಶವಾಗಿ, ತಮಗಿಷ್ಟವಾದ ಫಲವನ್ನು ಪಡೆವರು.


ಸ್ಕಂದ ತಮ್ಮನ್ನು ಬಿಟ್ಟು ದೂರ ಹೋಗಿದ್ದರಿಂದ ಪಾರ್ವತಿಗೆ ತುಂಬಾ ದುಃಖವಾಯಿತು. ಆಗ ಪತಿ ಪರಮೇಶ್ವರನಲ್ಲಿ 'ಸ್ಕಂದನನ್ನು ನೋಡಲು ಹೋಗೋಣ' ಎಂದು ಬೇಡಿಕೊಂಡಳು. ಈಶ್ವರನು ಪಾರ್ವತಿಯೊಡನೆ ಕ್ರೌಂಚಪರ್ವತಕ್ಕೆ ಬಂದಾಗ, ಕುಮಾರನು ಆ ಸ್ಥಳವನ್ನು ಬಿಟ್ಟು ಬೇರೆ ಕಡೆಗೆ ಹೋಗಲು ಸಿದ್ಧನಾದ. ದೇವತೆಗಳೂ ಮುನಿಗಳೂ ಎಷ್ಟೇ ಪ್ರಾರ್ಥನೆ ಮಾಡಿದರೂ ಕೇಳದೆ, ಕ್ರೌಂಚಪರ್ವತವನ್ನು ಬಿಟ್ಟು ಮೂರು ಯೋಜನದ ದೂರಕ್ಕೆ ಹೊರಟು ಹೋದ. ಆದರೂ ಪುತ್ರಪ್ರೇಮದಿಂದ ಪಾರ್ವತೀಪರಮೇಶ್ವರರು ಪ್ರತಿ ಪರ್ವಕಾಲಗಳಲ್ಲಿಯೂ ಕುಮಾರನ ದರ್ಶನಕ್ಕಾಗಿ ಅವನಿರುವ ಸ್ಥಾನಕ್ಕೆ ಹೋಗುವರು. ಶಂಕರನು ಅಮಾವ್ಯಾಸ್ಯೆಯ ದಿನವೂ, ಗಿರಿಜೆಯು ಪೂರ್ಣಿಮೆಯ ದಿನವೂ, ಕುಮಾರನನ್ನು ನೋಡಲು ತಪ್ಪದೆ ಹೋಗುವರು. ಈಶ್ವರನು ತನ್ನ ಅಂಶದಿಂದ ಮಲ್ಲಿಕಾರ್ಜುನನೆಂಬ ಜ್ಯೋತಿರ್ಲಿಂಗಸ್ವರೂಪನಾಗಿ ಆ ಕ್ರೌಂಚಪರ್ವತದಲ್ಲಿ ನೆಲೆಸಿರುವನು.

ಶಿವಪುತ್ರರಾದ ಕುಮಾರ ಮತ್ತು ಗಣಪತಿಯ ಪರಮಪವಿತ್ರವಾದ ಕಥೆಯನ್ನು ಕೇಳಿದವರ ಪಾಪಗಳೆಲ್ಲಾ ನಾಶವಾಗುವುದು; ತಮಗಿಷ್ಟವಾದುದನ್ನೆಲ್ಲವನ್ನೂ ಪಡೆಯುವರು; ಮಂಗಳಕರವಾದ ಜೀವನ ನಡೆಸಿ, ಶಿವೈಕ್ಯವನ್ನು ಹೊಂದುವರು.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಆರ್‌ಜೆಡಿ ಅಧ್ಯಕ್ಷ ಲಾಲು ಪ್ರಸಾದ್ ಅವರು ಅನಾರೋಗ್ಯದ ಕಾರಣ ನ.26ರಂದು ದೆಹಲಿಯ ಏಮ್ಸ್ ಆಸ್ಪತ್ರೆಗೆ ದಾಖಲಾಗಿದ್ದರು. ಇದರ ಬೆನ್ನಲ್ಲೇ, ಲಾಲು ಅವರು ಆಸ್ಪತ್ರೆಯ ಹಾಸಿಗೆಯ ಮೇಲೆ ಮಲಗಿರುವ ಫೋಟೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ನ.30ರಂದು ಅವರು ಕೋರ್ಟ್‌ಗೆ ಹಾಜರಾಗಬೇಕಿತ್ತು. ಅದರಿಂದ ತಪ್ಪಿಸಿಕೊಳ್ಳಲು ಅವರು ಅನಾರೋಗ್ಯದ ನಾಟಕ ಆಡುತ್ತಿದ್ದಾರೆ. ಇತ್ತೀಚೆಗಷ್ಟೇ ಜೀಪ್ ಓಡಿಸುತ್ತಿದ್ದ ವ್ಯಕ್ತಿಗೆ ವಿನಾಕಾರಣ ಎದೆ ನೋವು ಹೇಗೆ ಕಾಣಿಸಿಕೊಳ್ಳುತ್ತದೆ ಎಂದು ಪ್ರಶ್ನಿಸಲಾಗಿದೆ.



ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಫೋಟೊಗಳು ಹಳೆಯವು ಎಂದು ಲಾಜಿಕಲ್ ಇಂಡಿಯನ್ ವರದಿ ಮಾಡಿದೆ. ಲಾಲು ಅವರು 2018ರಲ್ಲಿ ಮುಂಬೈನಲ್ಲಿ ಚಿಕಿತ್ಸೆ ಪಡೆದುಕೊಂಡು ಪಟ್ನಾಗೆ ಮರಳಿದ ಬಳಿಕ ತೆಗೆಯಲಾಗಿರುವ ಫೋಟೊಗಳು ಇವು. ಈ ಫೋಟೊಗಳನ್ನು ಆರ್‌ಜೆಡಿ ತನ್ನ ಟ್ವಿಟರ್ ಖಾತೆಯಲ್ಲಿ ಪೋಸ್ಟ್ ಮಾಡಿತ್ತು. ನ.26ರಂದು ಲಾಲು ಏಮ್ಸ್‌ಗೆ ದಾಖಲಾಗಿದ್ದಾರೆ. ಆದರೆ ವೈರಲ್ ಆಗಿರುವ ಫೋಟೊಗಳು ಏಮ್ಸ್ ಆಸ್ಪತ್ರೆಯದ್ದಲ್ಲ ಎಂದು ವರದಿಯಲ್ಲಿ ಹೇಳಲಾಗಿದೆ.

ಗುಂಡಣ್ಣ



ದಿನ ಭವಿಷ್ಯ

ಶುಕ್ರವಾರ ಡಿಸೆಂಬರ್ 3, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಕಾರ್ತಿಕ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಜ್ಯೇಷ್ಠ ಚತುರ್ದಶಿ ಗಂ. 23-29 (ಹ. 3-56) ಶುಕ್ರವಾರ ನಿತ್ಯ ನಕ್ಷತ್ರ ವಿಶಾಖಾ ಗಂ. 16-55 (ಹ. 1-19) ಅತಿಗಂಡ ನಾಮ ಯೋಗ ಗಂ. 16-27 ಶಕುನಿ ಕರಣ ಗಂ. 23-39 ವಿಷ ಗಂ. 26-15 ಅಮೃತ ಗಂ 48-39: ರಾಹುಕಾಲ ಬೆ. ಗಂ. 10-30 ರಿಂದ 12-00 ಗುಳಿಕ ಬೆ. ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 : ಸೂರ್ಯೋದಯ: 6-30 ಸೂರ್ಯಾಸ್ತ: 5-47 ಅದೃಷ್ಟ ಸಂಖ್ಯೆ 1, 8

ಮೇಷ: ಕೆಲಸ-ಕಾರ್ಯಗಳು ಸುಲಭವಾಗಿ ನಿಮ್ಮಿಚ್ಛೆಯಂತೆ ಕೈಗೂಡುವವು. ಆತ್ಮೀಯರ ಭೇಟಿ ಮತ್ತು ಸಂತೋಷದ ಸುದ್ದಿ ಕೇಳುವ ಸಾಧ್ಯತೆ. ವಿದ್ಯಾರ್ಥಿಗಳಿಗೆ ಆಟಪಾಠಗಳಲ್ಲಿ ಹಿನ್ನಡೆ. ವ್ಯಾಪಾರದಲ್ಲಿ ಸ್ವಲ್ಪಮಟ್ಟಿನ ನಷ್ಟ.

ವೃಷಭ: ಕೌಟುಂಬಿಕ ಸುಖ, ಶಾಂತಿಗಳು ನೆಲೆಸಿ ಮಾನಸಿಕ ನೆಮ್ಮದಿ. ಕಾರ್ಯ-ಕಲಾಪಗಳಲ್ಲಿ ಪ್ರಗತಿ. ಕೊಡುಕೊಳ್ಳುವ ವ್ಯವಹಾರಗಳಲ್ಲಿ ಲಾಭ ನಿರೀಕ್ಷಿಸಬಹುದು. ದೂರ ಪ್ರಯಾಣದ ಯೋಜನೆ ರೂಪುಗೊಳ್ಳುವ ಸಾಧ್ಯತೆ.

ಮಿಥುನ: ಮಾನಸಿಕ ಚಂಚಲದಿಂದ ಭಯದ ವಾತಾವರಣ. ವ್ಯಾಪಾರ ವ್ಯವಹಾರಗಳಲ್ಲಿ ಲಾಭದ ಇಳಿಮುಖ. ಉದ್ಯೋಗಸ್ಥರಿಗೆ ವಿಶ್ವಾಸದ ನಿರ್ಧಾರಗಳಿಂದಾಗಿ ಮುನ್ನಡೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಪ್ರಗತಿ.

ಕರ್ಕಾಟಕ: ಕಾರ್ಯಬಾಹುಳ್ಯದಿಂದಾಗಿ ಒತ್ತಡ ಹೆಚ್ಚಾಗಿ ಕೆಲಸ-ಕಾರ್ಯಗಳಲ್ಲಿ ಮಂದಗತಿ. ದಾಯಾದಿ ಕಲಹ ಸಂಭವ. ವಾಹನ ಪ್ರಯಾಣದ ಬಗ್ಗೆ ಎಚ್ಚರಿಕೆ ವಹಿಸುವುದು ಸೂಕ್ತ. ಗುರು ಹಿರಿಯರೊಡನೆ ಸಮಾಲೋಚನೆ ಸಾಧ್ಯತೆ.

ಸಿಂಹ: ಪ್ರೀತಿ ಪಾತ್ರರೊಂದಿಗೆ ಚರ್ಚೆ. ಆರೋಗ್ಯದಲ್ಲಿ ಸುಧಾರಣೆ. ಉದ್ಯೋಗದಲ್ಲಿ ಪ್ರಗತಿ. ಸಾಮಾಜಿಕ ಕೆಲಸ-ಕಾರ್ಯಗಳಲ್ಲಿ ಭಾಗವಹಿಸುವ ಸಾಧ್ಯತೆ. ಕುಟುಂಬ ಸದಸ್ಯರೊಂದಿಗೆ ದೇವತಾ ದರ್ಶನ.

ಕನ್ಯಾ: ಕೆಲಸ-ಕಾರ್ಯಗಳು ಸುಲಭವಾಗಿ ನೆರವೇರಿ ಸಂತಸ. ಲೇವಾದೇವಿ ಹಣಕಾಸು ವ್ಯವಹಾರಸ್ಥರಿಗೆ ಅಧಿಕ ಲಾಭ. ಉದ್ಯೋಗ ನಿಮಿತ್ತ ವಿದೇಶ ಯಾನದ ಸಾಧ್ಯತೆ. ಹಿರಿಯರ ಆರೋಗ್ಯದ ಬಗ್ಗೆ ಗಮನ ಅಗತ್ಯ.

ತುಲಾ: ವ್ಯಾಪಾರ, ವ್ಯವಹಾರಗಳಲ್ಲಿ ಯಶಸ್ಸು. ಸಕಾಲದಲ್ಲಿ ಕೆಲಸ-ಕಾರ್ಯಗಳು ಪೂರೈಸಿದ ಸಂತಸ. ಸಂಘ ಸಂಸ್ಥೆಗಳಿಂದ ಸಹಾಯ ಸಹಕಾರ ದೊರಕಲಿದೆ. ಹೊಸ ಹೊಸ ವ್ಯವಹಾರಗಳ ಬಗ್ಗೆ ಚಿಂತನೆ.

ವೃಶ್ಚಿಕ: ನಿರೀಕ್ಷಿತ ಕೆಲಸ ಕಾರ್ಯಗಳು ನಡೆಯದೇ ವ್ಯತಿರಿಕ್ತ ಪರಿಣಾಮಗಳುಂಟಾಗಬಹುದು. ಅಹಿತಕರ ಘಟನೆಗಳಿಂದಾಗಿ ವೃಥಾ ದಂಡ ತೆರಬೇಕಾದೀತು. ಲೇವಾದೇವಿ ವ್ಯವಹಾರವನ್ನು ದಿನದ ಮಟ್ಟಿಗೆ ಮುಂದೂಡಿ.

ಧನು: ನಿರೀಕ್ಷಿತ ಕೆಲಸ-ಕಾರ್ಯಗಳು ಫಲ ನೀಡಿ ಸಂತಸ. ವ್ಯಾಪಾರದಲ್ಲಿ ಲಾಭ. ಆತ್ಮೀಯ ವ್ಯಕ್ತಿಗಳ ಸಂದರ್ಶನ ಸಾಧ್ಯತೆ. ದೂರದಲ್ಲಿರುವ ಮಕ್ಕಳಿಂದ ಸಹಾಯ ಹರಿದು ಬರುವ ಸಾಧ್ಯತೆ. ಉದ್ಯೋಗಸ್ಥರಿಗೆ ಮೇಲಧಿಕಾರಿಗಳಿಂದ ಪ್ರಶಂಸೆ.

ಮಕರ: ವ್ಯಾಪಾರ ವ್ಯವಹಾರಗಳಲ್ಲಿ ನಿರೀಕ್ಷೆ ಮೀರಿದ ಲಾಭ. ಆಪ್ತೇಷ್ಟರ ಆಗಮನ ಸಾಧ್ಯತೆ. ಬಹುದಿನಗಳಿಂದ ನಿರೀಕ್ಷೆಯಲ್ಲಿದ್ದ ಸಮಾಚಾರ ಕೇಳಿ ದುಗುಡ ನಿವಾರಣೆ. ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ಅಗತ್ಯ.

ಕುಂಭ: ಉದ್ಯೋಗ ಕ್ಷೇತ್ರದಲ್ಲಿ ಸಮಾಧಾನ. ಕುಟುಂಬದಲ್ಲಿ ಶಾಂತ ವಾತಾವರಣ. ವಿದ್ಯಾರ್ಥಿಗಳಿಗೆ ಆಟ-ಪಾಠಗಳಲ್ಲಿ ಹೆಚ್ಚಿನ ಪ್ರಗತಿ. ಉದ್ಯೋಗಸ್ಥರಿಗೆ ಕಚೇರಿ ಲೆಕ್ಕಪತ್ರಗಳಲ್ಲಿನ ತೊಡಕುಗಳು ನಿವಾರಣೆಯಾಗಿ ನಿರಾಳತೆ.

ಮೀನ: ಅನಿರೀಕ್ಷಿತ ಪ್ರಯಾಣ ಸಂಭವಿಸಿ ವೃಥಾ ಖರ್ಚಿಗೆ ನಾಂದಿಯಾಗುವ ಸಾಧ್ಯತೆ. ಆತ್ಮೀಯರ ಆರೋಗ್ಯದಲ್ಲಿ ವ್ಯತ್ಯಯ. ವ್ಯಾಪಾರ ವ್ಯವಹಾರಗಳಲ್ಲಿ ಪ್ರಗತಿ. ಹಿರಿಯರ ಮಾತುಗಳನ್ನು ಕಡೆಗಣಿಸದಿರಿ. ಹಿತಶತ್ರುಗಳ ಭಯ.

ನಿಮ್ಮ ಜನ್ಮದಿನ 3-ಡಿಸೆಂಬರ್ ಇಂದು ಅತ್ಯಂತ ಶುಭದಾಯಕ. ಉದ್ಯೋಗ ಕ್ಷೇತ್ರದಲ್ಲಿ ಯಶಸ್ಸು. ಆರೋಗ್ಯದ ವಿಚಾರದಲ್ಲಿ ಸ್ವಲ್ಪಮಟ್ಟಿನ ತೊಂದರೆಗಳು ಕಂಡುಬರಬಹುದು. ಅತಿಯಾದ ಕಾಳಜಿಯಿಂದಾಗಿ ಮಾನಸಿಕ ಸಮಸ್ಯೆಗಳು ಎದುರಾದೀತು. ಆಧ್ಯಾತ್ಮಿಕ ಒಲವಿನಿಂದಾಗಿ ಮಾನಸಿಕ ಶಾಂತಿಯನ್ನು ಹೊಂದುವಿರಿ.

ಬೆರಗಿನ ಬೆಳಕು



ಗುರುರಾಜ ಕರಜಗಿ

ಪಾಪದ ವೃಕ್ಷ

ನರಕ ತಪ್ಪಿತು ಧರ್ಮಜಂಗೆ, ದಿಟ, ಆದೊಡೇಂ? |
ನರಕದರ್ಶನ ದುಃಖ ತಪ್ಪದಾಯಿತಲ? ||
ದುರಿತ ತರುವಾರು ನೆಟ್ಟುದೊ, ನಿನಗಮುಂಟು ಫಲ |
ಚಿರಋಣದ ಲೆಕ್ಕವದು - ಮಂಕುತಿಮ್ಮ || 511 ||

ಪದ-ಅರ್ಥ: ದಿಟ = ಸತ್ಯ, ದುರಿತತರುವಾರು = ದುರಿತ(ಪಾಪ) + ತರು(ಮರ) + ಆರು, ನಿನಗಮುಂಟು = ನಿನಗಂ(ನಿನಗೆ) + ಉಂಟು,

ವಾಚ್ಯಾರ್ಥ: ಧರ್ಮರಾಜನಿಗೆ ನರಕ ತಪ್ಪಿದರೂ, ನರಕದರ್ಶನ ತಪ್ಪಲಿಲ್ಲ. ಪಾಪದ ಮರವನ್ನು ಯಾರು ನೆಟ್ಟರೋ, ಆದರೆ ಅದರ ಫಲ ನಿನಗೆ ತಪ್ಪದು. ಇದು ನಮಗರ್ಥವಾಗದ ಶಾಶ್ವತ ಋಣದ ಲೆಕ್ಕ.

ವಿವರಣೆ: ಇದೊಂದು ಮಹಾಭಾರತದ ಧರ್ಮಸೂಕ್ಷ್ಮ ಪ್ರಸಂಗ. ಇದು ಧರ್ಮರಾಜನಿಗೆ ಬಂದ ನೀತಿ ಪರೀಕ್ಷೆ. ದ್ರೋಣಾಚಾರ್ಯರ ಅಧಿಪತ್ಯದಲ್ಲಿ ಯುದ್ಧ ಭೀಕರವಾಗಿ ನಡೆಯುತ್ತಿದೆ. ಆಚಾರ್ಯರು ಅಂದು ಕಾಲಭೈರವರಾಗಿದ್ದಾರೆ. ಆ ಸಮಯದಲ್ಲಿ ಕೃಷ್ಣ ಹೇಳಿದ, 'ಈಗ ಎಲ್ಲರೂ ಜಯವನ್ನು ಮಾತ್ರ ಗಮನಿಸಿ. ಧರ್ಮಕ್ಕೆ ಈಗ ಎರಡನೆಯ ಸ್ಥಾನ. ಹಾಗೆ ಆಗದೆ ಹೋದರೆ ಎಲ್ಲರೂ ಧ್ವಂಸರಾಗಿ ಹೋಗುತ್ತಾರೆ. ದ್ರೋಣರು ಯುದ್ಧ ನಿಲ್ಲಿಸಬೇಕಾದರೆ ಅಶ್ವತ್ಥಾಮ ಸಾಯಬೇಕು. ನಿಮ್ಮಲ್ಲಿ ಯಾರಾದರೂ ಕೂಗಿಬಿಡಿ, 'ಅಶ್ವತ್ಥಾಮ ಸತ್ತ' ಎಂದು. ಅರ್ಜುನ ಅದಕ್ಕೆ ಒಪ್ಪಲಿಲ್ಲ. ಭೀಮ ಮಾತನ್ನು ಅರೆಸತ್ಯ ಮಾಡಲು, ಅಶ್ವತ್ಥಾಮ ಎಂಬ ಹೆಸರಿನ ಆನೆಯನ್ನು ಕೊಂದು ಅಶ್ವತ್ಥಾಮ ಸತ್ತ ಎಂದು ಕೂಗಿ ಆಚಾರ್ಯರಿಗೆ ಪುತ್ರ ಮರಣದ ಶಂಕೆಯನ್ನುಂಟು ಮಾಡಿದ. ಅವನ ಮಾತನ್ನು ನಂಬದೆ ಆಚಾರ್ಯರು ಯುಧಿಷ್ಠಿರನನ್ನು ಕೇಳಿದರು, 'ಅಹತಂ ವಾ ಹತಂ ವಾ?' ನನ್ನ ಮಗ ಸತ್ತನೆ, ಇಲ್ಲವೆ? ಧರ್ಮರಾಜ ಎಂದಿಗೂ ಸುಳ್ಳು ಹೇಳಲಾರ ಎಂಬ ನಂಬಿಕೆ ದ್ರೋಣಾಚಾರ್ಯರಿಗೆ. ಧರ್ಮರಾಯನಿಗೆ ಉಭಯಸಂಕಟ. ಅವನಿಗೆ ಸುಳ್ಳು ಹೇಳಲು ಭಯ ಆದರೆ ಜಯದಲ್ಲಿ ಆಸಕ್ತಿ. ಯೋಚಿಸಿ,

'ಅಶ್ವತ್ಥಾಮಾ ಹತ ಇತಿ ಶಬ್ದ ಮುಚ್ಚೈಶ್ಚಕಾರ ಹ |
ಅವ್ಯಕ್ತಮಬ್ರವೀದ್ ರಾಜನ್ ಹತಃ ಕುಂಜರ ಇತ್ಯುತ||

ಎಂದುಬಿಟ್ಟ. ಹಾಗೆಂದರೆ 'ಅಶ್ವತ್ಥಾಮ ಸತ್ತ' ಎಂದು ಗಟ್ಟಿಯಾಗಿ ಹೇಳಿ ಯಾರಿಗೂ ಕೇಳಿಸದಂತೆ ಮೆಲುವಾಗಿ 'ಸತ್ತದ್ದು ಆನೆ' ಎಂದ.

ಇದೊಂದು ಧರ್ಮದ್ವೈಧ. ಎರಡು ಧರ್ಮಗಳ ನಡುವೆ ಸಾಧಿಸಬೇಕಾದ ಸಮನ್ವಯತೆಯ ಸೂತ್ರ. ದ್ರೋಣರನ್ನು ಯುದ್ಧದಿಂದ ಬಿಡಿಸುವುದು ಮುಖ್ಯ ಧರ್ಮ. ಅದಾಗದಿದ್ದರೆ ಅಧರ್ಮಿಗಳಾಗಿದ್ದ ಕೌರವರಿಗೆ ಜಯ. ಈ ಧರ್ಮವನ್ನು ನಡೆಸಲು ಬೇಕಾದ ಉಪಾಯ ಸಹಕಾರಿ ಧರ್ಮ. ಕೆಲವೊಮ್ಮೆ ದೊಡ್ಡ ಧರ್ಮವನ್ನು ಕಾಪಾಡುವ ಅವಸರದಲ್ಲಿ ಒಂದು ಸಣ್ಣ ಧರ್ಮವನ್ನು ಬಿಡಬೇಕಾದೀತು. ದೊಡ್ಡ ಅಧರ್ಮವನ್ನು ತಡೆಗಟ್ಟಲು ಒಂದು ಸಣ್ಣ ಅಧರ್ಮವನ್ನು ಸಹಿಸಬೇಕು. ಕೊಳೆಯನ್ನು ಬಳಿದು ತೆಗೆಯುವಾಗ ಕೈಗೆ ಕೊಳೆ ಅಂಟಿಕೊಳ್ಳುವುದು ಸಹಜ.

ಅಂತೆಯೇ ಕೊನೆಗೆ ಧರ್ಮರಾಜನನ್ನು ಇಂದ್ರ ಸ್ವರ್ಗಕ್ಕೆ ಕರೆದುಕೊಂಡು ಹೋಗುವಾಗ, ನರಕದ ಮಾರ್ಗದಲ್ಲಿ ರಥವನ್ನು ನಡೆಸಿ ನರಕದರ್ಶನ ಮಾಡಿಸುತ್ತಾನೆ. ನರಕವಾಸ ತಪ್ಪಿದರೂ, ನರಕದರ್ಶನ ತಪ್ಪಲಿಲ್ಲ. ಅದು ಹೇಳಿದ ಸುಳ್ಳಿಗೆ ಪ್ರತಿಫಲ. ಈ ಮಾತನ್ನು ಕಗ್ಗ ತುಂಬ ಕಾವ್ಯಾತ್ಮಕವಾಗಿ ಹೇಳುತ್ತದೆ. ಪಾಪದ ವೃಕ್ಷವನ್ನು ಯಾರು, ಯಾವಾಗ ನೆಟ್ಟರೋ? ಅದರ ಫಲಗಳು ತಿಂದವನಿಗೆ ಮಾತ್ರವಲ್ಲ. ಬುಡದಲ್ಲಿ ಕುಳಿತವನಿಗೂ ತಟ್ಟುತ್ತವೆ. ಇದೊಂದು ಋಣದ ಜಾಲ, ಅದು ಅನಂತವಾದದ್ದು.


ಪದಬಂಧ 4796 - ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನಡುವೆ ಲಾಯ ಬಂದರೆ ಓಡಿಹೋಗುವಿಕೆ! (4)
3.ಮಂದಿಯ ಶಕ್ತಿ (4)
5.ದರ್ಪಣ ಇಲ್ಲದೆ (3)
6.ಸುಮ್ಮನಿರುವುದಲ್ಲ, ಇದು ಹಿಗ್ಗು! (3)
7.ಚಿಕ್ಕದಾಗಿರುವ ಗಣ ಪತಿ! (3)
9.ಮಾನಿನಿಯ ಗುಣದ ಬಗ್ಗೆಯೇ ಸಂಶಯ! (3)
11.ಗಲಾಟೆ ಇಲ್ಲಿ ಕಾಣುತ್ತಿದೆ (3)
12.ಗುಲಾಲು ಹಿಡಿದಿರುವ ಸೇವಕ (3)
13.ಈತ ನೈಪುಣ್ಯವುಳ್ಳವನು (4)
15.ತಿಂಡಿಪೋತನನ್ನು ಹೀಗೂ ಕರೆವರು (4)

ಮೇಲಿಂದ ಕೆಳಕ್ಕೆ

1.ಸದಭಿಪ್ರಾಯ ಸಂಪಾದನೆಗಾಗಿ ಕೊಡುವ ಹಣ (3)
2.ತಿರುಗಿ ನಿಂತಿರುವ ಮಂದಿ (2)
4.ತುಸುವೇ ಬೀರಿದ ಮಂದಹಾಸ (4)
5.ಕರದಿಂದ ಆರಂಭವಾದ ಉತ್ಸವ (3)
8.ಒಂದೇ ವಿಷಯದಲ್ಲಿ ಬಹಳ ಆಸಕ್ತನಾದವನು (4)
10.ಯಮ ಕೊನೆಗಿದ್ದಾಗಿನ ಸೂತ್ರ (3)
12.ಗುಣಿಸುವ ಸಂಖ್ಯೆಯಿದು (3)
14.ತತ್ತಿ ನೋಡಲು ಸೇರಿರುವ ಗುಂಪು (2)



4795ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
4.ಹೇನು 5.ಚಂದನ
6.ಜನಜನಿತ
9.ವಾರಿಜ 10.ಕಡಿತ
11.ಕಠಿನೆನಪು
14.ಇಂಗಿತ
15.ರಾಜಿ

ಮೇಲಿಂದ ಕೆಳಕ್ಕೆ:
1.ಅನುಜ 2.ಅವನಿ
3.ಮಂದಮಾರುತ
7.ಜಲಜನಕ 8.ತಪ್ಪುಕಲ್ಪನೆ
9.ವಾತರಗಿತ್ತಿ 12.ಹಿಕ್ಕತ್ತು
13.ಪುರಾವೆ

ಸುಡೊಕು 5182

7				1			8	2
	3	6	8		9	5		7
4			7				9	
	7							8
		4	9	3	8		7	1
8		1						
	8						4	
1		2		8		7		3
	4		1		7		2	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5181 ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

‘ಇಬ್ಬರ ಅಮಾನತು: ಎಸಿಬಿ ತನಿಖೆ’

ಒಂದನೇ ಪುಟದಿಂದ

'ಪ್ರಜಾವಾಣಿ'ಯ ಗುರುವಾರದ ಸಂಚಿಕೆಯಲ್ಲಿ 'ಹಿಂದುಳಿದವರ ಹಾಸ್ಟೆಲ್ ಟೆಂಡರ್ ಜಾಲ: ಐಲ್ಯಕ್ಕೆ ಕೆಜಿಗೆ ಕೇವಲ ₹ 20 !' ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟವಾಗಿತ್ತು. ಈ ಕುರಿತು ಉಡುಪಿಯಲ್ಲಿ ಮಾತನಾಡಿದ ಸಚಿವರು, 'ಅಕ್ರಮದಲ್ಲಿ ಭಾಗಿಯಾಗಿರುವ ಅಧಿಕಾರಿಗಳ ವಿರುದ್ಧ ನಿದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಹಾಗೂ ಎಲ್ಲ ಪ್ರಕರಣಗಳನ್ನು ಎಸಿಬಿ ತನಿಖೆಗೆ ಒಪ್ಪಿಸಲು ಸೂಚಿಸಿದ್ದೇನೆ. ಈ ಸಂಬಂಧ ಮುಖ್ಯಮಂತ್ರಿ ಜತೆಗೂ ಮಾತನಾಡಿದ್ದೇನೆ. ಶೀಘ್ರದಲ್ಲೇ ಹಿರಿಯ ಅಧಿಕಾರಿಗಳ ಸಭೆ ನಡೆಸಿ, ಅಕ್ರಮ ನಡೆಯದಂತೆ ಕ್ರಮಕೈಗೊಳ್ಳಲಾಗುವುದು' ಎಂದು ತಿಳಿಸಿದ್ದಾರೆ.

'ವರದಿಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಆಹಾರ ಪೂರೈಸುವಂತೆ ಈ ಹಿಂದೆಯೇ ಸೂಚಿಸಲಾಗಿದೆ. ಲೋಪವಾದರೆ ಇಲಾಖೆಯ ಜಿಲ್ಲಾ ಅಧಿಕಾರಿಗಳನ್ನೇ ನೇರ ಹೊಣೆ ಮಾಡಲಾಗುವುದು ಎಂದೂ ಎಚ್ಚರಿಕೆ ನೀಡಲಾಗಿದೆ. ಆಹಾರ ಸಾಮಗ್ರಿಯ ಪೂರೈಕೆಯಲ್ಲಿನ ಲೋಪವನ್ನು ಒಪ್ಪಲು ಸಾಧ್ಯ ಇಲ್ಲ. ಪ್ರಧಾನ ಕಾರ್ಯದರ್ಶಿ ನೀಡಿದ ಪ್ರಾಥಮಿಕ ವರದಿಯ ಶಿಫಾರಸಿನಂತೆ, ವಿಚಾರಣೆ ಕಾಯ್ದಿರಿಸಿ 'ಇಬ್ಬರನ್ನೂ ಅಮಾನತು ಮಾಡಲಾಗಿದೆ' ಎಂದು ಅವರು ವಿವರಿಸಿದ್ದಾರೆ.

'ಪತ್ರಿಕೆಯಲ್ಲಿ ಪ್ರಕಟವಾದ ವರದಿಯ ಅಂಶಗಳನ್ನು ಒಳಗೊಂಡಂತೆ ಸಮಗ್ರ ವಿಚಾರಣಾ ವರದಿಯನ್ನು 15 ದಿನಗಳ ಒಳಗೆ ಸಲ್ಲಿಸಲು ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಸೂಚಿಸಿದ್ದೇನೆ' ಎಂದು ತಿಳಿಸಿದ್ದಾರೆ.

ಓಮೈಕ್ರಾನ್ ಉಗಮ ಪತ್ತೆಗೆ ತಂಡ

ನೈರೋಬಿ, ಕೀನ್ಯಾ (ರಾಯಿಟರ್ಸ್): ಕೋವಿಡ್ ಹೊಸ ರೂಪಾಂತರ ತಳಿ ಓಮೈಕ್ರಾನ್ ಉಗಮ ಸ್ಥಾನದ ಕೇಂದ್ರಬಿಂದುವನ್ನು ಪತ್ತೆಹಚ್ಚಲು ದಕ್ಷಿಣ ಆಫ್ರಿಕಾದ ಗೌಟೆಂಗ್ ಪ್ರಾಂತ್ಯಕ್ಕೆ ತಂಡವೊಂದನ್ನು ನಿಯೋಜಿಸಲಾಗುವುದು ಎಂದು ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯುಎಚ್‌ಒ) ಗುರುವಾರ ಹೇಳಿದೆ.

ವೈರಸ್ ಮೇಲೆ ಕಣ್ಗಾವಲು ಇಡಲು ಮತ್ತು ಸಂಪರ್ಕ ಪತ್ತೆಹಚ್ಚುವಿಕೆಗೆ ಇದರಿಂದ ಸಹಾಯವಾಗುತ್ತದೆ. ಓಮೈಕ್ರಾನ್ ಪತ್ತೆಯಾದ ಸ್ಥಳದಲ್ಲಿ ಅಗತ್ಯ ವೈದ್ಯಕೀಯ ಆಮ್ಲಜನಕ ಉತ್ಪಾದಿಸಲು ಮತ್ತು ನೆರವು ಹೆಚ್ಚಿಸಲು ತಂಡವು ತಾಂತ್ರಿಕ ನೆರವು ನೀಡುತ್ತದೆ ಎಂದು ಡಬ್ಲ್ಯುಎಚ್‌ಒನ ಆಫ್ರಿಕಾದ ಪ್ರಾದೇಶಿಕ ತುರ್ತು ನಿರ್ದೇಶಕ ಸಲಾಮ್ ಗುಯೆ ಹೇಳಿದರು.

ಪರಮ್‌ಬೀರ್ ಸಿಂಗ್ ಅಮಾನತು

ಮುಂಬೈ (ಪಿಟಿಐ): ಮುಂಬೈನ ಮಾಜಿ ಪೊಲೀಸ್ ಆಯುಕ್ತ ಪರಮ್‌ಬೀರ್ ಸಿಂಗ್ ಅವರನ್ನು ಮಹಾರಾಷ್ಟ್ರ ಸರ್ಕಾರ ಗುರುವಾರ ಅಮಾನತುಗೊಳಿಸಿದೆ. ಕೆಲವು ಅಕ್ರಮಗಳು ಮತ್ತು ಲೋಪಗಳ ಕಾರಣದಿಂದಾಗಿ ಅವರ ವಿರುದ್ಧ ಕ್ರಮಕೈಗೊಳ್ಳಲಾಗಿದೆ ಎಂದು ತಿಳಿಸಲಾಗಿದೆ.

ಮೊರಾದಾಬಾದ್‌ನಲ್ಲಿ ಗುರುವಾರ ಸಾರ್ವಜನಿಕ ರ‍್ಯಾಲಿ: ಬಿಜೆಪಿ ವಿರುದ್ಧ ವಾಗ್ದಾಳಿ

ಮೋದಿಯನ್ನು ಕ್ಷಮಿಸದಿರಿ: ಪ್ರಿಯಾಂಕಾ

ಪ್ರಜಾವಾಣಿ ವಾರ್ತೆ



ಮೊರಾದಾಬಾದ್‌ನಲ್ಲಿ ಸಾರ್ವಜನಿಕ ರ‍್ಯಾಲಿ ನಡೆಸಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ

ಪ್ರಜಾ ಮತ ಜನತಂತ್ರದ ಹಬ್ಬ 2021

ಲಖನೌ: ರೈತರ ಮೇಲೆ ನಡೆಸಿದ ದಬ್ಬಾಳಿಕೆಗಾಗಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಕ್ಷಮಿಸಬೇಡಿ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಮೊರಾದಾಬಾದ್‌ನಲ್ಲಿ ಗುರುವಾರ ನಡೆದ ಸಾರ್ವಜನಿಕ ರ‍್ಯಾಲಿಯಲ್ಲಿ ಹೇಳಿದರು.

'ರೈತರನ್ನು ದಿನವೂ ಅವಮಾನ ಮಾಡಿದರು. ದೇಶದ್ರೋಹಿ, ಆಂದೋಲನ ಜೀವಿ ಮತ್ತು ಖಲಿಸ್ತಾನಿ ಎಂದು ಕರೆದರು. ಚುನಾವಣೆ ಸನ್ನಿಹಿತವಾಗುತ್ತಿರುವುದರಿಂದ ಈಗ ಕ್ಷಮೆ ಕೇಳಿದ್ದಾರೆ. ನೀವು ಏಕೆ ಅವರನ್ನು ಕ್ಷಮಿಸಬೇಕು. ಅವರ ತಪ್ಪಿಗೆ ಅವರನ್ನು ಹೊಣೆಯನ್ನಾಗಿಸಿ' ಎಂದರು.

ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಬಿಜೆಪಿ ಸರ್ಕಾರಗಳು ಅಭಿವೃದ್ಧಿ ಕುರಿತು ಯೋಚಿಸುವುದಿಲ್ಲ. ಧರ್ಮ ಮತ್ತು ಜಾತಿಯ ಆಧಾರದ ಮೇಲೆ ಜನರನ್ನು ಒಡೆದು ತಾವು ಅಧಿಕಾರಕ್ಕೆ ಬರಬಹುದು ಎಂದು ಅವರು ಭಾವಿಸಿದ್ದಾರೆ. ಉತ್ತರ ಪ್ರದೇಶದಲ್ಲಿ ಕೋಮುವಾದ ಮತ್ತು ಜಾತಿ ಆಧಾರಿತ ರಾಜಕೀಯಕ್ಕೆ ಆದ್ಯತೆ ಸಿಗುತ್ತಿದೆ. ರಾಜ್ಯವನ್ನು ಅಭಿವೃದ್ಧಿಪಡಿಸಬೇಕಿಲ್ಲ, ಧರ್ಮ ಮತ್ತು ಜಾತಿ ಬಳಸಿಕೊಂಡು ಚುನಾವಣೆ ಗೆಲ್ಲಬಹುದು ಎಂದು ಮುಖ್ಯಮಂತ್ರಿ ತಿಳಿದಿದೆ. ನೀವು ಅದನ್ನು ಬದಲಿಸಬೇಕು ಎಂದು ಎಂದರು.

ಹಿತ್ತಾಳೆ ಸಾಮಾಗ್ರಿಗಳನ್ನು ರಫ್ತು ಮಾಡಲು ಹೆಸರಾಗಿರುವ ಆಗಿದ್ದ ಕಾರಣ 'ಹಿತ್ತಾಳೆ ನಗರ' ಎಂದು ಕರೆಯಲಾಗುವ ಮೊರಾದಾಬಾದ್ ನಗರದ ಕುರಿತು ಅವರು ಭಾವನಾತ್ಮಕವಾಗಿ ಮಾತನಾಡಿದರು. ಒಂದು ಕಾಲದಲ್ಲಿ ಅಭಿವೃದ್ಧಿ ಹೊಂದಿದ್ದ ನಗರವಾದ ಮೊರಾದಾಬಾದ್‌ನಲ್ಲಿ ಈಗ ವಾಣಿಜ್ಯ ವ್ಯವಹಾರಗಳು ಸ್ಥಗಿತಗೊಂಡಿವೆ. ನಿರುದ್ಯೋಗ ಸಮಸ್ಯೆ ಕಾಡುತ್ತಿದೆ ಎಂದರು. ತಪ್ಪು ಆರ್ಥಿಕ ನೀತಿಗಳಿಂದ, ರಾಜ್ಯ ಮತ್ತು ಕೇಂದ್ರ ಸರ್ಕಾರದ ನಿರ್ಲಕ್ಷ್ಯದಿಂದ ಈ ನಗರ ಈ ಸ್ಥಿತಿ ತಲುಪಿದೆ ಎಂದರು.

ಎಸ್‌ಪಿ, ಬಿಎಸ್‌ಪಿ ವಿರುದ್ಧವಾಗ್ದಾಳಿ: ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಮತ್ತು ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್ ಅವರ ವಿರುದ್ಧ ಪ್ರಿಯಾಂಕಾ ಇದೇ ಮೊದಲ ಬಾರಿಗೆ ವಾಗ್ದಾಳಿ ನಡೆಸಿದ್ದಾರೆ. ಈ ಇಬ್ಬರು ನಾಯಕರು ಬಿಜೆಪಿ ನಾಯಕರು ಮಾತನಾಡುವ ರೀತಿಯಲ್ಲೇ ಮಾತನಾಡುತ್ತಿದ್ದಾರೆ. ಅವರು ಕೂಡಾ ಧರ್ಮ ಮತ್ತು ಜಾತಿ ಆಧಾರಿತ ರಾಜಕೀಯದಲ್ಲಿ ತೊಡಗಿದ್ದಾರೆ.

ಹಾಥರಸ್‌ನಲ್ಲಿ ದಲಿತ ಬಾಲಕಿಯ ಮೇಲೆ ಅತ್ಯಾಚಾರ ನಡೆದಾಗ ಮತ್ತು ಸಿಎಎ ಹೋರಾಟಗಾರರನ್ನು ಪೊಲೀಸರು ಗುರಿಪಡಿಸಿ ಕೊಂದಾಗ ಅಖಿಲೇಶ್ ಎಲ್ಲಿದ್ದರು. ಸಂತ್ರಸ್ತರ ಕುಟುಂಬಗಳನ್ನು ಎಂದಾದರೂ ಭೇಟಿ ಮಾಡಿದ್ದಾರಾ? ಈಗ ಜನರ ಬಳಿ ಹೋಗುತ್ತಿದ್ದಾರೆ ಎಂದು ಪ್ರಶ್ನಿಸಿದರು.

ಯುವಜನರು ಉದ್ಯೋಗಕ್ಕೆ ಇನ್ನೆಷ್ಟು ಕಾಯಬೇಕು: ವರುಣ್ ಗಾಂಧಿ ಪ್ರಶ್ನೆ

ನವದೆಹಲಿ (ಪಿಟಿಐ): 'ಸರ್ಕಾರಿ ಉದ್ಯೋಗದ ಅವಕಾಶಗಳು ಕಡಿಮೆಯಾಗಿವೆ. ಯುವಜನರು ಭ್ರಮನಿರಸನಗೊಂಡಿದ್ದಾರೆ. ಅವರು ಇನ್ನೂ ಎಷ್ಟು ದಿನ ತಾಳ್ಮೆಯಿಂದ ಕಾಯಬೇಕು' ಎಂದು ಬಿಜೆಪಿ ಸಂಸದ ವರುಣ್ ಗಾಂಧಿ ಗುರುವಾರ ಪ್ರಶ್ನಿಸಿದ್ದಾರೆ.

'ಗ್ರಾಮೀಣ ಯುವಜನರಿಗೆ ಸರ್ಕಾರಿ ನೌಕರಿ ಸಿಗುವ ಅವಕಾಶಗಳೇ ಕುಗ್ಗಿವೆ. ಇನ್ನೊಂಡೆಡೆ, ಸರ್ಕಾರದ ರಕ್ಷಣೆ, ಪೊಲೀಸ್, ರೈಲ್ವೆ ಇಲಾಖೆ, ಶಿಕ್ಷಣ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಕಡಿಮೆ ಪ್ರಮಾಣದಲ್ಲಿ ನೇಮಕಾತಿ ಮಾಡುತ್ತಿವೆ' ಎಂದಿದ್ದಾರೆ.

'ಮೊದಲಿಗೆ ಸರ್ಕಾರಿ ಉದ್ಯೋಗಕ್ಕೆ ನೇಮಕಾತಿ ಆಗುತ್ತಿಲ್ಲ. ಪ್ರಕ್ರಿಯೆ ನಡೆದರೂ ಪ್ರಶ್ನೆಪತ್ರಿಕೆಯ ಸೋರಿಕೆ ಆಗುತ್ತದೆ. ವರ್ಷಗಟ್ಟಲೆ ಫಲಿತಾಂಶ ಬರುವುದಿಲ್ಲ ಅಥವಾ ಹಗರಣ ನಡೆದು ಪ್ರಕ್ರಿಯೆಯೇ ರದ್ದಾಗುತ್ತದೆ. ರೈಲ್ವೆ ಇಲಾಖೆಯ 'ಡಿ ಗ್ರೂಪ್' ಹುದ್ದೆಗಳಿಗೆ 1.25 ಕೋಟಿ ಯುವಜನರು ಕಾಯುತ್ತಿದ್ದಾರೆ. ಸೇನೆ ನೇಮಕಾತಿಯಲ್ಲೂ 'ಇದೇ ಪರಿಸ್ಥಿತಿ ಇದೆ' ಎಂದು ಟ್ವೀಟ್ ಮಾಡಿದ್ದಾರೆ. ಉತ್ತರ ಪ್ರದೇಶದಲ್ಲಿ ಎರಡು ವರ್ಷದಲ್ಲಿ 17 ಪರೀಕ್ಷೆಗಳು ರದ್ದಾಗಿವೆ. ತಪ್ಪಿತಸ್ಥರನ್ನು ಪತ್ತೆ ಹಚ್ಚಿಲ್ಲ. ಖಾಸಗಿ ಉದ್ಯೋಗ ಒದಗಿಸಲು ವ್ಯವಸ್ಥೆ ಇಲ್ಲ. ನೇಮಕಾತಿ ಪ್ರಕ್ರಿಯೆ ನಿರ್ದಿಷ್ಟವಾದ ವೇಳಾಪಟ್ಟಿ ಅತ್ಯಗತ್ಯವಾದ ಎಂದು ಪ್ರತಿಪಾದಿಸಿದ್ದಾರೆ.

ಎಐಎಡಿಎಂಕೆ: 7ರಂದು ಸಾಂಸ್ಥಿಕ ಚುನಾವಣೆ

ಪ್ರಜಾವಾಣಿ ವಾರ್ತೆ

ಚೆನ್ನೈ: ಉಚ್ಚಾಟಿತ ಪ್ರಧಾನ ಕಾರ್ಯದರ್ಶಿ ವಿ.ಕೆ. ಶಶಿಕಲಾ ಅವರು ಪಕ್ಷವನ್ನು ತಮ್ಮ ಹಿಡಿತಕ್ಕೆ ಪಡೆಯುವ ಯಾವುದೇ ಪ್ರಯತ್ನವನ್ನು ತಡೆಯಲು ಮತ್ತೊಂದು ಹೆಜ್ಜೆ ಇಟ್ಟಿರುವ ಎಐಎಡಿಎಂಕೆ ಡಿಸೆಂಬರ್ 7 ರಂದು ಪಕ್ಷದ ಸಂಯೋಜಕ ಮತ್ತು ಜಂಟಿ ಸಂಯೋಜಕರ ಹುದ್ದೆಗಳ ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಿದೆ.

24 ಗಂಟೆಗಳಲ್ಲಿ ವರದಿ: ಕೇಂದ್ರ, ದೆಹಲಿ ಸರ್ಕಾರಕ್ಕೆ ‘ಸುಪ್ರೀಂ’ ತಾಕೀತು

‘ವಾಯುಮಾಲಿನ್ಯ ತಡೆಗೆ ತುರ್ತುಕ್ರಮ’

ನವದೆಹಲಿ (ಪಿಟಿಐ): ‘ತುರ್ತು ಸಂದರ್ಭಗಳಿಗೆ ತುರ್ತು ಕ್ರಮ ಅಗತ್ಯ’ ಎಂದಿರುವ ಸುಪ್ರೀಂ ಕೋರ್ಟ್, ರಾಜಧಾನಿಯಲ್ಲಿ ವಾಯುಮಾಲಿನ್ಯ ತಡೆಗೆ ಕೈಗೊಂಡಿರುವ ಸ್ಪಷ್ಟ ಕ್ರಮಗಳ ಬಗ್ಗೆ 24 ಗಂಟೆಯಲ್ಲಿ ಮಾಹಿತಿ ನೀಡಬೇಕು’ ಎಂದು ಕೇಂದ್ರ ಮತ್ತು ದೆಹಲಿ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ವಾಯುಮಾಲಿನ್ಯ ಹೆಚ್ಚಳ ಕುರಿತಂತೆ ಉಭಯ ಸರ್ಕಾರಗಳ ವಿರುದ್ಧ ಹರಿಹಾಯ್ದಿರುವ ಕೋರ್ಟ್, ಕೈಗೊಂಡಿರುವ ನಿಯಂತ್ರಣ ಕ್ರಮಗಳು ಫಲನೀಡು-ತ್ತಿಲ್ಲ ಎಂದಾದರೆ ನೀವು ಇನ್ನಷ್ಟು ಸೃಜನಶೀಲವಾಗಿ ಕಾರ್ಯನಿರ್ವಹಿಸಬೇ-ಕು‘ ಎಂದು ತಾಕೀತು ಮಾಡಿತು.

ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ಪೀಠವು, ‘ನಾವು ವಿಶೇಷವಾಗಿ ಏನಾದರೂ ಮಾಡಬೇಕು. ಅಧಿಕಾರಶಾಹಿಗೆ ಬಲವಂತವಾಗಿ ಸೃಜನಶೀಲತೆ ತುಂಬಲಾಗದು. ನೀವೇ ಕ್ರಮ ತೆಗೆದುಕೊಳ್ಳಬೇಕು’ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ ತಿಳಿಸಿತು.

ವಾಯುಮಾಲಿನ್ಯದ ನಿಯಂತ್ರಣ ಕುರಿತಂತೆ ಸರ್ಕಾರದ ಮೇಲೂ ಸಮಾನ ಹೊಣೆಗಾರಿಕೆ ಇದೆ. ನೀವು ಕ್ರಮ ಜರುಗಿಸದೇ ಇದ್ದರೆ ನಾವೇ ಸೂಚನೆ ನೀಡುತ್ತೇವೆ. ನಮ್ಮ ಮನದಲ್ಲಿ ಈ ಸಂಬಂಧ ವಿಭಿನ್ನವಾದ ಕ್ರಮಗಳಿವೆ ಎಂದು ಪೀಠವು ಎಚ್ಚರಿಸಿತು.

ವಾಯು ಗುಣಮಟ್ಟ ಪರಿಸ್ಥಿತಿಯ ಮೇಲುಸ್ತುವಾರಿಗಾಗಿ ಸ್ವತಂತ್ರ ಪ್ರಾಧಿ-ಕಾರವನ್ನು ನೇಮಿಸುವ ಸೂಚನೆಯನ್ನು ಪೀಠ ಇದೇ ಸಂದರ್ಭದಲ್ಲಿ ನೀಡಿತು. ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಸೂರ್ಯಕಾಂತ್ ಅವರು ನ್ಯಾಯಪೀಠದ ಇತರ ಸದಸ್ಯ-ರಾಗಿದ್ದಾರೆ.

ವಾಯು ಗುಣಮಟ್ಟ ನಿರ್ವಹಣೆ ಪ್ರಾಧಿಕಾರದ ಅಸ್ತಿತ್ವವನ್ನು ಪ್ರಶ್ನಿಸಿದ ನ್ಯಾಯಪೀಠವು, ‘ವಿವಿಧ ಇಲಾಖೆಗಳಲ್ಲಿ ಅಧಿಕಾರಿಗಳಿದ್ದಾರೆ. ಆದರೆ, ನಿರ್ಧಾರ ಕೈಗೊಳ್ಳುವ, ಜಾರಿಗೊಳಿಸುವ ಅಧಿಕಾರ ಇಲ್ಲ ಎಂದಾದಲ್ಲಿ ಈ ಪ್ರಾಧಿಕಾರದ ಅಗತ್ಯವೇನು?’ ಎಂದು ಪ್ರಶ್ನಿಸಿತು.

ಗುರುವಾರ ದೆಹಲಿಯಲ್ಲಿ ವಾಯು ಗುಣಮಟ್ಟ ಸೂಚ್ಯಂಕ 429 ದಾಖಲಾಗಿದ್ದು, ಇದು ಪರಿಸ್ಥಿತಿ ಗಂಭೀರವಾಗಿದೆ ಎಂಬುದರ ಸೂಚನೆ. ನಮ್ಮ ಆದೇಶದ ನಂತರವೂ ವಾಯುಮಾಲಿನ್ಯ ಹೆಚ್ಚುತ್ತಲೇ ಇದೆ, ಎಲ್ಲಿ ಕಡಿಮೆಯಾಗುತ್ತಿದೆ ಎಂದು ಪ್ರಶ್ನಿಸಿತು.

ಪರಿಸ್ಥಿತಿ ಹೀಗಾದರೆ 20–30 ಸದಸ್ಯರ ಸಮಿತಿ (ವಾಯು ಗುಣಮಟ್ಟ ಪ್ರಾಧಿಕಾರದ) ಉಪಯೋಗ ಏನು? ಇದು, ಬೊಕ್ಕಸಕ್ಕೆ ಹೊರೆಯಲ್ಲದೇ ಬೇರೇನೂ ಅಲ್ಲ ಎಂದು ಪೀಠ ಹೇಳಿತು. ಶುಕ್ರವಾರಕ್ಕೆ ವಿಚಾರಣೆಯನ್ನು ಮುಂದೂಡಲಾಯಿತು.

ದೆಹಲಿ ಶಾಲೆ: ಭೌತಿಕ ತರಗತಿ ಬಂದ್

ನವದೆಹಲಿ (ಪಿಟಿಐ): ವಾಯುಮಾಲಿನ್ಯ ಹೆಚ್ಚಳದ ಕಾರಣ ದೆಹಲಿ ಶಾಲೆಗಳಲ್ಲಿ ಭೌತಿಕ ತರಗತಿಗಳನ್ನು ಶುಕ್ರವಾರದಿಂದ ಮುಂದಿನ ಆದೇಶದವರೆಗೆ ಸ್ಥಗಿತಗೊ-ಳಿಸಲಾಗುವುದು ಎಂದು ದೆಹಲಿ ಪರಿಸರ ಸಚಿವ ಗೋಪಾಲ್ ರೈ ಗುರುವಾರ ತಿಳಿಸಿದ್ದಾರೆ.

ಆನ್‌ಲೈನ್ ತರಗತಿಗಳು ಮುಂದುವರಿಯಲಿವೆ. ಬೋರ್ಡ್ ಪರೀಕ್ಷೆಗಳು ನಿಗದಿತ ವೇಳಾಪಟ್ಟಿಯಂತೆ ನಡೆಯಲಿವೆ ಎಂದು ಅವರು ಹೇಳಿದ್ದಾರೆ.

ಓಮೈಕ್ರಾನ್ ತಡೆಗೆ 100 ದಿನಗಳಲ್ಲಿ ಲಸಿಕೆ: ಫೈಝರ್

ಲಂಡನ್ (ಪಿಟಿಐ): ‘ಓಮೈಕ್ರಾನ್ ರೂಪಾಂತರ ತಳಿಯ ಕೊರೊನಾ ವೈರಾಣುವನ್ನು ತಡೆಯುವ ಲಸಿಕೆಯನ್ನು ಅಭಿವೃದ್ಧಿಪಡಿಸುತ್ತಿದ್ದೇವೆ. 100 ದಿನಗಳಲ್ಲಿ ಲಸಿಕೆ ಸಿದ್ಧವಾಗುವ ಸಾಧ್ಯತೆ ಇದೆ’ ಎಂದು ಫೈಝರ್ ಕಂಪನಿ ಹೇಳಿದೆ.

‘ಕೋವಿಡ್ ತಡೆಗಟ್ಟಲು ಹಲವು ವರ್ಷಗಳ ಕಾಲ, ವಾರ್ಷಿಕ ಕೋವಿಡ್ ಲಸಿಕೆ ಹಾಕಿಸಬೇಕಾಗುತ್ತದೆ. ಆಗ ಮಾತ್ರ ಜನರು ಕೋವಿಡ್‌ನಿಂದ ರಕ್ಷಣೆ ಪಡೆಯಲು ಸಾಧ್ಯವಾಗುತ್ತದೆ’ ಎಂದು ಫೈಝರ್ ಹೇಳಿದೆ.

ಬೋಟ್ಸ್‌ವಾನದಲ್ಲಿ ಫೈಝರ್ ಕಂಪನಿಯ ಲಸಿಕೆ ಹಾಕಿಸಿಕೊಂಡಿದ್ದ ವ್ಯಕ್ತಿಗೂ ಓಮೈಕ್ರಾನ್‌ನಿಂದ ಕೋವಿಡ್ ತಗುಲಿತ್ತು. ಹೀಗಾಗಿ ತನ್ನ ಕಂಪನಿ ಓಮೈಕ್ರಾನ್ ವಿರುದ್ಧ ಪರಿಣಾಮಕಾರಿಯೇ ಎಂಬುದನ್ನು ಪತ್ತೆ ಮಾಡಲು ಫೈಝರ್ ಕ್ರಮ ತೆಗೆದುಕೊಂಡಿತ್ತು.

ಶಿವಮೊಗ್ಗ: 29 ನರ್ಸಿಂಗ್ ವಿದ್ಯಾರ್ಥಿಗಳಿಗೆ ಕೋವಿಡ್

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಇಲ್ಲಿಯ ಗಾಡಿಕೊಪ್ಪ ಸಮೀಪದ ನಂಜಪ್ಪ ಲೈಫ್ ಕೇರ್ ಆಸ್ಪತ್ರೆಯ ನರ್ಸಿಂಗ್ ಕಾಲೇಜಿನ 29 ವಿದ್ಯಾರ್ಥಿಗಳಲ್ಲಿ ಕೊರೊನಾ ಸೋಂಕು ಇರುವುದು ದೃಢಪಟ್ಟಿದೆ. ಇವರಲ್ಲಿ 23 ವಿದ್ಯಾರ್ಥಿಗಳು ಕೇರಳದವರು ಎಂದು ಜಿಲ್ಲಾಧಿಕಾರಿ ಕೆ.ಬಿ. ಶಿವಕುಮಾರ್ ತಿಳಿಸಿದ್ದಾರೆ.

ಕೇರಳದಿಂದ ನವೆಂಬರ್ 23 ರಂದು ವಾಪಸಾಗಿದ್ದ 23 ನರ್ಸಿಂಗ್ ವಿದ್ಯಾರ್ಥಿಗಳು ಸೇರಿ ವಸತಿನಿಲಯದ-ಲ್ಲಿದ್ದ 384 ವಿದ್ಯಾರ್ಥಿಗಳಿಗೆ ಬುಧವಾರ ಕೋವಿಡ್ ಪರೀಕ್ಷೆ ಮಾಡಲಾಗಿತ್ತು.

ಈ ವಿದ್ಯಾರ್ಥಿಗಳು ರಜೆಯಲ್ಲಿ ತವರಿಗೆ ಹೋಗಿದ್ದರು. ರಜೆ ಅವಧಿ ಮುಗಿದು, ಪರೀಕ್ಷೆ ಇದ್ದುದರಿಂದ ಮಂಗಳವಾರ ಕಾಲೇಜಿಗೆ ಮರಳಿದ್ದರು. ಕೇರಳದಿಂದ ಬರುವಾಗ ನೆಗೆಟಿವ್ ವರದಿಯನ್ನು ತಂದಿದ್ದರು. ಬಂದ ನಂತರ ಒಂದು ವಾರ ಅವರನ್ನು ಕ್ವಾರಂಟೈನ್ ಮಾಡಲಾಗಿತ್ತು.

ವಿದ್ಯಾರ್ಥಿಗಳಿಗೆ ಕೋವಿಡ್ ದೃಢ-ವಾಗುತ್ತಿದ್ದಂತೆ ಅವರ ಪ್ರಾಥಮಿಕ ಸಂಪರ್ಕದಲ್ಲಿರುವವರ ಪತ್ತೆ ಕಾರ್ಯ ಆರಂಭಿಸಲಾಗಿದೆ. ಗುರುವಾರ ನಂಜಪ್ಪ ಲೈಫ್ ಕೇರ್ ಆಸ್ಪತ್ರೆ, ನರ್ಸಿಂಗ್ ಕಾಲೇಜಿನ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಸೇರಿ 800ಕ್ಕೂ ಹೆಚ್ಚು ಮಂದಿಗೆ ಕೋವಿಡ್ ಪರೀಕ್ಷೆ ಮಾಡಲಾಗಿದೆ. ಸೋಂಕಿತ ವಿದ್ಯಾರ್ಥಿಗಳ ಪ್ರಾಥಮಿಕ ಸಂಪರ್ಕದ-ಲ್ಲಿದ್ದ ಆಸ್ಪತ್ರೆ ಸಿಬ್ಬಂದಿಯಲ್ಲಿ 9 ಮಂದಿಗೆ ಸೋಂಕು ಇರುವುದು ದೃಢವಾಗಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಆಸ್ಪತ್ರೆಯ ಒಪಿಡಿ, ನರ್ಸಿಂಗ್ ಕಾಲೇಜು, ಹಾಸ್ಟೆಲ್ ಬಂದ್ ಮಾಡಲಾಗಿದೆ. ಆಸ್ಪತ್ರೆ ಆವರಣದೊಳಗೆ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಲಾಗಿದೆ.

ಕೋವಿಡ್: ಅನಾಥ ಮಕ್ಕಳ ಮಾರಾಟ ಜಾಲ ಪತ್ತೆ

ಪ್ರಜಾವಾಣಿ ವಾರ್ತೆ

ಶ್ರೀನಗರ: ಕೋವಿಡ್‌ನಿಂದ ಅನಾಥಗೊಂಡ ಮಕ್ಕಳ ಮಾರಾಟ ಜಾಲವನ್ನು ಗುರುವಾರ ಜಮ್ಮು ಮತ್ತು ಕಾಶ್ಮೀರ ಪೊಲೀಸರು ಪತ್ತೆ ಹಚ್ಚಿದ್ದು, ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

ಮಕ್ಕಳ ಮಾರಾಟದ ಆರೋಪದ ಹಿನ್ನೆಲೆಯಲ್ಲಿ ಜಿಲ್ಲಾ ಆಡಳಿತ ಹಾಗೂ ಸ್ಥಳೀಯ ಪೊಲೀಸರು ಗುರುವಾರ ಗ್ಲೋಬಲ್ ವೆಲ್‌ಫೇರ್ ಚಾರಿಟಬಲ್ ಟ್ರಸ್ಟ್ ಮೇಲೆ ದಾಳಿ ನಡೆಸಿದ್ದು, ಮೊಹಮ್ಮದ್ ಅಮಿನ್ ರಾಥೋರ್, ಅಜಾಜ್ ಅಹಮದ್ ದಾರ್ ಎಂಬುವವರನ್ನು ಬಂಧಿಸಿದ್ದಾರೆ. ಸ್ವಯಂ ಸೇವಾ ಸಂಸ್ಥೆಗೆ ಬೀಗ ಹಾಕಲಾಗಿದೆ. ಮಹತ್ವದ ದಾಖಲೆಗಳನ್ನು ವಶಪಡಿಸಿಕೊಂಡಿ-ದ್ದಾರೆ.

ಕೋವಿಡ್‌ನಿಂದ ಮರಣ ಹೊಂದಿದ ನಾಗರಿಕರ ಮಕ್ಕಳನ್ನು ಮಾರಾಟ ಮಾಡಲಾಗುತ್ತಿದೆ ಹಾಗೂ ಅನಾಥ ನವಜಾತ ಶಿಶುಗಳನ್ನು ಆಸ್ಪತ್ರೆಗಳಿಂದ ಕದ್ದೊಯ್ದು ದತ್ತು ಪಡೆಯಲಾಗುತ್ತಿದೆ ಎಂದು ಮಾಧ್ಯ-ಮಗಳಲ್ಲಿ ವರದಿಯಾಗಿದ್ದ ಹಿನ್ನೆಲೆಯಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಸಮಿತಿಯು ಪೊಲೀಸರಿಗೆ ದೂರು ನೀಡಿತ್ತು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ರಾಜ್ಯದಲ್ಲಿ ಓಮೈಕ್ರಾನ್ ಪತ್ತೆ

ಒಂದನೇ ಪುಟದಿಂದ

ಈ ಐವರ ಪ್ರತ್ಯೇಕವಾಸ-ಕ್ಕೆ ಬಿಬಿಎಂಪಿ ವ್ಯವಸ್ಥೆ ಮಾಡಿದ್ದು, ಅವರ ಮಾದರಿಗಳನ್ನು ವೈರಾಣುವಿನ ವಂಶವಾಹಿ ಸಂರಚನಾ ವಿಶ್ಲೇಷಣೆಗೆ (ಜೀನೋಮ್ ಸೀಕ್ವೆನ್ಸಿಂಗ್) ಕಳುಹಿಸಿದೆ.

ಓಮೈಕ್ರಾನ್ ಸೋಂಕಿತರಿಬ್ಬರ ಜೊತೆ ನೇರ ಸಂಪರ್ಕ ಹೊಂದಿದ್ದ 37 ಮಂದಿಯನ್ನು ಹಾಗೂ ಪರೋಕ್ಷ ಸಂಪರ್ಕ ಹೊಂದಿದ್ದ 445 ಮಂದಿಯನ್ನು ಬಿಬಿಎಂಪಿಯಿಂದಲೇ ಪ್ರತ್ಯೇಕವಾಸಕ್ಕೆ ಒಳಪಡಿಸಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, ‘ದಕ್ಷಿಣ ಆಫ್ರಿಕಾದ ಪ್ರಜೆಯ (66 ವರ್ಷ) ಪ್ರತ್ಯೇಕವಾಸಕ್ಕೆ ಹೋಟೆಲ್‌ನಲ್ಲಿ ವ್ಯವಸ್ಥೆ ಮಾಡಿದ್ದೆವು. 24 ಮಂದಿ ಅವರ ನೇರ ಸಂಪರ್ಕಕ್ಕೆ ಬಂದಿದ್ದರು. 240 ಮಂದಿ ಪರೋಕ್ಷವಾಗಿ ಅವರ ಸಂಪರ್ಕಕ್ಕೆ ಬಂದಿದ್ದರು. ಸಂಪರ್ಕಿತರೆಲ್ಲರನ್ನು ಪರೀಕ್ಷೆಗೆ ಒಳಪಡಿಸಿದ್ದು, ಯಾರಿಗೂ ಕೋವಿಡ್ ಇಲ್ಲ’ ಎಂದು ಸ್ಪಷ್ಟಪಡಿ-ಸಿದರು.

‘ಸ್ಥಳೀಯ ವ್ಯಕ್ತಿ ಮನೆಯಲ್ಲೇ ಪ್ರ-ತ್ಯೇಕವಾಸವಾಗಿದ್ದರು. ಅವರು ಈಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಗುಣಮುಖರಾಗುತ್ತಿದ್ದಾರೆ. ಈ ಕುರಿತ ಹೆಚ್ಚಿನ ವಿವರ ಬಹಿರಂಗಪಡಿಸ-ಲಾಗದು’ ಎಂದರು. ‘ಓಮೈಕ್ರಾನ್ ಸೋಂಕಿತ ಸ್ಥಳೀಯ ವ್ಯಕ್ತಿಯ ನೇರ ಸಂಪರ್ಕಕ್ಕೆ ಬಂದ 13 ಮಂದಿ ಹಾಗೂ ಪರೋಕ್ಷವಾಗಿ ಸಂಪರ್ಕಕ್ಕೆ ಬಂದ 205 ಮಂದಿಯನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಿದ್ದೇವೆ’ ಎಂದರು.

‘ಓಮೈಕ್ರಾನ್ ಸೋಂಕಿತರ ಚಿಕಿತ್ಸೆಗೆ ಬೌರಿಂಗ್ ಆಸ್ಪತ್ರೆಯನ್ನು ಗೊತ್ತುಪಡಿಸ-ಲಾಗಿದೆ. ಓಮೈಕ್ರಾನ್ ಸೋಂಕಿತರ ನೇರ ಹಾಗೂ ಪರೋಕ್ಷವಾಗಿ ಸಂಪರ್ಕಕ್ಕೆ ಬಂದವರು ಯಾರೂ ಮನೆಯಲ್ಲೇ ಪ್ರತ್ಯೇಕವಾಸಕ್ಕೆ ಒಳಗಾಗುವುದಕ್ಕೆ ಅವಕಾಶ ಕಲ್ಪಿಸಿಲ್ಲ’ ಎಂದು ಪ್ರಶ್ನೆಯೊಂ-ದಕ್ಕೆ ಉತ್ತರಿಸಿದರು.

‘ಹಿಂದೆ ಜೀನೋಮ್ ಸೀಕ್ವೆನ್ಸಿಂಗ್ ಫಲಿತಾಂಶ ಬರಲು ಎರಡು ತಿಂಗಳುಗಟ್ಟಲೆ ಕಾಯಬೇಕಿತ್ತು. ಈಗ ಇದರ ಫಲಿತಾಂಶ ವಾರದೊಳಗೆ ಕೈಸೇರುತ್ತಿದೆ’ ಎಂದರು.

ದಕ್ಷಿಣಾ ಆಫ್ರಿಕಾ ಪ್ರಜೆ– ಸೋಂಕಿನ ವಿವರ

- ಕೋವಿಡ್ ಇಲ್ಲದ ಪ್ರಮಾಣಪತ್ರದೊಂದಿಗೆ ದಕ್ಷಿಣ ಆಫ್ರಿಕಾದಿಂದ ಬಂದಿದ್ದ ವ್ಯಕ್ತಿ.
- ನ.20ರಂದು ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಗಂಟಲ ದ್ರವದ ಮಾದರಿ ಸಂಗ್ರಹ
- ಕೋವಿಡ್ ದೃಢಪಟ್ಟಿದ್ದರಿಂದ ಹೋಟೆಲ್‌ನಲ್ಲಿ ಪ್ರತ್ಯೇಕವಾಸಕ್ಕೆ ಸ್ಥಳೀಯ ಪಿಎಚ್‌ಸಿ ವೈದ್ಯರ ಸೂಚನೆ
- ಜೀನೋಮ್ ಸೀಕ್ವೆನ್ಸಿಂಗ್‌ಗೆ ನ.22ರಂದು ವ್ಯಕ್ತಿಯ ಮಾದರಿ ರವಾನೆ
- ಖಾಸಗಿ ಪ್ರಯೋಗಾಲಯದಲ್ಲಿ ನ.23ರಂದು ಮತ್ತೊಮ್ಮೆ ಕೋವಿಡ್ ಪರೀಕ್ಷೆ
- ಕೋವಿಡ್ ಇಲ್ಲದಿರುವುದು ಪರೀಕ್ಷೆಯಲ್ಲಿ ದೃಢ
- ವ್ಯಕ್ತಿಯ ನೇರ ಸಂಪರ್ಕಕ್ಕೆ ಬಂದಿದ್ದ 24 ಮಂದಿಗೂ ಕೋವಿಡ್ ಇಲ್ಲದಿರುವುದು ಪರೀಕ್ಷೆಯಲ್ಲಿ ದೃಢ
- ವ್ಯಕ್ತಿಯ ಪರೋಕ್ಷ ಸಂಪರ್ಕಕ್ಕೆ ಬಂದ 240 ಮಂದಿಯ ಮಾದರಿ ಸಂಗ್ರಹ– ಯಾರಲ್ಲೂ ಸೋಂಕು ಕಾಣಿಸಿಲ್ಲ
- ನ.27ರಂದು ಹೋಟೆಲ್‌ನಿಂದ ಕ್ಯಾಬ್ ಮೂಲಕ ಮಧ್ಯರಾತ್ರಿ 12.34ಕ್ಕೆ ವಿಮಾನನಿಲ್ದಾಣ ತಲುಪಿ, ಅಲ್ಲಿಂದ ದುಬೈಗೆ ಪ್ರಯಾಣಿಸಿದ ವ್ಯಕ್ತ

ಸಂಕ್ಷಿಪ್ತ ಸುದ್ದಿ

ಸೇನೆಯ ಸಿಬ್ಬಂದಿಗೆ ಮುಂದಿನ ವರ್ಷ ನೂತನ ಸಮವಸ್ತ್ರ?

ನವದೆಹಲಿ (ಪಿಟಿಐ): ಹವಾಮಾನದ ಏರಿಳಿತವನ್ನು ಎದುರಿಸಲು ಪೂರಕವಾದ ಹೊಸ ಸಮವಸ್ತ್ರವನ್ನು ಸೇನೆ ತನ್ನ ಸಿಬ್ಬಂದಿಗೆ ಮುಂದಿನ ವರ್ಷದಿಂದ ಜಾರಿಗೊಳಿಸುವ ಸಂಭವವಿದೆ.

ಮಣ್ಣು ಮತ್ತು ಹಸಿರು ಬಣ್ಣ ಮಿಶ್ರಣದ ಸಮವಸ್ತ್ರವನ್ನು, ಸಿಬ್ಬಂದಿ ಕಾರ್ಯಕ್ಷೇತ್ರದ ಭೌಗೋಳಿಕ ಸ್ವರೂಪ ಹಾಗೂ ಹವಾಮಾನ ಸ್ಥಿತಿಯನ್ನು ದೃಷ್ಟಿಯಲ್ಲಿ ಇರಿಸಿಕೊಂಡು ರೂಪಿಸಲಾಗಿದೆ.

ಡಿಜಿಟಲ್ ಕಣ್ಗಾವಲಿಗೂ ಸುಲಭವಾಗಿ ನಿಲುಕದ, ಮೇಲ್ನೋಟಕ್ಕೆ ಸಿಬ್ಬಂದಿ ಇರುವಿಕೆಯನ್ನು ಗುರುತಿಸಲಾಗದ ಈ ಸಮವಸ್ತ್ರವನ್ನು ಜ.15 ರಂದು ನಡೆಯುವ ಸೇನಾ ದಿನದ ಪಥಸಂಚಲನದಲ್ಲಿ ಪ್ರದರ್ಶಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ವಾಂಖೆಡೆ ಕ್ರೀಡಾಂಗಣದಲ್ಲಿ ಭಾರತ–ನ್ಯೂಜಿಲೆಂಡ್ ಎರಡನೇ ಟೆಸ್ಟ್ ಇಂದಿನಿಂದ

ಕೊಹ್ಲಿ–ದ್ರಾವಿಡ್ 'ಜೊತೆಯಾಟ'ಕ್ಕೆ ಮುನ್ನುಡಿ



ವಿರಾಟ್ ಕೊಹ್ಲಿ

ಮುಂಬೈ: ದೀರ್ಘ ಕಾಲದ ವಿಶ್ರಾಂತಿಯ ನಂತರ ವಿರಾಟ್ ಕೊಹ್ಲಿ ಶುಕ್ರವಾರ ಕಣಕ್ಕೆ ಮರಳುತ್ತಿದ್ದಾರೆ. ಇದೇ ಮೊದಲ ಬಾರಿಗೆ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅವರ ಮಾರ್ಗದರ್ಶನದಲ್ಲಿ ತಂಡವನ್ನು ಮುನ್ನಡೆಸಲಿದ್ದಾರೆ.

ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯಲಿರುವ ನ್ಯೂಜಿಲೆಂಡ್ ವಿರುದ್ಧದ ಎರಡನೇ ಟೆಸ್ಟ್‌ನಲ್ಲಿ ಗೆದ್ದವರಿಗೆ ಸರಣಿ ಕಿರೀಟ ಒಲಿಯಲಿದೆ. ಆದ್ದರಿಂದ ಈ ಪಂದ್ಯವು ಎರಡೂ ತಂಡಗಳಿಗೆ ಮಹತ್ವದ್ದಾಗಿದೆ. ಮೊದಲ ಪಂದ್ಯದಲ್ಲಿ ರೋಚಕ ಡ್ರಾ ಸಾಧಿಸುವಲ್ಲಿ ಯಶಸ್ವಿಯಾದ ಕೇನ್ ವಿಲಿಯಮ್ಸನ್ ಬಳಗವು ಆತಿಥೇಯರಿಂದ ಗೆಲುವು ಕಸಿದುಕೊಂಡಿತ್ತು. ವಿಶ್ವ ಚಾಂಪಿಯನ್ ತಂಡಕ್ಕೆ ತಕ್ಕಂತೆ ಆಡಿತ್ತು.

ಇದೀಗ ಕೊಹ್ಲಿ ಎದುರು ಇರುವ ಪ್ರಮುಖ ಸವಾಲೆಂದರೆ, ಬ್ಯಾಟಿಂಗ್ ಕ್ರಮಾಂಕವನ್ನು ಬಲಿಷ್ಠಗೊಳಿಸುವಂತಹ ತಂಡವನ್ನು ಕಣಕ್ಕಿಳಿಸುವುದಾಗಿದೆ. ಅಲ್ಲದೇ ಹವಾಮಾನ ವೈಪರಿತ್ಯದಿಂದಾಗಿ ಕಳೆದ ಕೆಲವು ದಿನಗಳಿಂದ ಮಳೆ ಸುರಿಯುತ್ತಿರುವ 'ಮಹಾನಗರಿ'ಯ ವಾತಾವರಣವೂ ಆಟಗಾರರಿಗೆ ಕೂಡ ಕಠಿಣ ಸವಾಲೊಡ್ಡಲಿದೆ. ಪಂದ್ಯ ನಡೆಯುವ ಐದು ದಿನಗಳಲ್ಲಿ ಬಹುತೇಕ ಮಳೆ ಬರುವ ಮುನ್ಸೂಚನೆಯೂ ಇದೆ.

ಕಾನ್ಪುರ ಪಂದ್ಯದಲ್ಲಿ ಪದಾರ್ಪಣೆ ಮಾಡಿದ್ದ ಶ್ರೇಯಸ್ ಅಯ್ಯರ್ ಮೊದಲ ಇನಿಂಗ್ಸ್‌ನಲ್ಲಿ ಶತಕ ಮತ್ತು ಎರಡನೆಯದ್ದರಲ್ಲಿ ಅರ್ಧಶತಕ ಬಾರಿಸಿ ಮಿಂಚಿದ್ದರು. ಇದರಿಂದಾಗಿ ಅವರು ತಮ್ಮ ತವರು ಅಂಗಳದಲ್ಲಿ ಆಡುವ ಅವಕಾಶ ಪಡೆಯುವುದು ಖಚಿತ. ಆದರೆ ವಿರಾಟ್ ಕೊಹ್ಲಿ ಕಣಕ್ಕಿಳಿಯುತ್ತಿರುವುದರಿಂದ ಸತತ ವೈಫಲ್ಯ ಅನುಭವಿಸುತ್ತಿರುವ ಮಯಂಕ್ ಅಗರವಾಲ್, ಚೇತೇಶ್ವರ್ ಪೂಜಾರ ಮತ್ತು ಅಜಿಂಕ್ಯ ರಹಾನೆ ಅವರಲ್ಲಿ ಒಬ್ಬರು ಸ್ಥಾನ ಬಿಟ್ಟುಕೊಡಬೇಕಾಗಬಹುದು. 2021ರಲ್ಲಿಯೇ ಸತತ 12 ಪಂದ್ಯಗಳಲ್ಲಿ ರಹಾನೆ ವೈಫಲ್ಯ ಅನುಭವಿಸಿದ್ದಾರೆ. ಕೊಹ್ಲಿ ಕೂಡ ಕಳೆದ ಎರಡು ವರ್ಷಗಳಲ್ಲಿ ಮೂರಂಕಿ ಮೊತ್ತ ಗಳಿಸಿಲ್ಲ.

ಮೊದಲ ಟೆಸ್ಟ್‌ನಲ್ಲಿ ಅರ್ಧಶತಕ ಬಾರಿಸಿದ್ದ ಶುಭಮನ್ ಗಿಲ್ ಸ್ಥಾನ ಉಳಿಸಿಕೊಳ್ಳುವುದು ಬಹುತೇಕ ಖಚಿತ. ಮಯಂಕ್ ಮತ್ತೊಂದು ಅವಕಾಶ ಗಿಟ್ಟಿಸಿದರೆ, ರಹಾನೆ ಅಥವಾ ಪೂಜಾರ ಬೆಂಚ್ ಕಾಯಬೇಕಾಗಬಹುದು. ಹೋದ ಪಂದ್ಯದಲ್ಲಿ ಉತ್ತಮವಾಗಿ ಬ್ಯಾಟಿಂಗ್ ಮಾಡಿದ್ದ ವೃದ್ಧಿಮಾನ್ ಸಹಾ ಕತ್ತುನೋವಿನಿಂದಾಗಿ ಕೀಪಿಂಗ್ ಮಾಡಿರಲಿಲ್ಲ. ಅವರ ಬದಲಿಗೆ ಕೀಪಿಂಗ್ ಮಾಡಿದ್ದ ಶ್ರೀಕರ್ ಭರತ್ ಚುರುಕಿನ ಆಟದಿಂದ ಗಮನ ಸೆಳೆದಿದ್ದರು. ಸಹಾ ಫಿಟ್ ಆಗದಿದ್ದರೆ ಭರತ್ ಕಣಕ್ಕಿಳಿಯುವ ಸಾಧ್ಯತೆ ಇದೆ. ಬೌಲಿಂಗ್ ವಿಭಾಗದಲ್ಲಿ ಇಶಾಂತ್ ಬದಲು ಸಿರಾಜ್ ಸ್ಥಾನ ಪಡೆಯಬಹುದು.

ಹಸಿರು ಹೆಚ್ಚಾಗಿ ಕಾಣುತ್ತಿರುವ ವಾಂಖೆಡೆ ಕ್ರೀಡಾಂಗಣದ ಪಿಚ್ ವೇಗಿಗಳಿಗೆ ನೆರವು ನೀಡುವ ಸಾಧ್ಯತೆಯನ್ನೂ ಅಲ್ಲಗಳೆಯುವಂತಿಲ್ಲ. ಆದ್ದರಿಂದ ಕೇನ್ ವಿಲಿಯಮ್ಸನ್ ಈ ಬಾರಿ ನೀಲ್ ವಾಗ್ನರ್ ಅವರನ್ನು ಕಣಕ್ಕಿಳಿಸುವ ನಿರೀಕ್ಷೆ ಇದೆ. ಇದರಿಂದಾಗಿ ವಿಲ್ ಸೊಮರ್‌ವಿಲ್ ಬೆಂಚ್ ಕಾಯಬೇಕಾಗಬಹುದು.

ತಂಡದ ಸೋಲು ತಪ್ಪಿಸಿದ್ದ ಯುವಪ್ರತಿಭೆ ರಚಿನ್ ರವೀಂದ್ರ ಮುಂಬೈನಲ್ಲಿ ಆಡುವುದು ಖಚಿತ. ಟಾಮ್ ಲಥಾಮ್ ಮತ್ತು ವಿಲ್ ಯಂಗ್ ಮತ್ತೊಮ್ಮೆ ಭಾರತದ ಸ್ಪಿನ್ ಶಕ್ತಿಗೆ ಸವಾಲೊಡ್ಡಲು ಸಿದ್ಧರಾಗಿದ್ದಾರೆ.

> ಈಗ ಇರುವ ವಾತಾವರಣಕ್ಕೆ ಅನುಗುಣವಾಗಿ ತಂಡದಲ್ಲಿ ಮೂರನೇ ಮಧ್ಯಮವೇಗಿಯನ್ನು ಕಣಕ್ಕಿಳಿಸಬೇಕಾಗಬಹುದು
> **ವಿರಾಟ್ ಕೊಹ್ಲಿ** ಭಾರತ ತಂಡದ ನಾಯಕ

> ವಾಂಖೆಡೆ ಕ್ರೀಡಾಂಗಣದ ಪಿಚ್ ಮೊದಲ ದಿನ ಸ್ವಿಂಗ್‌ಗೆ ಹೆಚ್ಚು ನೆರವು ನೀಡಲಿದೆ. ಉಷ್ಣಾಂಶ ಕಡಿಮೆ ಇರುವುದರಿಂದ ಪರಿಣಾಮಕಾರಿ ಬೌಲಿಂಗ್ ಸಾಧ್ಯವಾಗುವ ನಿರೀಕ್ಷೆ ಇದೆ
> **ಟಿಮ್ ಸೌಥಿ** ನ್ಯೂಜಿಲೆಂಡ್ ಬೌಲರ್



ರಾಹುಲ್ ದ್ರಾವಿಡ್



ನ್ಯೂಜಿಲೆಂಡ್ ತಂಡದ ನಾಯಕ ಕೇನ್ ವಿಲಿಯಮ್ಸನ್ –ಎಎಫ್‌ಪಿ ಚಿತ್ರ

ಐದು ವರ್ಷಗಳ ನಂತರ ಟೆಸ್ಟ್

ವಾಂಖೆಡೆ ಕ್ರೀಡಾಂಗಣದಲ್ಲಿ ಐದು ವರ್ಷಗಳ ನಂತರ ಟೆಸ್ಟ್ ಪಂದ್ಯ ನಡೆಯಲಿದೆ.

2016ರಲ್ಲಿ ಭಾರತ ಮತ್ತು ಇಂಗ್ಲೆಂಡ್ ತಂಡಗಳ ನಡುವಣ ಟೆಸ್ಟ್ ಪಂದ್ಯ ನಡೆದಿತ್ತು. ಅದರಲ್ಲಿ ಆತಿಥೇಯ ತಂಡವು 36 ರನ್‌ಗಳಿಂದ ಜಯಿಸಿತ್ತು.

1975ರಲ್ಲಿ ಇಲ್ಲಿ ನಡೆದಿದ್ದ ಮೊದಲ ಪಂದ್ಯದಲ್ಲಿ ಭಾರತ ಮತ್ತು ವೆಸ್ಟ್ ಇಂಡೀಸ್ ಮುಖಾಮುಖಿಯಾಗಿದ್ದವು.

ವಾಂಖೆಡೆಯಲ್ಲಿ ಭಾರತ ಸಾಧನೆ

ಪಂದ್ಯಗಳು	ಜಯ	ಸೋಲು	ಡ್ರಾ
25	11	7	7

ಮುಖ್ಯಾಂಶಗಳು

- ಎರಡು ವರ್ಷಗಳಿಂದ ಶತಕ ಗಳಿಸದ ವಿರಾಟ್ ಕೊಹ್ಲಿ
- ರಹಾನೆಗೆ ಸತತ 12 ಪಂದ್ಯಗಳಲ್ಲಿ ಬ್ಯಾಟಿಂಗ್ ವೈಫಲ್ಯ
- ಕಿವೀಸ್ ಬಳಗದಲ್ಲಿ ನೀಲ್ ವಾಗ್ನರ್‌ಗೆ ಸ್ಥಾನ ಸಾಧ್ಯತೆ

'ದಕ್ಷಿಣ ಆಫ್ರಿಕಾ ಪ್ರವಾಸ: ರಾಹುಲ್–ಬಿಸಿಸಿಐ ಮಾತುಕತೆ'

ಇದೇ ತಿಂಗಳು ದಕ್ಷಿಣ ಆಫ್ರಿಕಾಕ್ಕೆ ಭಾರತವು ಕ್ರಿಕೆಟ್ ಪ್ರವಾಸ ಕೈಗೊಳ್ಳಲಿದೆ. ಆದರೆ, ಆ ದೇಶದಲ್ಲಿ ಕೋವಿಡ್ –19ರ ಹೊಸ ತಳಿ ಒಮೈಕ್ರಾನ್ ಹಾವಳಿ ಹೆಚ್ಚಾಗಿರುವುದರಿಂದ ಪ್ರವಾಸದ ಕುರಿತು ಮರುಚಿಂತನೆ ನಡೆಸಲಾಗುತ್ತಿದೆ. ಈ ಕುರಿತು ಕೋಚ್ ರಾಹುಲ್ ದ್ರಾವಿಡ್ ಸಂಬಂಧಿತರೊಂದಿಗೆ ಸಮಾಲೋಚನೆ ನಡೆಸುತ್ತಿದ್ದಾರೆ ಎಂದು ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಹೇಳಿದ್ದಾರೆ.

'ಬಿಸಿಸಿಐನೊಂದಿಗೆ ಮಾತುಕತೆ ನಡೆಯುತ್ತಿದೆ. ಇನ್ನೊಂದೆರಡು ದಿನಗಳಲ್ಲಿ ಸ್ಪಷ್ಟತೆ ದೊರೆಯಲಿದೆ' ಎಂದು ಹೇಳಿದರು.

ತಂಡಗಳು

ಭಾರತ: ವಿರಾಟ್ ಕೊಹ್ಲಿ (ನಾಯಕ), ಶುಭಮನ್ ಗಿಲ್, ಮಯಂಕ್ ಅಗರವಾಲ್, ಚೇತೇಶ್ವರ್ ಪೂಜಾರ, ಅಜಿಂಕ್ಯ ರಹಾನೆ, ಶ್ರೇಯಸ್ ಅಯ್ಯರ್, ಸೂರ್ಯಕುಮಾರ್ ಯಾದವ್, ವೃದ್ಧಿಮಾನ್ ಸಹಾ (ವಿಕೆಟ್‌ಕೀಪರ್), ಕೆ.ಎಸ್. ಭರತ್ (ವಿಕೆಟ್‌ಕೀಪರ್), ಆರ್. ಅಶ್ವಿನ್, ರವೀಂದ್ರ ಜಡೇಜ, ಅಕ್ಷರ್ ಪಟೇಲ್, ಇಶಾಂತ್ ಶರ್ಮಾ, ಮೊಹಮ್ಮದ್ ಸಿರಾಜ್, ಉಮೇಶ್ ಯಾದವ್, ಪ್ರಸಿದ್ಧ ಕೃಷ್ಣ.

ನ್ಯೂಜಿಲೆಂಡ್: ಕೇನ್ ವಿಲಿಯಮ್ಸನ್ (ನಾಯಕ), ಟಾಮ್ ಲಥಾಮ್, ವಿಲ್ ಯಂಗ್, ಕೇನ್ ವಿಲಿಯಮ್ಸನ್, ರಾಸ್ ಟೇಲರ್, ಹೆನ್ರಿ ನಿಕೋಲ್ಸ್, ಟಾಮ್ ಬ್ಲಂಡೆಲ್ (ವಿಕೆಟ್‌ಕೀಪರ್), ಕೈಲ್ ಜೆಮಿಸನ್, ಟಿಮ್ ಸೌಥಿ, ನೀಲ್ ವಾಗ್ನರ್, ಎಜಾಜ್ ಪಟೇಲ್, ವಿಲ್ ಸೊಮರ್‌ವಿಲ್, ರಚಿನ್ ರವೀಂದ್ರ, ಡೆರಿಲ್ ಮಿಚೆಲ್, ಮಿಚೆಲ್ ಸ್ಯಾಂಟನರ್.

ಪಂದ್ಯ ಆರಂಭ: ಬೆಳಿಗ್ಗೆ 9.30, ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಮಹಿಳಾ ಸ್ಕೋರರ್ ಜೋಡಿ

ಶುಕ್ರವಾರ ನಡೆಯುವ ಪಂದ್ಯದಲ್ಲಿ ಮಾಧ್ಯಮ ಬಾಕ್ಸ್‌ನಲ್ಲಿ ಇಬ್ಬರು ಮಹಿಳಾ ಸ್ಕೋರರ್‌ಗಳು ಕಾರ್ಯನಿರ್ವಹಿಸಲಿದ್ದಾರೆ.

ಕ್ಷಮಾ ಸೇನ್ ಮತ್ತು ಸುಷ್ಮಾ ಸಾವಂತ್ ಅವರು ಟೆಸ್ಟ್‌ನಲ್ಲಿ ಸ್ಕೋರಿಂಗ್ ಮಾಡಲಿದ್ದಾರೆ. 'ಇದೇ ಮೊದಲ ಬಾರಿಗೆ ಇಬ್ಬರು ಮಹಿಳೆಯರು ಟೆಸ್ಟ್ ಪಂದ್ಯದ ಸ್ಕೋರಿಂಗ್ ಮಾಡಲಿದ್ದಾರೆ' ಎಂದು ಮುಂಬೈ ಕ್ರಿಕೆಟ್ ಸಂಸ್ಥೆಯ ಸೀನಿಯರ್ ಸ್ಕೋರರ್ ತಿಳಿಸಿದ್ದಾರೆ.

ಎಚ್‌ಎಫ್‌ಸಿ– ಜೆಎಫ್‌ಸಿ ಪಂದ್ಯ ಡ್ರಾ

ಬ್ಯಾಂಬೊಲಿಮ್: ಹೈದರಾಬಾದ್ ಎಫ್‌ಸಿ (ಎಚ್‌ಎಫ್‌ಸಿ) ಮತ್ತು ಜೆಮ್ಶೆಡ್‌ಪುರ ಎಫ್‌ಸಿ (ಜೆಎಫ್‌ಸಿ) ನಡುವಣ ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯವು ಡ್ರಾನಲ್ಲಿ ಅಂತ್ಯವಾಯಿತು.

ಅಥ್ಲೆಟಿಕ್ಸ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಜೆಮ್ಶೆಡ್‌ಪುರ ತಂಡದ ಗ್ರೇಗ್ ಸ್ಟೀವರ್ಟ್ 41ನೇ ನಿಮಿಷದಲ್ಲಿ ಗೋಲು ದಾಖಲಿಸಿದರು. ಹೈದರಾಬಾದ್ ಪರ ಬಾರ್ತೊಲೊಮಿವ್ ಒಗ್ಬೆಚೆ 57ನೇ ನಿಮಿಷದಲ್ಲಿ ಗಳಿಸಿದ ಗೋಲು ಸಮಬಲಕ್ಕೆ ಕಾರಣವಾಯಿತು.

ವಾಸ್ಕೊದಲ್ಲಿ ಶುಕ್ರವಾರ ನಡೆಯುವ ಪಂದ್ಯದಲ್ಲಿ ಚೆನ್ನೈಯಿನ್ ಎಫ್‌ಸಿ ಮತ್ತು ಎಸ್‌ಸಿ ಈಸ್ಟ್ ಬೆಂಗಾಲ್ ಮುಖಾಮುಖಿಯಾಗಲಿವೆ.

ಟೆನಿಸ್ ಟೂರ್ನಿ: ಮೇಘನಾ, ಅರಿಹಂತ್‌ಗೆ ಪ್ರಶಸ್ತಿ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಿಹಂತ್ ಕೌಲ್ ಹಾಗೂ ಮೇಘನಾ ಜಿ.ಡಿ. ಅವರು ಎಐಟಿಎ ಸಿಎಸ್3 14 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ್ದಾರೆ.

ಅಮೋಘ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ನಡೆದ ಟೂರ್ನಿಯ ಬಾಲಕರ ವಿಭಾಗದ ಫೈನಲ್‌ನಲ್ಲಿ ಗುರುವಾರ ಅರಿಹಂತ್ 6-3, 6-4ರಿಂದ ಯಶ್ ಪಂಚಾಕ್ಷರಿ ಅವರ ಸವಾಲು ಮೀರಿದರು.

ಬಾಲಕಿಯರ ವಿಭಾಗದ ಮೂರು ಸೆಟ್‌ಗಳ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಮೇಘನಾ 4-6, 6-2, 6-4ರಿಂದ ಅರ್ಜಾನ್ ಖೊರಾಕಿವಾಲ ಅವರನ್ನು ಮಣಿಸಿದರು.



ಪ್ರಶಸ್ತಿಗಳೊಂದಿಗೆ ಮೇಘನಾ ಜಿ.ಡಿ. ಮತ್ತು ಅರಿಹಂತ್ ಕೌಲ್

ದಕ್ಷಿಣ ಆಫ್ರಿಕಾ ದೇಶಿ ಟೂರ್ನಿ ಮುಂದಕ್ಕೆ

ಜೊಹಾನ್ಸ್‌ಬರ್ಗ್ (ಪಿಟಿಐ): ಕೋವಿಡ್ –19ರ ಒಮೈಕ್ರಾನ್ ತಳಿಯ ಪ್ರಸರಣದಿಂದಾಗಿ ದಕ್ಷಿಣ ಆಫ್ರಿಕಾದಲ್ಲಿ ಜನಜೀವನ ಅಸ್ತವ್ಯಸ್ತವಾಗಿದೆ. ಇದರ ಪರಿಣಾಮವು ಕ್ರೀಡಾ ಚಟುವಟಿಕೆಗಳ ಮೇಲೆಯೂ ಆಗಿದೆ.

ಅದರಿಂದಾಗಿ ದೇಶಿ ಕ್ರಿಕೆಟ್ ಟೂರ್ನಿಗಳನ್ನು ಅನಿರ್ದಿಷ್ಟಾವಧಿಯವರೆಗೆ ಮುಂದೂಡಲಾಗಿದೆ.

ಇದರಿಂದಾಗಿ ಇದೇ ತಿಂಗಳು 17ರಿಂದ ಇಲ್ಲಿ ಆರಂಭವಾಗಬೇಕಿದ್ದ ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಣ ಕ್ರಿಕೆಟ್ ಸರಣಿ ಕೂಡ ರದ್ದಾಗುವ ಸಾಧ್ಯತೆ ಕಾಣುತ್ತಿದೆ.

'ದೇಶಿ ಟೂರ್ನಿಯ ಎಲ್ಲ ಮೂರು ಸರಣಿಗಳನ್ನು, ರೌಂಡ್ 4, ದ್ವಿತೀಯ ಡಿವಿಷನ್ ಸಿಎಸ್ ಎ 4 ನಾಲ್ಕುದಿನಗಳ ಪಂದ್ಯಗಳ ದೇಶಿ ಟೂರ್ನಿಗಳನ್ನು ಮುಂದೂಡಲಾಗಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಪ್ರಶಸ್ತಿಗಳೊಂದಿಗೆ (ಎಡದಿಂದ) ಸಮ್ಯಕ್ ಕಶ್ಯಪ್, ಎಂ.ಕಲ್ಯೆವನನ್, ಮರಿಯಾ ರೋನಿ ಮತ್ತು ದೇಶ್ನಾ ಎಂ. ವಂಶಿಕಾ

ಟಿಟಿ: ಮರಿಯಾ, ಕಲ್ಯೆವನನ್‌ಗೆ ಕಿರೀಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮರಿಯಾ ರೋನಿ ಮತ್ತು ಎಂ. ಕಲ್ಯೆವನನ್ ಅವರು ಡಾ. ರಾಮಯ್ಯ ಸ್ಮಾರಕ ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಮಹಿಳೆ ಮತ್ತು ಪುರುಷರ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದ್ದಾರೆ.

ಮಲ್ಲೇಶ್ವರಂ ಸಂಸ್ಥೆಯ ಆವರಣದಲ್ಲಿ ನಡೆದ ಟೂರ್ನಿಯ ಮಹಿಳಾ ಸಿಂಗಲ್ಸ್ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಮರಿಯಾ ರೋನಿ 11-4, 11-6, 11-6, 6-11, 6-11, 7-11, 11-6ರಿಂದ ಎ. ಸಂಯುಕ್ತಾ ಅವರನ್ನು ಸೋಲಿಸಿದರು.

ಪುರುಷರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಕಲ್ಯೆವನನ್ 11–9, 11–4, 9–11, 15–13, 8–11, 8–11, 11–6ರಿಂದ ಪಿ.ವಿ.ಶ್ರೀಕಾಂತ್ ಕಶ್ಯಪ್ ಎದುರು ಗೆದ್ದರು. 17 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ದೇಶ್ನಾ ಎಂ. ವಂಶಿಕಾ ಅವರಿಗೆ ಪ್ರಶಸ್ತಿ ಒಲಿಯಿತು. ಫೈನಲ್ ಪಂದ್ಯದಲ್ಲಿ ಅವರು 11–3, 11–6, 11–9, 11–9ರಿಂದ ಸಹನಾ ಮೂರ್ತಿ ಅವರನ್ನು ಸೋಲಿಸಿದರು.

19 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಸಮ್ಯಕ್ ಕಶ್ಯಪ್ 9–11, 11–9, 11–4, 12–10, 11–8ರಿಂದ ಪಿ.ವಿ.ಶ್ರೀಕಾಂತ್ ಕಶ್ಯಪ್ ಎದುರು ಗೆದ್ದು ಪ್ರಶಸ್ತಿಗೆ ಮುತ್ತಿಟ್ಟರು. ನಾನ್ ಮೆಡಲ್ಸ್ ವಿಭಾಗದಲ್ಲಿ ಪ್ರಶಸ್ತಿಯೂ ಸಮ್ಯಕ್ ಅವರ ಮುಡಿಗೇರಿತು. ಫೈನಲ್ ಪಂದ್ಯದಲ್ಲಿ ಸಮ್ಯಕ್ 11, 7, 11–4, 11–6ರಿಂದ ವಿ.ಜಿ. ವಿಭಾಸ್ ವಿರುದ್ಧ ಗೆದ್ದರು.

ಪ್ಯಾನ್ ಸಂಖ್ಯೆ ಅಪ್ಡೇಟ್ ಮಾಡಲು ಎಲ್‌ಐಸಿ ಸೂಚನೆ

ನವದೆಹಲಿ (ಪಿಟಿಐ): ಐಪಿಒಗೆ ಸಜ್ಜಾಗುತ್ತಿರುವ ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ತನ್ನ ವಿಮಾ ಗ್ರಾಹಕರಿಗೆ ಪ್ಯಾನ್ ಸಂಖ್ಯೆ ಅಪ್ಡೇಟ್ ಮಾಡುವಂತೆ ತಿಳಿಸಿದೆ. ಇದರಿಂದಾಗಿ ಎಲ್‌ಐಸಿ ವಿಮೆ ಹೊಂದಿರುವವರಿಗೆ ಐಪಿಒ ಪ್ರಕ್ರಿಯೆಯಲ್ಲಿ ಮೀಸಲು ಕೋಟಾ ಅಡಿಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗಲಿದೆ.

ನಿಗಮವು ಐಪಿಒ ಮೂಲಕ ಮಾರಾಟ ಮಾಡಲಿರುವ ಷೇರುಗಳಲ್ಲಿ ಶೇಕಡ 10ರವರೆಗೆ ಷೇರುಗಳನ್ನು ವಿಮೆ ಹೊಂದಿರುವವರಿಗೆ ಮೀಸಲು ಇರಿಸಲಾಗುತ್ತದೆ. ಡಿಮ್ಯಾಟ್ ಖಾತೆ ಹೊಂದಿಲ್ಲದವರು, ತಮ್ಮದೇ ಖರ್ಚಿನಲ್ಲಿ ಡಿಮ್ಯಾಟ್ ಖಾತೆ ತೆರೆಯಬಹುದು ಎಂದು ಕೂಡ ಎಲ್‌ಐಸಿ ತಿಳಿಸಿದೆ.

ಬೌನ್ಸ್ ಇನ್ಫಿನಿಟಿ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿಚಕ್ರ ವಾಹನಗಳನ್ನು ಬಾಡಿಗೆ ಆಧಾರದಲ್ಲಿ ಒದಗಿಸುವ 'ಬೌನ್ಸ್' ಕಂಪನಿಯು ವಿದ್ಯುತ್ ಚಾಲಿತ (ಇ.ವಿ.) ದ್ವಿಚಕ್ರ ವಾಹನ ತಯಾರಿಕಾ ಕ್ಷೇತ್ರವನ್ನು ಪ್ರವೇಶಿಸಿದ್ದು ತನ್ನ ಮೊದಲ ಇ.ವಿ. ದ್ವಿಚಕ್ರ ವಾಹನ 'ಇನ್ಫಿನಿಟಿ ಇ1'ಅನ್ನು ಗುರುವಾರ ಪರಿಚಯಿಸಿದೆ. ಇದರ ಎಕ್ಸ್ ಷೋರೂಂ ಬೆಲೆ ಕರ್ನಾಟಕದಲ್ಲಿ ₹ 68,999 ಆಗಿರಲಿದೆ.

'ಸ್ವಂತ ಇ.ವಿ. ಸ್ಕೂಟರ್ ಮಾತ್ರ ಸಾಕು, ಸ್ವಂತ ಬ್ಯಾಟರಿ ಬೇಡ' ಎನ್ನುವವರು ಕರ್ನಾಟಕದಲ್ಲಿ ₹ 45,099 ಪಾವತಿಸಿ (ಎಕ್ಸ್ ಷೋರೂಂ ಬೆಲೆ) ಸ್ಕೂಟರ್ ತಮ್ಮದಾಗಿಸಿಕೊಳ್ಳಬಹುದು. ಅವರು ತಿಂಗಳ ಚಂದಾ ಪಾವತಿಸಿ (ತಿಂಗಳಿಗೆ ₹ 1,249), ಬ್ಯಾಟರಿಯನ್ನು ಬಾಡಿಗೆ ಆಧಾರದಲ್ಲಿ ಪಡೆದುಕೊಳ್ಳಬೇಕು. ಬ್ಯಾಟರಿಯನ್ನು ಒಂದು ಬಾರಿ ಪೂರ್ತಿಯಾಗಿ ಚಾರ್ಜ್ ಮಾಡಿದರೆ, ಗರಿಷ್ಠ 85 ಕಿ.ಮೀ. ಪ್ರಯಾಣಿಸಬಹುದು. ಬ್ಯಾಟರಿ ಚಾರ್ಜ್ ಮಾಡಲು 4–5 ತಾಸು ಸಮಯ ಬೇಕು.

ಬ್ಯಾಟರಿಯನ್ನು ಸ್ಕೂಟರ್‌ನಿಂದ ಬೇರ್ಪಡಿಸಿ, ಮನೆಯಲ್ಲಿನ ಮಾಮೂಲಿ ಪ್ಲಗ್ ಪಾಯಿಂಗ್‌ಗೆ ಚಾರ್ಜರ್ ಅಳವಡಿಸಿ ಚಾರ್ಜ್ ಮಾಡಿಕೊಳ್ಳಬಹುದು. ಈ ವಾಹನವು ಗಂಟೆಗೆ ಗರಿಷ್ಠ 65 ಕಿ.ಮೀ. ವೇಗದಲ್ಲಿ ಚಲಿಸಬಲ್ಲದು. ನಿಂತ ಸ್ಥಿತಿಯಿಂದ ಗಂಟೆಗೆ 45 ಕಿ.ಮೀ. ವೇಗವನ್ನು ತಲುಪಲು ಕೇವಲ ಎಂಟು ಸೆಕೆಂಡ್‌ಗಳು ಸಾಕು ಎಂದು 'ಬೌನ್ಸ್' ಹೇಳಿದೆ.

'ಬ್ಯಾಟರಿಯನ್ನು ಸ್ಕೂಟರ್‌ನಿಂದ ಬೇರ್ಪಡಿಸಿ ಮನೆಯೊಳಗೇ ಚಾರ್ಜ್ ಮಾಡಿಕೊಳ್ಳುವ ಹಾಗೂ ಬ್ಯಾಟರಿಯನ್ನು ಸ್ವಾಪಿಂಗ್ ಕೇಂದ್ರಗಳಲ್ಲಿ ಬದಲಾಯಿಸಿಕೊಳ್ಳುವ ಅವಕಾಶ ಒದಗಿಸುವ ಮೊದಲ ಕಂಪನಿ ನಮ್ಮದು' ಎಂದು ಬೌನ್ಸ್ ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ವಿವೇಕಾನಂದ ಹಳ್ಳೆಕೆರೆ ತಿಳಿಸಿದರು.

ಈ ವಾಹನವು ಕೆಂಪು, ಕಪ್ಪು, ಬಿಳಿ, ಮತ್ತು ಬೂದು ಬಣ್ಣಗಳಲ್ಲಿ ಲಭ್ಯವಿರಲಿದೆ. ಆನ್‌ಲೈನ್ ಮೂಲಕ (bounceinfinity.com) ಅಥವಾ ಕಂಪನಿಯ ಡೀಲರ್‌ಗಳ ಮೂಲಕ ₹ 499 ಪಾವತಿಸಿ ಸ್ಕೂಟರ್ ಬುಕ್ ಮಾಡಬಹುದು. ಗ್ರಾಹಕರಿಗೆ ಮಾರ್ಚ್ ಮಧ್ಯಭಾಗದಿಂದ ಸ್ಕೂಟರ್ ಲಭ್ಯವಾಗಲಿದೆ ಎಂದು ವಿವೇಕಾನಂದ ಹೇಳಿದರು.




ಬೌನ್ಸ್ ಇನ್ಫಿನಿಟಿ ಇ1

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈಂಡ್)	₹1310 (1310)
ಸೋಯಾ (ರಿಫೈಂಡ್)	₹1205 (1215)
ಸೂರ್ಯಕಾಂತಿ (ರಿಫೈಂಡ್)	₹1260 (1280)
ಪಾಮೋಲಿನ್	₹1172 (1179)

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,166
ಇಂದಿನ ಅಂತ್ಯ	17,401
▲	235
ದಿನದ ಗರಿಷ್ಠ	17,420

ವಿನಿಮಯ ದರ

$ ಡಾಲರ್	75.03
£ ಪೌಂಡ್	99.88
€ ಯುರೊ	84.93
¥ ಯೆನ್ (100ಕ್ಕೆ)	66

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹455
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹457

ಜಿಡಿಪಿ ಅಂಕಿ–ಅಂಶ, ಜಿಎಸ್‌ಟಿ ಸಂಗ್ರಹ ಹೆಚ್ಚಳದ ಪ್ರಭಾವ

ಎರಡನೇ ದಿನವೂ ಸೆನ್ಸೆಕ್ಸ್, ನಿಫ್ಟಿ ಏರಿಕೆ

ಮುಂಬೈ (ಪಿಟಿಐ): ದೇಶದ ಆರ್ಥಿಕ ಬೆಳವಣಿಗೆಯ ಗತಿಯನ್ನು ಸೂಚಿಸುವ ಜಿಎಸ್‌ಟಿ ಸಂಗ್ರಹ ಮೊತ್ತ, ಜಿಡಿಪಿ ಬೆಳವಣಿಗೆ ಪ್ರಮಾಣ ಮತ್ತು ತಯಾರಿಕಾ ವಲಯದ ಚಟುವಟಿಕೆ ಪ್ರಮಾಣದ ಹೆಚ್ಚಳವು ದೇಶದ ಷೇರುಪೇಟೆಗಳಲ್ಲಿ ಸತತ ಎರಡನೇ ದಿನವೂ ಸಕಾರಾತ್ಮಕ ವಹಿವಾಟು ನಡೆಯುವಂತೆ ಮಾಡಿದವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 776 ಅಂಶ ಏರಿಕೆ ಕಂಡು 58,461 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 235 ಅಂಶ ಹೆಚ್ಚಾಗಿ 17,401ಕ್ಕೆ ತಲುಪಿತು. ದಿನದ ವಹಿವಾಟಿನಲ್ಲಿ ಎಚ್‌ಡಿಎಫ್‌ಸಿ ಷೇರು ಮೌಲ್ಯ ಶೇ 3.92ರಷ್ಟು ಗರಿಷ್ಠ ಏರಿಕೆ ಕಂಡಿತು.

ಜಾಗತಿಕ ಮಾರುಕಟ್ಟೆಗಳಲ್ಲಿ ವಹಿವಾಟು ಇಳಿಮುಖವಾಗಿದ್ದರೂ ದೇಶದಲ್ಲಿ ಜಿಡಿಪಿ ಬೆಳವಣಿಗೆ ವೃದ್ಧಿ, ತಯಾರಿಕಾ ವಲಯದ ಉತ್ತಮ ಬೆಳವಣಿಗೆಯಂತಹ ಅಂಶಗಳು ದೇಶಿ ಷೇರುಪೇಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆಯುವಂತೆ ಮಾಡಿದವು. ಐ.ಟಿ., ಹಣಕಾಸು ಮತ್ತು ಲೋಹ ವಲಯದ ಷೇರುಗಳ ಉತ್ತಮ ಗಳಿಕೆಯಿಂದಾಗಿ ಸೂಚ್ಯಂಕಗಳು ಏರಿಕೆ ಕಂಡವು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಏಷ್ಯಾದಲ್ಲಿ ಶಾಂಘೈ ಮತ್ತು ಟೋಕಿಯೊ ಷೇರುಪೇಟೆಗಳಲ್ಲಿ ವಹಿವಾಟು ಇಳಿಕೆ ಕಂಡಿದ್ದರೆ, ಹಾಂಗ್‌ಕಾಂಗ್ ಮತ್ತು ಸೋಲ್‌ನಲ್ಲಿ ವಹಿವಾಟು ಸಕಾರಾತ್ಮಕ ಅಂತ್ಯ ಕಂಡಿದೆ.

ಎರಡು ದಿನಗಳಲ್ಲಿ ಸೂಚ್ಯಂಕಗಳ ಏರಿಕೆ

1,396 ಅಂಶ ಬಿಎಸ್‌ಇ ಸೆನ್ಸೆಕ್ಸ್

418 ಅಂಶ ಎನ್‌ಎಸ್‌ಇ ನಿಫ್ಟಿ

ಮುಖ್ಯಾಂಶಗಳು

- ಬಿಎಸ್‌ಇ ಮಿಡ್ ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 1.12ರವರೆಗೆ ಏರಿಕೆ
- ರೂಪಾಯಿ ಮೌಲ್ಯ 12 ಪೈಸೆ ಇಳಿಕೆ
- ಬ್ರೆಂಟ್ ಕಚ್ಚಾ ತೈಲ ದರ ಶೇ 2.41ರಷ್ಟು ಹೆಚ್ಚಳ

ಹೂಡಿಕೆದಾರರ ಸಂಪತ್ತು ವೃದ್ಧಿ

ಎರಡು ದಿನಗಳ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ಮೌಲ್ಯವು ₹ 5.35 ಲಕ್ಷ ಕೋಟಿಯಷ್ಟು ವೃದ್ಧಿಯಾಗಿದೆ. ಇದರಿಂದಾಗಿ ಷೇರುಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯವು ₹ 262.52 ಲಕ್ಷ ಕೋಟಿಗೆ ಏರಿಕೆ ಆಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	500-550
ನಡುಗೋಲು	600-650
ರಾಶಿ	700-800
ರಾಶಿ ಉತ್ತಮ	800-900
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	750-850
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	510
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-42500
ಹಳತು	46000-52500
ಕುಮಟ	
ಚಿಪ್ಪು	24499-43869
ಕೋಕ	19019-36099
ಹಳೆಚಾಲಿ	48449-49509
ಹೊಸಚಾಲಿ	36101-41689
ಕುಂದಾಪುರ	
ಹಳೆಚಾಲಿ	50000-51500
ಹೊಸಚಾಲಿ	37500-43500
ಪುತ್ತೂರು	
ಹೊಸತು	27500-43500
ಕಾರ್ಕಳ	
ಹೊಸತು	38000-43500
ಹಳತು	45000-51500
ಸಿದ್ದಾಪುರ	
ಬಿಳಿಗೋಟು	31099-39299
ಚಾಲಿ	44099-50309
ಕೋಕ	28899-38469
ಹೊಸಚಾಲಿ	33129-40699
ಕೆಂಪುಗೋಟು	30099-35000
ರಾಶಿ	45099-48499
ತಟ್ಟಿಬೆಟ್ಟೆ	31111-43799
ಶಿರಸಿ	
ಬೆಟ್ಟೆ	37109-45508
ಬಿಳಿಗೋಟು	24299-44509
ಚಾಲಿ	35029-50668
ರಾಶಿ	40069-50999
ಯಲ್ಲಾಪುರ	
ಬಿಳಿಗೋಟು	32122-42511
ಚಾಲಿ	43561-50620
ಕೋಕ	22500-34299
ಕೆಂಪುಗೋಟು	34699-36197
ರಾಶಿ	47969-51519
ತಟ್ಟಿಬೆಟ್ಟೆ	38969-44869
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	47700-53969
ಗೊಬರಲು	16169-38899
ರಾಶಿ	45000-47169
ಸರಕು	52239-75009
ಸಾಗರ	
ಬಿಳಿಗೋಟು	18989-39209
ಚಾಲಿ	36099-48099
ಕೋಕ	25200-37699
ಕೆಂಪುಗೋಟು	33899-38899
ರಾಶಿ	38144-47329
ಸಿಪ್ಪೆಗೋಟು	5690-26820
ರಾಮನಗರ ರೇಷ್ಮೆ	
ಮಿಶ್ರತಳಿ	330-492
ದ್ವಿತಳಿ	356-702

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	14600	14450	232.20ಸೆಂಟ್ಸ್
ಎಸಿ	---	5500	6100	
ಆರ್‌ಪಿ	---	---	---	ಲಂಡನ್
ಆರ್‌ಸಿ	---	---	---	2260 ಡಾಲರ್ಸ್

ಜನವರಿಯಿಂದ ಮಾರುತಿ, ಔಡಿ ಕಾರು ಬೆಲೆ ಹೆಚ್ಚಳ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ, ಔಡಿ ಮತ್ತು ಮರ್ಸಿಡಿಸ್ ಬೆಂಜ್ ಕಂಪನಿಗಳು ಜನವರಿ 1ರಿಂದ ಜಾರಿಗೆ ಬರುವಂತೆ ವಾಹನಗಳ ಬೆಲೆ ಹೆಚ್ಚಳದ ನಿರ್ಧಾರ ಘೋಷಿಸಿವೆ.

ತಯಾರಿಕಾ ವೆಚ್ಚ ಹೆಚ್ಚಳ ಆಗುತ್ತಿರುವ ಕಾರಣ ಜನವರಿ ತಿಂಗಳಿನಿಂದ ತನ್ನ ಎಲ್ಲ ಕಾರುಗಳ ಬೆಲೆ ಹೆಚ್ಚಿಸುವುದಾಗಿ ಮಾರುತಿ ಸುಜುಕಿ ಇಂಡಿಯಾ ಕಂಪನಿಯು ಗುರುವಾರ ಹೇಳಿದೆ. ಬೆಲೆ ಏರಿಕೆಯ ಪ್ರಮಾಣದಲ್ಲಿ ಮಾದರಿಯಿಂದ ಮಾದರಿಗೆ ವ್ಯತ್ಯಾಸ ಇರಲಿದೆ ಎಂದು ಅದು ತಿಳಿಸಿದೆ.

ಉಕ್ಕು, ಅಲ್ಯುಮಿನಿಯಂ, ತಾಮ್ರ ಮತ್ತು ಇತರೆ ಲೋಹಗಳು ಹಾಗೂ ಪ್ಲಾಸ್ಟಿಕ್ ಬೆಲೆಯು ಒಂದು ವರ್ಷದಲ್ಲಿ ಏರಿಕೆ ಕಂಡಿದೆ. ಈ ಕಾರಣದಿಂದಾಗಿ ಬೆಲೆ ಏರಿಕೆ ಮಾಡುವಂತಾಗಿದೆ ಎಂದು ಮಾರುತಿ ಸುಜುಕಿ ಕಂಪನಿಯ ಹಿರಿಯ ಕಾರ್ಯನಿರ್ವಾಹಕ ನಿರ್ದೇಶಕ ಶಶಾಂಕ್ ಶ್ರೀವಾಸ್ತವ ತಿಳಿಸಿದ್ದಾರೆ.

ಕಂಪನಿಯು ಈ ವರ್ಷದಲ್ಲಿ ಈಗಾಗಲೇ ಮೂರು ಬಾರಿ ದರ ಹೆಚ್ಚಳ ಮಾಡಿದೆ. ಜನವರಿಯಲ್ಲಿ ಶೇಕಡ 1.4ರಷ್ಟು, ಏಪ್ರಿಲ್‌ನಲ್ಲಿ ಶೇ 1.6ರಷ್ಟು ಮತ್ತು ಸೆಪ್ಟೆಂಬರ್‌ನಲ್ಲಿ ಶೇ 1.9ರಷ್ಟು ಏರಿಕೆ ಮಾಡಿದೆ.

ಔಡಿ: ಔಡಿ ಕಂಪನಿಯು ಜನವರಿ 1ರಿಂದ ಜಾರಿಗೆ ಬರುವಂತೆ ತನ್ನ ಎಲ್ಲ ಮಾದರಿಗಳ ಬೆಲೆಯನ್ನು ಶೇ 3ರವರೆಗೆ ಹೆಚ್ಚಿಸುವುದಾಗಿ ಹೇಳಿದೆ. ತಯಾರಿಕಾ ವೆಚ್ಚ ಮತ್ತು ಕಾರ್ಯಾಚರಣೆ ವೆಚ್ಚದಲ್ಲಿ ಏರಿಕೆ ಆಗಿರುವುದರಿಂದ ವಾಹನಗಳ ಬೆಲೆ ಏರಿಕೆ ಅನಿವಾರ್ಯವಾಗಿದೆ ಎಂದು ಕಂಪನಿಯು ತಿಳಿಸಿದೆ.

ಬೆಂಜ್: ಮರ್ಸಿಡಿಸ್ ಬೆಂಜ್ ಇಂಡಿಯಾ ಕಂಪನಿ ಸಹ ತಯಾರಿಕಾ ವೆಚ್ಚ ಹೆಚ್ಚಳದ ಕಾರಣ ನೀಡಿ, ಜನವರಿ 1ರಿಂದ ಅನ್ವಯ ಆಗುವಂತೆ ಆಯ್ದ ಮಾದರಿಗಳ ಬೆಲೆಯನ್ನು ಶೇ 2ರವರೆಗೂ ಹೆಚ್ಚಿಸುವುದಾಗಿ ತಿಳಿಸಿದೆ.

ವಾಟ್ಸ್‌ಆ್ಯಪ್‌ನಲ್ಲೂ ಉಬರ್ ಬುಕಿಂಗ್

ನವದೆಹಲಿ (ಪಿಟಿಐ): ವಾಟ್ಸ್‌ಆ್ಯಪ್ ಮೂಲಕವೂ ಉಬರ್ ಆಟೊ, ಕಾರು ಬುಕ್ ಮಾಡಲು ಅನುಕೂಲ ಆಗುವಂತೆ ಉಬರ್ ಮತ್ತು ವಾಟ್ಸ್‌ಆ್ಯಪ್ ಕಂಪನಿಗಳು ಪಾಲುದಾರಿಕೆ ಮಾಡಿಕೊಂಡಿವೆ. ಪ್ರಾಥಮಿಕ ಹಂತದಲ್ಲಿ ಲಖನೌ ನಗರದ ಉತ್ತರ ಭಾಗದಲ್ಲಿ ಇದನ್ನು ಜಾರಿಗೊಳಿಸಲಾಗುವುದು ಎಂದು ಅದು ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

2-12-2021

ಜಾವಾ 70/80(ಹೊಸ)	10250-10300
ಜಾವಾ 80/90(ಹೊಸ)	9950-10000
ದಪ್ಪ ಮಧ್ಯಪ್ರದೇಶ(ಹೊಸ)	9800-9850
ದಪ್ಪ ಗುಜರಾತ್(ಹೊಸ)	9400-9450

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1320 (1320)
ಒಂದು ವಾರದ ಡೆಲಿವರಿ	1315 (1315)
ಸೋಯಾ ಕಚ್ಚಾ	1150 (1155)
ಪಾಮ್ ವಾರದ ಡೆಲಿವರಿ	1170 (1177)
ಸೂರ್ಯಕಾಂತಿ ಎಣ್ಣೆ ಕಚ್ಚಾ	1180 (1190)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	47,300 (47,700)
ಬೆಳ್ಳಿ ಕೆ.ಜಿ	60,700 (62,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರಿಲಯನ್ಸ್ ಕ್ಯಾಪಿಟಲ್ ವಿರುದ್ಧ ದಿವಾಳಿ ಪ್ರಕ್ರಿಯೆಗೆ ಅರ್ಜಿ

ಮುಂಬೈ (ಪಿಟಿಐ): ಸಾಲದ ಸುಳಿಗೆ ಸಿಲುಕಿರುವ ರಿಲಯನ್ಸ್ ಕ್ಯಾಪಿಟಲ್ ಕಂಪನಿ ವಿರುದ್ಧ ಕಾರ್ಪೊರೇಟ್ ದಿವಾಳಿ ಪ್ರಕ್ರಿಯೆ ಆರಂಭಿಸಲು ಭಾರತೀಯ ರಿಸರ್ವ್ ಬ್ಯಾಂಕ್, ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ (ಎನ್‌ಸಿಎಲ್‌ಟಿ) ಮುಂಬೈ ಶಾಖೆಯಲ್ಲಿ ಅರ್ಜಿ ಸಲ್ಲಿಸಿದೆ.

ಅನಿಲ್ ಅಂಬಾನಿ ಒಡೆತನದ ರಿಲಯನ್ಸ್ ಕ್ಯಾಪಿಟಲ್‌ನ ಆಡಳಿತ ಮಂಡಳಿಯನ್ನು ಸೂಪರ್‌ಸೀಡ್ ಮಾಡಿ ಆರ್‌ಬಿಐ ನವೆಂಬರ್ 29ರಂದು ಆದೇಶ ಹೊರಡಿಸಿದೆ.

ಬ್ಯಾಂಕ್ ಆಫ್ ಮಹಾರಾಷ್ಟ್ರದ ಮಾಜಿ ಕಾರ್ಯನಿರ್ವಾಹಕ ನಿರ್ದೇಶಕ ವೈ. ನಾಗೇಶ್ವರ ರಾವ್ ಅವರನ್ನು ಕಂಪನಿಯ ಆಡಳಿತಗಾರ ಆಗಿ ಆರ್‌ಬಿಐ ನೇಮಿಸಿದೆ.

ಕಲಬುರಗಿಯ ಸುಣ್ಣದ ಕಲ್ಲಿನ ಗಣಿಗೆ ಕೇಂದ್ರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಕಲಬುರಗಿ: ಮಳಖೇಡ ರಸ್ತೆಯ ಆದಿತ್ಯನಗರದಲ್ಲಿರುವ ಅಲ್ಟ್ರಾಟೆಕ್‌ನ ರಾಜಶ್ರೀ ಸಿಮೆಂಟ್‌ಗೆ ಸೇರಿದ ರಾಜಶ್ರೀ ಸುಣ್ಣದ ಕಲ್ಲಿನ (ಲೈಮ್ ಸ್ಟೋನ್) ಗಣಿಗೆ ಸುಸ್ಥಿರ ನಿರ್ವಹಣೆಗಾಗಿ ಕೇಂದ್ರ ಗಣಿ ಸಚಿವಾಲಯ ಮತ್ತು ಇಂಡಿಯನ್ ಬ್ಯೂರೊ ಆಫ್ ಮೈನ್ಸ್ 5 ಸ್ಟಾರ್ ಪ್ರಮಾಣಪತ್ರ ನೀಡಿವೆ.

ನವದೆಹಲಿಯಲ್ಲಿ ನಡೆದ ಗಣಿ ಹಾಗೂ ಖನಿಜಗಳ ರಾಷ್ಟ್ರೀಯ ಸಮಾವೇಶದಲ್ಲಿ ಕೇಂದ್ರ ಗಣಿ ಸಚಿವ ಪ್ರಲ್ಹಾದ ಜೋಶಿ ಅವರು ಪ್ರಮಾಣಪತ್ರ ಪ್ರದಾನ ಮಾಡಿದರು.

ಆದಿತ್ಯ ಬಿರ್ಲಾ ಗ್ರೂಪ್‌ನ ಪ್ರಧಾನ ಸಿಮೆಂಟ್ ಕಂಪನಿಯಾಗಿರುವ ಅಲ್ಟ್ರಾಟೆಕ್ ಕರ್ನಾಟಕವಲ್ಲದೇ ಗುಜರಾತ್, ಮಧ್ಯಪ್ರದೇಶ, ಆಂಧ್ರಪ್ರದೇಶ, ಛತ್ತೀಸ್‌ಗಢ ಮತ್ತು ಹಿಮಾಚಲಪ್ರದೇಶ ಸೇರಿ ಒಟ್ಟು 15 ಸುಣ್ಣದ ಕಲ್ಲಿನ ಗಣಿಗಳನ್ನು ಹೊಂದಿದ್ದು, ಎಲ್ಲ ಗಣಿಗಳೂ ಈ ಪ್ರಶಂಸೆಗೆ ಪಾತ್ರವಾಗಿವೆ.

ಇಸ್ರೇಲ್‌ನ ಟೆಲ್ ಅವಿವ್ ಅತ್ಯಂತ ದುಬಾರಿ ನಗರ

ಟೆಲ್ ಅವಿವ್ (ಎಪಿ): ಇಸ್ರೇಲ್‌ನ ಟೆಲ್ ಅವಿವ್ ನಗರವು ವಾಸಿಸಲು ಅತ್ಯಂತ ದುಬಾರಿ ನಗರವಾಗಿ ಹೊರಹೊಮ್ಮಿದೆ ಎಂದು ಎಕನಾಮಿಸ್ಟ್ ಇಂಟೆಲಿಜೆನ್ಸ್ ಯುನಿಟ್ (ಇಐಯು) ತಿಳಿಸಿದೆ.

ಈ ಹಿಂದೆ ಜಗತ್ತಿನ ಐದನೇ ದುಬಾರಿ ನಗರವಾಗಿದ್ದ ಟೆಲ್ ಅವಿವ್, ಈ ಬಾರಿ ಪ್ಯಾರಿಸ್ ಮತ್ತು ಸಿಂಗಪುರದಂತಹ ದುಬಾರಿ ನಗರಗಳನ್ನೂ ಮೀರಿ ಮೊದಲ ಸ್ಥಾನಕ್ಕೇರಿದೆ ಎಂದು ಅದು ಹೇಳಿದೆ.

'ಗುರುದ್ವಾರದಲ್ಲಿ ಫೋಟೊ ಶೂಟ್ ಸಹಜ ಪ್ರಕರಣ'

ಇಸ್ಲಾಮಾಬಾದ್ (ಪಿಟಿಐ): ಕರ್ತಾರ್‌ಪುರದ ಧಾರ್ಮಿಕ ತಾಣ ಗುರುದ್ವಾರ ದರ್ಬಾರ್ ಸಾಹಿಬ್‌ನಲ್ಲಿ ರೂಪದರ್ಶಿ ಒಬ್ಬರು ತಲೆಗೆ ರುಮಾಲು ಧರಿಸದೇ ಫೋಟೊಶೂಟ್ ನಡೆಸಿರುವುದು ಸಹಜ ಪ್ರಕರಣ ಎಂದು ಪಾಕಿಸ್ತಾನ ಹೇಳಿದೆ.

ಭಾರತದ ರಾಯಭಾರಿ ಕಚೇರಿಯ ಹಿರಿಯ ರಾಜತಾಂತ್ರಿಕರನ್ನು ಕರೆಸಿದ್ದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಪಾಕ್‌ನ ಪ್ರತಿಕ್ರಿಯೆಯನ್ನು ತಿಳಿಸಿದೆ.

ವಿಶ್ವ ಟೂರ್ ಫೈನಲ್ಸ್ ಬ್ಯಾಡ್ಮಿಂಟನ್: ಶ್ರೀಕಾಂತ್, ಅಶ್ವಿನಿ–ಸಿಕ್ಕಿಗೆ ಸೋಲು

ನಾಕೌಟ್ ಹಂತಕ್ಕೆ ಲಕ್ಷ್ಯ, ಸಿಂಧು



ಪಿ.ವಿ.ಸಿಂಧು ಆಟದ ವೈಖರಿ– ಪಿಟಿಐ ಚಿತ್ರ

ಬಾಲಿ, ಇಂಡೊನೇಷ್ಯಾ (ಪಿಟಿಐ): ಭಾರತದ ಪಿ.ವಿ.ಸಿಂಧು ಹಾಗೂ ಲಕ್ಷ್ಯ ಸೇನ್ ಅವರು ಬಿಡಬ್ಲ್ಯುಎಫ್ ವಿಶ್ವ ಟೂರ್ ಫೈನಲ್ಸ್ ಬ್ಯಾಡ್ಮಿಂಟನ್ ಟೂರ್ನಿಯ ನಾಕೌಟ್ ಹಂತಕ್ಕೆ ಪ್ರವೇಶಿಸಿದ್ದಾರೆ. ಆದರೆ ಕಿದಂಬಿ ಶ್ರೀಕಾಂತ್, ಅಶ್ವಿನಿ ಪೊನ್ನಪ್ಪ–ಸಿಕ್ಕಿ ರೆಡ್ಡಿ ಸೋಲು ಅನುಭವಿಸಿದ್ದಾರೆ.

ಗುರುವಾರ ನಡೆದ ‘ಎ’ ಗುಂಪಿನ ಮಹಿಳಾ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ, 26 ವರ್ಷದ ಸಿಂಧು 21-10, 21-13ರಿಂದ ಜರ್ಮನಿಯ ವೈವೊನ್ ಲಿ ಅವರನ್ನು ಪರಾಭವಗೊಳಿಸಿದರು. ವಿಶ್ವ ಚಾಂಪಿಯನ್ ಆಟಗಾರ್ತಿಗೆ ಪಂದ್ಯ ಗೆಲ್ಲಲು 31 ನಿಮಿಷಗಳು ಸಾಕಾದವು.

ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ ಸಿಂಧು, ಗುಂಪಿನ ಕೊನೆಯ ಪಂದ್ಯದಲ್ಲಿ ಅಗ್ರಶ್ರೇಯಾಂಕದ, ಥಾಯ್ಲೆಂಡ್ ಆಟಗಾರ್ತಿ ಪಾರ್ನ್‌ಪವೀ ಚೋಚುವೊಂಗ್ ಅವರನ್ನು ಎದುರಿಸುವರು.

‘ಎ’ ಗುಂಪಿನ ಪುರುಷರ ಸಿಂಗಲ್ಸ್ ವಿಭಾಗದ ಎರಡನೇ ಪಂದ್ಯದಲ್ಲಿ ಲಕ್ಷ್ಯ ಸೇನ್ 15–21, 14–21ರಿಂದ ಒಲಿಂಪಿಕ್ ಚಾಂಪಿಯನ್ ವಿಕ್ಟರ್ ಅಕ್ಸೆಲ್ಸೆನ್ ಎದುರು ಸೋಲು ಅನುಭವಿಸಿದರೂ ಸೆಮಿಫೈನಲ್‌ನಲ್ಲಿ ಸ್ಥಾನ ಖಚಿತಪಡಿಸಿಕೊಂಡರು. ಈ ಗುಂಪಿನಲ್ಲಿದ್ದ ಜಪಾನ್‌ನ ಕೆಂಟೊ ಮೊಮೊಟಾ ಮತ್ತು ಡೆನ್ಮಾರ್ಕ್‌ನ ರಾಸ್ಮಸ್ ಗೆಮ್ಕೆ ಗಾಯದ ಕಾರಣ ಟೂರ್ನಿಯಿಂದ ಹಿಂದೆ ಸರಿದರು. ಇದರಿಂದ ಲಕ್ಷ್ಯ ಅವರು ಗುಂಪಿನ ಪಟ್ಟಿಯಲ್ಲಿ ಎರಡನೇ ಸ್ಥಾನ ಗಳಿಸಿದರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 14ನೇ ಸ್ಥಾನದಲ್ಲಿರುವ ಶ್ರೀಕಾಂತ್ ಅವರು ‘ಬಿ’ಗುಂಪಿನ ಪುರುಷರ ಸಿಂಗಲ್ಸ್ ಎರಡನೇ ಸುತ್ತಿನ ಹಣಾಹಣಿಯಲ್ಲಿ 18-21, 7-21ರಿಂದ ಥಾಯ್ಲೆಂಡ್‌ನ ಕುನ್ಲಾವುತ್ ವಿತಿದ್ಸರ್ನ್ ಎದುರು ಎಡವಿದರು. ಇದರೊಂದಿಗೆ ನಾಕೌಟ್ ತಲುಪುವ ಅವರ ಆಸೆ ಬಹುತೇಕ ಕ್ಷೀಣಿಸಿದೆ.

ಇದಕ್ಕೂ ಮೊದಲು ಕರ್ನಾಟಕದ ಅಶ್ವಿನಿ ಪೊನ್ನಪ್ಪ ಮತ್ತು ಎನ್. ಸಿಕ್ಕಿ ರೆಡ್ಡಿ ಜೋಡಿಯು ಮಹಿಳಾ ಡಬಲ್ಸ್ ವಿಭಾಗದಲ್ಲಿ ಸತತ ಎರಡನೇ ಸೋಲು ಅನುಭವಿಸಿದೆ. ಭಾರತದ ಆಟಗಾರ್ತಿಯರು 19-21, 20-22ರಿಂದ ಬಲ್ಗೇರಿಯಾದ ಗೇಬ್ರಿಯೇಲಾ ಸ್ಟೋವಾ ಮತ್ತು ಸ್ಟೆಫಾನಿ ಸ್ಟೋವಾ ಎದುರು ನಿರಾಸೆ ಅನುಭವಿಸಿದರು. ಮುಂದಿನ ಪಂದ್ಯದಲ್ಲಿ ಭಾರತದ ಜೋಡಿಯು ಇಂಗ್ಲೆಂಡ್‌ನ ಕ್ಲೋಯ್ ಬರ್ಚ್ ಮತ್ತು ಲಾರೆನ್ ಸ್ಮಿತ್ ಅವರನ್ನು ಎದುರಿಸುವರು.

ಹಿಂದೆ ಸರಿದ ಸಾತ್ವಿಕ್–ಚಿರಾಗ್: ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮೊಣಕಾಲು ನೋವಿನಿಂದ ಬಳಲುತ್ತಿರುವ ಹಿನ್ನೆಲೆಯಲ್ಲಿ ಅವರು ಮತ್ತು ಡಬಲ್ಸ್ ಜೊತೆಗಾರ ಚಿರಾಗ್ ಶೆಟ್ಟಿ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ. ’ಎ’ ಗುಂಪಿನ ಮೊದಲ ಪಂದ್ಯದಲ್ಲಿ ಸೋಲು ಅನುಭವಿಸಿದ್ದ ಈ ಜೋಡಿಯು ಎರಡನೇ ಸುತ್ತಿನ ಪಂದ್ಯದಲ್ಲಿ ಗುರುವಾರ ಕಣಕ್ಕಿಳಿಯಲಿಲ್ಲ. ಇದರಿಂದಾಗಿ ಇಂಡೊನೇಷ್ಯಾದ ಮಾರ್ಕಸ್ ಫೆರ್ನಾಲ್ಡಿ ಗಿಡಿಯೊನ್ ಮತ್ತು ಕೆವಿನ್ ಸುಕಮುಲ್ಜೊ ಜೋಡಿಗೆ ವಾಕ್‌ಓವರ್ ಲಭಿಸಿತು.

ಬಿಡಬ್ಲ್ಯುಎಫ್ ವಿರುದ್ಧ ಮಥಾಯಿಸ್ ಕಿಡಿ

ನವದೆಹಲಿ (ಪಿಟಿಐ): ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್‌ನ (ಬಿಡಬ್ಲ್ಯುಎಫ್) ವೇಳಾಪಟ್ಟಿಯ ಕುರಿತು ಭಾರತ ತಂಡದ ಡಬಲ್ಸ್ ವಿಭಾಗದ ಮಾಜಿ ಕೋಚ್ ಮಥಾಯಿಸ್ ಬೋ ಕಿಡಿಕಾರಿದ್ದಾರೆ. ಬೆನ್ನುಬೆನ್ನಿಗೆ ಟೂರ್ನಿಗಳನ್ನು ಆಯೋಜಿಸಿದ್ದರಿಂದ ಆಟಗಾರರು ಗಾಯಗೊಳ್ಳುತ್ತಿದ್ದಾರೆ ಎಂದು ಅವರು ಪ್ರತಿಪಾದಿಸಿದ್ದಾರೆ. ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿರುವ, ಜಪಾನ್‌ನ ಕೆಂಟೊ ಮೊಮೊಟಾ ಸೇರಿದಂತೆ 40 ಆಟಗಾರರು ಗಾಯಗೊಂಡಿದ್ದಾರೆ. ಕಳೆದ 10 ವಾರಗಳಲ್ಲಿ ಎಂಟು ಟೂರ್ನಿಗಳನ್ನು ನಡೆಸಲಾಗಿದೆ’ ಎಂದು ಟ್ವಟರ್‌ನಲ್ಲಿ ಅವರು ಬರೆದುಕೊಂಡಿದ್ದಾರೆ.

ಲಾಂಗ್ ಜಂಪ್ ತಾರೆಗೆ ಒಲಿದ ವಿಶ್ವಮಟ್ಟದ ಗೌರವ


ಅಂಜು ಬಾಬಿ ಜಾರ್ಜ್

ಮೊನಾಕೊ (ಪಿಟಿಐ): ಭಾರತದ ದಿಗ್ಗಜ ಅಥ್ಲೀಟ್ ಅಂಜು ಬಾಬಿ ಜಾರ್ಜ್ ಅವರಿಗೆ ವರ್ಷದ ಮಹಿಳೆ ಪ್ರಶಸ್ತಿಗಾಗಿ ವಿಶ್ವ ಅಥ್ಲೆಟಿಕ್ಸ್ (ಡಬ್ಲ್ಯುಎ) ಆಯ್ಕೆ ಮಾಡಿದೆ. ಈ ಗೌರವಕ್ಕೆ ಪಾತ್ರರಾದ ಭಾರತದ ಮೊದಲ ಅಥ್ಲೀಟ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಪ್ರತಿಭಾನ್ವಿತ ಅಥ್ಲೀಟ್‌ಗಳ ಬೆಳವಣಿಗೆಗೆ ಮಹತ್ವದ ಪಾತ್ರ ವಹಿಸುವ ಮತ್ತು ಲಿಂಗಸಮಾನತೆಯನ್ನು ಪ್ರತಿಪಾದಿಸುವ ಅಥ್ಲೀಟ್‌ಗಳಿಗೆ ಈ ಪ್ರಶಸ್ತಿ ನೀಡಲಾಗುತ್ತದೆ. 44 ವರ್ಷದ ಅಂಜು 2003ರ ವಿಶ್ವ ಅಥ್ಲೆಟಿಕ್ಸ್‌ನ ಮಹಿಳೆಯರ ಲಾಂಗ್ ಜಂಪ್ ವಿಭಾಗದಲ್ಲಿ ಕಂಚಿನ ಪದಕ ಜಯಿ ಸಿದ್ದರು.

‘ಮಾಜಿ ಲಾಂಗ್ ಜಂಪ್ ಅಥ್ಲೀಟ್ ಅಂಜು ಅವರು ಭಾರತದ ಕ್ರೀಡಾಪಟುಗಳಿಗೆ ಸ್ಫೂರ್ತಿಯಾಗಿದ್ದಾರೆ. 2016ರಲ್ಲಿ ಅವರು ಬಾಲಕಿಯರಿಗೆ ತರಬೇತಿ ನೀಡಲು ಅಕಾಡೆಮಿ ಆರಂಭಿಸಿದ್ದಾರೆ. ಇಲ್ಲಿ ತರಬೇತಿ ಪಡೆದ ಕ್ರೀಡಾಪಟುವೊಬ್ಬರು ಈಚೆಗೆ 20 ವರ್ಷದೊಳಗಿನ ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಪದಕ ಜಯಿಸಿದ್ದಾರೆ’ ಎಂದು ವಿಶ್ವ ಅಥ್ಲೆಟಿಕ್ಸ್ ಪ್ರಕಟಣೆಯಲ್ಲಿ ತಿಳಿಸಿದೆ.

4 ತಿಂಗಳುಗಳ ಹಿಂದೆ ನಡೆದಿದ್ದ 20 ವರ್ಷದೊಳಗಿನವರ ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದ ಶೈಲಿ ಸಿಂಗ್, ಅಂಜು ಅವರ ಬೆಂಗಳೂರಿನ ಅಕಾಡೆಮಿಯಲ್ಲಿ ತರಬೇತಿ ಪಡೆದವರು.

2019ರಲ್ಲಿ ಭಾರತದ ಅಥ್ಲೆಟಿಕ್ಸ್ ದಂತಕತೆ ಪಿ.ಟಿ. ಉಷಾ ಅವರಿಗೆ ವಿಶ್ವ ಅಥ್ಲೆಟಿಕ್ಸ್ ಸಂಸ್ಥೆಯು ‘ವೆಟರನ್ ಪಿನ್–2019’ ಪುರಸ್ಕಾರ ನೀಡಿತ್ತು. ಕ್ರೀಡೆಯ ಬೆಳವಣಿಗೆಯಲ್ಲಿ ಅವರು ನೀಡಿದ್ದ ಕಾಣಿಕೆಗಾಗಿ ಈ ಗೌರವ ನೀಡಲಾಗಿತ್ತು.

‘ಪ್ರತಿದಿನ ಬೆಳಿಗ್ಗೆ ದೇಶದ ಕ್ರೀಡೆಗೆ ನಾನೇನು ಮರಳಿಸಬಲ್ಲೆ ಎಂದು ಯೋಚಿಸುತ್ತೇನೆ. ಯುವ ಪ್ರತಿಭೆಗಳನ್ನು ಪ್ರೋತ್ಸಾಹಿಸುತ್ತೇನೆ. ಅದರಿಂದ ಕೆಲವು ಬಾಲಕಿಯರು ಉನ್ನತ ಸಾಧನೆ ಮಾಡುತ್ತಿರುವುದು ಸಂತಸದ ವಿಷಯ. ನನ್ನ ಪ್ರಯತ್ನ, ಪರಿಶ್ರಮಗಳನ್ನು ಗುರುತಿಸಿರುವ ಅಥ್ಲೆಟಿಕ್ಸ್ ಸಂಸ್ಥೆಗೆ ಧನ್ಯವಾದಗಳು’ ಎಂದು ಅಂಜು ಟ್ವೀಟ್ ಮಾಡಿದ್ದಾರೆ.

ಕೇರಳದ ಅಂಜು 2004ರ ಅಥೆನ್ಸ್ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದರು. ಹೋದ ವರ್ಷ ಅವರು ಭಾರತ ಅಥ್ಲೆಟಿಕ್ಸ್ ಫೆಡರೇಷನ್ನ ಸೀನಿಯರ್ ಉಪಾಧ್ಯಕ್ಷೆಯಾಗಿ ನೇಮಕವಾಗಿದ್ದರು.

ಒಲಿಂಪಿಕ್ಸ್ ಚಾಂಪಿಯನ್ ಜಮೈಕಾದ ಎಲೈನ್ ಥಾಮ್ಸನ್ ಹೆರಾ ಮತ್ತು ನಾರ್ವೆಯ ಕಾರ್ಸ್ಟನ್ ವಾರ್‌ಹೋಮ್ ಅವರಿಗೆ ವರ್ಷದ ಅಥ್ಲೀಟ್ ಪುರಸ್ಕಾರ ಪ್ರದಾನ ಮಾಡಲಾಗಿದೆ.

‘ಹಾಕಿ ತಂಡಗಳಿಗೆ ₹65 ಕೋಟಿ ವೆಚ್ಚ’

ನವದೆಹಲಿ (ಪಿಟಿಐ): ಭಾರತ ಪುರುಷರ ಹಾಕಿ ತಂಡಗಳಿಗಾಗಿ ಕಳೆದ ಐದು ವರ್ಷಗಳಲ್ಲಿ ₹ 65 ಕೋಟಿ ವೆಚ್ಚ ಮಾಡಿರುವುದಾಗಿ ಭಾರತ ಸರ್ಕಾರ ಗುರುವಾರ ತಿಳಿಸಿದೆ.

ಹಾಕಿ ಕ್ರೀಡೆಗಾಗಿ 20 ಮೂಲಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಅಂದಾಜು ₹ 104 ಕೋಟಿ ವಿನಿಯೋಗಿಸಲಾಗಿದೆ.

‘ತರಬೇತಿ ಶಿಬಿರ, ಟೂರ್ನಿಗಳು ಮತ್ತು ಇತರೆ ವೆಚ್ಚಗಳಿಗಾಗಿ ಈ ಹಣವನ್ನು ಬಳಸಲಾಗಿದೆ. ಪುರುಷರ ಸೀನಿಯರ್ ಹಾಕಿ ತಂಡಕ್ಕಾಗಿ ₹ 45.05 ಕೋಟಿ ಮತ್ತು ₹ 20.23 ಕೋಟಿ ಜೂನಿಯರ್ ಹಾಕಿ ತಂಡಕ್ಕೆ ಖರ್ಚು ಮಾಡಲಾಗಿದೆ’ಎಂದು ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಅವರು ರಾಜ್ಯಸಭೆಗೆ ನೀಡಿರುವ ಲಿಖಿತ ದಾಖಲೆಯಲ್ಲಿ ವಿವರಿಸಿದ್ದಾರೆ.


ಬೆಂಗಳೂರಿನ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಹಾಕಿ ಕ್ರೀಡಾಂಗಣದಲ್ಲಿ ರಾಜ್ಯ ಪೊಲೀಸ್ ಇಲಾಖೆ ಆಯೋಜಿಸಿದ ಅಖಿಲ ಭಾರತ ಪೊಲೀಸ್ ಹಾಕಿ ಚಾಂಪಿಯನ್‌ಷಿಪ್‌ಅನ್ನು ಗೃಹಮಂತ್ರಿ ಆರಗ ಜ್ಞಾನೇಂದ್ರ ಉದ್ಘಾಟಿಸಿದರು. ಭಾರತ ಮಹಿಳಾ ಹಾಕಿ ತಂಡದ ನಾಯಕಿ ರಾಣಿ ರಾಂಪಾಲ್, ಡಿಜಿಪಿ ಪ್ರವೀಣ್ ಸೂದ್, ಗೃಹ ಕಾರ್ಯದರ್ಶಿ (ಹೆಚ್ಚುವರಿ) ಡಾ. ರಜನೀಶ್ ಗೋಯಲ್, ಎಡಿಜಿಪಿ ಅಲೋಕ್ ಕುಮಾರ್, ಚಿತ್ರನಟ ಸುದೀಪ್, ಭಾರತ ಹಾಕಿ ತಂಡದ ಮಾಜಿ ನಾಯಕ ಅರ್ಜುನ್ ಹಾಲಪ್ಪ ಇದ್ದರು– ಪ್ರಜಾವಾಣಿ ಚಿತ್ರ

ಬೆಂಗಳೂರು ರೇಸ್

ವಾಚ್‌ಮೈಸ್ಟಾರ್ಸ್ ಗೆಲ್ಲುವ ನಿರೀಕ್ಷೆ

ಪ್ರಿನ್ಸ್ ಆರ್ಡೆಂಟ್ ಟ್ರೋಫಿ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ವಾಚ್‌ಮೈಸ್ಟಾರ್ಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಂಡಂತಿದೆ:

1ನೇ ರೇಸ್: ಸಾಕ್ರಮೆಂಟ್ 5, ಡಿವೈನ್ ಬ್ಲೆಸಿಂಗ್ಸ್ 7, ಡಿಫೈನಿಂಗ್ ಪವರ್ 1
2ನೇ ರೇಸ್: ಇಂಪಲ್ಲಿಂಗ್ ಪವರ್ 3, ಅಮಾಲ್ಫಿ ಸನ್‌ರೈಸ್ 1, ಅರೇಬಿಯನ್ ಮಿಸ್ಟ್ 4
3ನೇ ರೇಸ್: ಆಂಟಿಬಸ್ 1, ಪಿಸ್ಸಾರೋ 4
4ನೇ ರೇಸ್: ವಾಚ್‌ಮೈಸ್ಟಾರ್ಸ್ 3, ಕ್ವಾಸಿರ್ 1, ಪ್ರೈಸ್‌ಲೆಸ್ ಗೋಲ್ಡ್ 5
5ನೇ ರೇಸ್: ಫೋರ್ ವ್ಹೀಲ್ ಡ್ರೈವ್ 6, ಸ್ಮಿತ್ಸೋನಿಯನ್ 5, ಚೈನ್ ಆಫ್ ಥಾಟ್ಸ್ 9
6ನೇ ರೇಸ್: ಗ್ಯಾರಮಾಂಡ್ 4, ಜ್ಯಾಕ್ ರಿಯಾನ್ 2, ಆರ್ಲಿಟ್ 3

ಉತ್ತಮ ಬೆಟ್: ಗ್ಯಾರಮಾಂಡ್

ಜಾಕ್‌ಪಾಟ್	1ನೇಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ಹಾಲಿ ಚಾಂಪಿಯನ್ ಭಾರತಕ್ಕೆ ಕಠಿಣ ಸವಾಲು

ಜೂನಿಯರ್ ಹಾಕಿ ವಿಶ್ವಕಪ್ ಸೆಮಿಫೈನಲ್ ಇಂದು: ಜರ್ಮನಿ ಎದುರಾಳಿ


ಭಾರತ ಹಾಕಿ ತಂಡದ ತಾಲೀಮು –ಪಿಟಿಐ ಚಿತ್ರ

ಮುಖ್ಯಾಂಶಗಳು
- ಆರು ಬಾರಿ ಪ್ರಶಸ್ತಿ ಗೆದ್ದಿರುವ ಜರ್ಮನಿ
- ಎಂಟರ ಘಟ್ಟದಲ್ಲಿ ಬೆಲ್ಜಿಯಂ ವಿರುದ್ಧ ಜಯಿಸಿದ್ದ ಭಾರತ
- ಸಂಜಯ್, ಹುಂಡಾಲ ಮೇಲೆ ಭರವಸೆ

ಭುವನೇಶ್ವರ್ (ಪಿಟಿಐ): ಆತ್ಮವಿಶ್ವಾಸದ ಉತ್ತುಂಗದಲ್ಲಿರುವ ಹಾಲಿ ಚಾಂಪಿಯನ್ ಭಾರತ ತಂಡವು ಶುಕ್ರವಾರ ನಡೆಯಲಿರುವ ಜೂನಿಯರ್ ಹಾಕಿ ವಿಶ್ವಕಪ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಬಲಾಢ್ಯ ಜರ್ಮನಿ ತಂಡವನ್ನು ಎದುರಿಸಲಿದೆ.

ಕಳಿಂಗ ಕ್ರೀಡಾಂಗಣದಲ್ಲಿ ಪಂದ್ಯವು ನಡೆಯಲಿದೆ. ಆರು ಬಾರಿ ಪ್ರಶಸ್ತಿ ಜಯಿಸಿರುವ ಜರ್ಮನಿಯನ್ನು ಮಣಿಸುವ ಸವಾಲು ಆತಿಥೇಯರ ಮುಂದಿದೆ. ಟೂರ್ನಿಯ ಗುಂಪು ಹಂತದ ಮೊದಲ ಪಂದ್ಯದಲ್ಲಿ ಭಾರತ ತಂಡವು 4–5ರಿಂದ ಫ್ರಾನ್ಸ್ ಎದುರು ಸೋತಿತ್ತು.

ಆದರೆ, ನಂತರದ ಪಂದ್ಯಗಳಲ್ಲಿ ಅಮೋಘ ಆಟವಾಡಿ ನಾಕೌಟ್ ಹಂತ ತಲುಪಿತ್ತು. ಕ್ವಾರ್ಟರ್‌ಫೈನಲ್‌ನಲ್ಲಿ 1–0ಯಿಂದ ಬಲಿಷ್ಠ ಬೆಲ್ಜಿಯಂ ತಂಡವನ್ನು ಮಣಿಸಿತ್ತು. ಯಶದೀಪ್ ಸಿವಾಚ್, ಉಪನಾಯಕ ಸಂಜಯ್ ಕುಮಾರ್ ಮತ್ತು ಶ್ರದ್ಧಾನಂದ ತಿವಾರಿ ಟೂರ್ನಿಯಲ್ಲಿ ಉತ್ತಮವಾಗಿ ಆಡುತ್ತಿದ್ದಾರೆ.


ಗೋಲ್‌ಕೀಪರ್‌ಗಳಾದ ಪ್ರಶಾಂತ್ ಚೌಹಾಣ್ ಮತ್ತು ಪವನ್ ಕೂಡ ಅಮೋಘವಾಗಿ ಆಡಿದ್ದಾರೆ. ಬೆಲ್ಜಿಯಂ ಎದುರಿನ ಪಂದ್ಯದಲ್ಲಿ ಭಾರತದ ಗೋಲ್‌ಕೀಪರ್‌ಗಳ ಆಟವು ರೋಮಾಂಚಕಾರಿಯಾಗಿತ್ತು.

ಪೆನಾಲ್ಟಿ ಕಾರ್ನರ್‌ಗಳಲ್ಲಿ ಸಂಜಯ್, ತಿವಾರಿ, ಅರೈಜಿತ್ ಸಿಂಗ್ ಹುಂಡಾಲ ಮತ್ತು ಅಭಿಷೇಕ್ ಲಾಕ್ರಾ ಕೂಡ ಎದುರಾಳಿಗಳಿಗೆ ಕಠಿಣ ಸವಾಲೊಡ್ಡುವಲ್ಲಿ ಇದುವರೆಗೆ ಸಫಲರಾಗಿದ್ದಾರೆ. ಫ್ರಾನ್ಸ್ ಮತ್ತು ಪೋಲೆಂಡ್ ಎದುರಿನ ಪಂದ್ಯಗಳಲ್ಲಿ ಸಂಜಯ್ ಹ್ಯಾಟ್ರಿಕ್ ಸಾಧನೆ ಮಾಡಿದ್ದಾರೆ. ನಾಯಕ ವಿವೇಕ್ ಸಾಗರ್ ಪ್ರಸಾದ್ ಅವರು ಭಾರತ ಸೀನಿಯರ್ ತಂಡದಲ್ಲಿ ಆಡಿರುವ ಅನುಭವಿ. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಆಡಿದ್ದ ಅನುಭವವನ್ನು ಇಲ್ಲಿ ವಿನಿಯೋಗಿಸುತ್ತಿರುವ ಅವರಿಗೆ ಉತ್ತಮ ಫಲ ದೊರೆಯುತ್ತಿದೆ. ಆದರೆ, ಜರ್ಮನಿ ತಂಡವನ್ನು ಹಗುರವಾಗಿ ಪರಿಗಣಿಸುವಂತಿಲ್ಲ. 2013ರಲ್ಲಿ ಪ್ರಶಸ್ತಿ ಜಯಿಸಿತ್ತು. ಅದರ ನಂತರ ಫೈನಲ್ ಪ್ರವೇಶಿಸಿಲ್ಲ. 2016ರಲ್ಲಿ ಮೂರನೇ ಸ್ಥಾನ ಪಡೆದಿತ್ತು.

‘ಜರ್ಮನಿಯನ್ನು ಕಡೆಗಣಿಸುವಂತಿಲ್ಲ. ಬಹಳ ಒಳ್ಳೆಯ ಆಟಗಾರರು ಇದ್ದಾರೆ. ಅವರ ವೇಗ ಮತ್ತು ಕೌಶಲಪೂರ್ಣ ಆಟಕ್ಕೆ ತಕ್ಕ ಪ್ರತಿತಂತ್ರ ಹೆಣೆಯಬೇಕು’ ಎಂದು ಭಾರತ ತಂಡದ ಕೋಚ್ ಗ್ರಹಾಂ ರೀಡ್ ಹೇಳಿದ್ದಾರೆ.

ಟೂರ್ನಿಯ ಇನ್ನೊಂದು ಸೆಮಿಫೈನಲ್‌ನಲ್ಲಿ ಫ್ರಾನ್ಸ್ ಮತ್ತು ಅರ್ಜೆಂಟಿನಾ ತಂಡಗಳು ಮುಖಾಮುಖಿಯಾಗಲಿವೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್



ಸೌಜನ್ಯಾ ಬಾವಿಸೆಟ್ಟಿ ಆಟದ ಪರಿ– ಪ್ರಜಾವಾಣಿ ಚಿತ್ರ/ಎಸ್‌.ಕೆ.ದಿನೇಶ್

ಐಟಿಎಫ್ ವಿಶ್ವ ಟೆನಿಸ್ ಟೂರ್: ಆಕಾಂಕ್ಷಾ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಟನೇ ಶ್ರೇಯಾಂಕದ ಸಾತ್ವಿಕಾ ಸಮಾ ಅವರಿಗೆ ಸೋಲುಣಿಸಿದ ಆಕಾಂಕ್ಷಾ ನಿಟ್ಟೂರೆ ಐಟಿಎಫ್ ವಿಶ್ವ ಟೆನಿಸ್ ಟೂರ್ ಚಾಂಪಿಯನ್‌ಷಿಪ್‌ನಲ್ಲಿ ಎಂಟರಘಟ್ಟಕ್ಕೆ ಪ್ರವೇಶಿಸಿದರು.

ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ (ಕೆಎಸ್‌ಎಲ್‌ಟಿಎ) ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಮಹಿಳಾ ಸಿಂಗಲ್ಸ್ ಪ್ರೀಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಗುರುವಾರ ಆಕಾಂಕ್ಷಾ 6-4, 2-6, 6-2ರಿಂದ ಅನುಭವಿ ಆಟಗಾರ್ತಿ ಸಾತ್ವಿಕಾ ಸವಾಲು ಮೀರಿದರು.

ಅಗ್ರಶ್ರೇಯಾಂಕದ ಋತುಜಾ ಭೋಸ್ಲೆ ಹಾಗೂ ಮೂರನೇ ಶ್ರೇಯಾಂಕದ ಸೌಜನ್ಯಾ ಬಾವಿಸೆಟ್ಟಿ ಕೂಡ ಕ್ವಾರ್ಟರ್‌ಫೈನಲ್‌ಗೆ ಮುನ್ನಡೆದರು. ಋತುಜಾ 6-3, 6-3ರಿಂದ ವೈಲ್ಡ್‌ಕಾರ್ಡ್ ಪ್ರವೇಶ ಪಡೆದ ರೇಷ್ಮಾ ಮುರಾರಿ ಎದುರು ಗೆದ್ದರೆ, ಸೌಜನ್ಯಾ ಅವರಿಗೆ 6-2, 6-2ರಿಂದ ಸೋಹಾ ಸಾದಿಕ್ ವಿರುದ್ಧ ಗೆಲುವು ಒಲಿಯಿತು.

16ರ ಘಟ್ಟದ ಇನ್ನುಳಿದ ಪಂದ್ಯಗಳಲ್ಲಿ ಪ್ರಾಂಜಲಾ ಯಡಪಲ್ಲಿ 6-3, 6-3ರಿಂದ ಋುಬಾರಾಣಿ ಬ್ಯಾನರ್ಜಿ ಎದುರು, ವೈದೇಹಿ ಚೌಧರಿ 6-3, 6-2ರಿಂದ ಸಾಯಿ ಸಂಹಿತಾ ಚಮರ್ತಿ ವಿರುದ್ಧ, ಕೊರಿಯಾದ ಸೋ ರಾ ಲೀ 6-2, 6-0ರಿಂದ ರಷ್ಯಾದ ಜ್ಲಾಟಾ ಯಂಕೊವ್‌ಸ್ಕಯಾ ವಿರುದ್ಧ, ಶ್ರೀವಲ್ಲಿ ರಶ್ಮಿಕಾ 6-2, 6-1ರಿಂದ ಪ್ರತಿಭಾ ನಾರಾಯಣ್ ಪ್ರಸಾದ್ ಎದುರು, ಪ್ರತ್ಯೂಷಾ ರಾಚಪುಡಿ 2-6, 6-2, 6-4ರಿಂದ ಜಗಮೀತ್ ಕೌರ್ ಗೇವಾರ್ಲ್ ಎದುರು ಜಯ ಸಾಧಿಸಿದರು.

ಸೆಮಿಫೈನಲ್‌ಗೆ ಶರ್ಮದಾ– ಶ್ರಾವ್ಯಾ: ಡಬಲ್ಸ್ ವಿಭಾಗದಲ್ಲಿ ಶರ್ಮದಾ ಬಾಲು– ಶ್ರಾವ್ಯಾ ಶಿವಾನಿ ಚಿಲಕಪುಡಿ 6-4, 6-3ರಿಂದ ಶ್ರೀಯಾ ಅಟ್ಟೂರು– ನಿದಿತ್ರಾ ರಾಜ್‌ಮೋಹನ್ ಎದುರು ಜಯಿಸಿ ನಾಲ್ಕರ ಘಟ್ಟ ತಲುಪಿದರು. ಇನ್ನುಳಿದ ಸೆಮಿಫೈನಲ್ ಪಂದ್ಯಗಳಲ್ಲಿ ವೈದೇಹಿ ಚೌಧರಿ– ಮಿಹಿಕಾ ಯಾದವ್ 6-3, 7-6 (6)ರಿಂದ ಸೋ ರಾ ಲೀ–ಸಾತ್ವಿಕಾ ಸಮಾ ವಿರುದ್ಧ, ಸಾಯಿ ಸಂಹಿತಾ ಚಮರ್ತಿ– ಸೋಹಾ ಸಾದಿಕ್ 6-4, 7-5ರಿಂದ ರಮ್ಯಾ ನಟರಾಜನ್– ಸೌಮ್ಯಾ ವಿಜ್ ವಿರುದ್ಧ, ಸೌಜನ್ಯಾ ಬಾವಿಸೆಟ್ಟಿ– ಋತುಜಾ ಭೋಸ್ಲೆ 6-0, 6-0ರಿಂದ ಹುಮೇರಾ ಬಹ್ರಾಮಸ್– ಶ್ರೀವಲ್ಲಿ ರಶ್ಮಿಕಾ ಎದುರು ಗೆಲುವು ಸಾಧಿಸಿದರು.